ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

| ಸಂಪುಟ ೮೧ | ಅಕ್ಟೋಬರ್ ೧೯೪೩ | ವರ್ಷ ೧೫. ಸಂ. ೭

ಶಿಕ್ಷಣದ ಅಸ್ತಿವಾರವಾವುದು ?

ಹಿಂದೊಂದು ಕಾಲದಲ್ಲಿ ಅಮೇರಿಕೆಯು ಕಾಡು ಜನರ ಬೀಡಾಗಿದ್ದಿತು. ಯುರೋಪವು ಬಟ್ಟೆಯನ್ನರಿಯದ ಶಿಲಾಯುಗದ ಜನಸಮೂಹದ ನಿವಾಸ ವಾಗಿತ್ತು. ಹಿಂದುಸ್ತಾನವೂ ಚೀನವೂ ಸುಧಾರಣೆಯ ಶಿಖರದಲ್ಲಿದ್ದುವು. ಶಿಯಾದ ವಿದ್ಯಾಕಲಾಕೌಶಲ್ಯಗಳು ಮೊದಲು ಯುರೋಪಕ್ಕೂ ಅಲ್ಲಿಂದ ಮೇರಿಕೆಗೂ ಹೋದುವು. ಎತಿಯಾದ ಉನ್ನತಿಗೆ ಮೂಲಕಾರಣವಾಗಿದ್ದ ತ್ಕೋನ್ನತಿಯ ಮಾರ್ಗವನ್ನು ಬಿಟ್ಟ ಆ ಪಾಶ್ಚಿಮಾತ್ಯ ದೇಶಗಳು ಇಂದು ೀರೊಂದು ಬಗೆಯ ಸುಧಾರಣೆಯ ಶಿಖರಕ್ಕೆ ಮುಟ್ಟಿವೆ. ಅವನ್ನನುಸರಿಸಿದ ಪಾನವೂ ಅಹಿಂಸೆಯೇ ಅಸ್ತಿವಾರವಾಗಿರುವ ಬೌದ್ಧ ಧರ್ಮದ ತತ್ವವನ್ನು ಬರೆತು ತನ್ನ ಮೂಲವನ್ನು ಜ್ವಾಲಾಮುಖಿಯ ಗವಿಯಲ್ಲಿ ನೂಂಕಿ ಉಡ್ಡಿ ದಾರಿ ನ್ನು ಹಿಡಿದಿದೆ. ಅವರ ದೃಷ್ಟಿಯಿಂದ ಹಿಂದುಸ್ತಾನ ಚೀನಗಳು ಅವನತಿ ಥದ ತುದಿಯನ್ನು ಕಂಡಿವೆ. ಆದರೆ ಸುಧಾರಣೆಯ ಶಿಖರವನ್ನೇರಿ ನಿಂತಿರುವೆ ಂದು ಹೇಳುವ ಆ ರಾಷ್ಟ್ರಗಳಲ್ಲಿ ನಿಜವಾದ ಶಾಂತಿ-ಸಮಾಧಾನಗಳಿಲ್ಲ. ಶಾಂತಿ-ಸಮಾಧಾನಗಳಿಗೆ ಕಾರಣವಾಗದಿರುವ ಸುಧಾರಣೆಗೆ ಸುಧಾರಣೆಯೆಂಬ ಸರು ಒಪ್ಪುವುದಿಲ್ಲ. ಆದುದರಿಂದ ಶಾಂತಿ-ಸಮಾಧಾನಗಳಿಂದ ಕೂಡಿದ ಗತಿಯನ್ನು ಸಾಧಿಸುವ ಮಾರ್ಗವಾವುದೆಂಬುದನ್ನು ಕಂಡುಕೊಳ್ಳಲು ಆ ೀಶಗಳು ಆತುರಗೊಂಡು ಈಗ ಕಾರ್ಯಾರಂಭಮಾಡಿವೆ.

ಮಾನವಕುಲದ ಉನ್ನತಿಗೆ ಆತ್ಮೋನ್ನತಿಯೇ ಮುಖ್ಯ ಸಾಧನ. ಬಹಿರ್ಮುಖಿಯಾದ ಮಾನವನು ಸುಖಸಮಾಧಾನಗಳನ್ನು ಬಯಸಲು ಹೊರಟರೆ ಮರುಳುಗಾಡಿನ ಮೃಗಜಲದ ಬೆನ್ನಟ್ಟಿ ತನ್ನ ತೃಷೆಯನ್ನು ತಣಿಸಿಕೊಳ್ಳಲು ಯತ್ನಿಸುವ ಮರುಳನಂತೆ ಓಡಿ ಓಡಿ ದಣಿದು ಸಾಯಬೇಕಾಗುವದು. ಮನಸ್ಸು, ಮಾತು, ಕೃತಿ ಈ ಮೂರರ ಶುದ್ಧಿಯೇ ತ್ರಿಕರಣಶುದ್ಧಿ. ಸತ್ಯ, ಅಹಿಂಸೆ, ವಿರಕ್ತಿ ಇವು ಆತ್ಮೋನ್ನತಿಯನ್ನು ಪಡೆದ ಮಾನವನ ಜೀವನದ ತತ್ತ್ವಗಳು. ಭಾರತೀಯ ಸಂಸ್ಕೃತಿಯು ಈ ತತ್ತ್ವಗಳ ಭದ್ರವಾದ ಅಸ್ತಿವಾರದ ಮೇಲೆ ರಚಿತವಾಗಿದ್ದಿತು ಈ ತತ್ತ್ವಾನುಸರಣೆಯು ನಮ್ಮವರಿಗೆ ಪರಂಪರೆಯಿಂದ ಸಾಗಿಬಂದಿದೆ. ಪಾಶ್ಚಿಮಾತ್ಯರು ಬಹಿರ್ಮುಖಿಗಳಾಗಿ ಮುಂದೆ ಸಾಗಿ ಶಾಂತಿ-ಸಮಾಧಾನಗಳ ಕೇಂದ್ರವನ್ನು ಬಿಟ್ಟು ಉತ್ಸಾರಣ ಗತಿಯಲ್ಲಿ ಹೊರಹೊರಗೆ ಸಾಗಿ, ಅಗಾಧಸಾಗರದಲ್ಲಿ ಒಡೆದು ಹೋದ ಹಡಗಿನ ನಾವಿಕರಂತೆ ಈಸಿ ಪಾರಾಗಲು ಹವಣಿಸಿ ಕೈಕಾಲು ಸೋತು ಮಳುಗುತ್ತಿರುವ ಸ್ಥಿತಿಗೆ ಬಂದು ಮುಟ್ಟಿರುವರು. ಧ್ರುವ ತಾರೆಯ ನಸುಬೆಳಕಿನಂತೆ ಶಾಂತಿ-ಸಮಾಧಾನಗಳ ಅಸ್ಪಷ್ಟವಾದ ಭಾವನೆಯೊಂದು ಅವರ ಕಲ್ಪನಾಕಾಶದಲ್ಲಿ ಈಗೀಗ ಮೂಡಿ ಮೂಡದಂತಾಗತೊಡಗಿದೆ. ಅವರಿಂದು ತಮ್ಮ ಪ್ರಗತಿಯೂ ಆ ಪ್ರಗತಿಗೆ ಕಾರಣವಾದ ಶಿಕ್ಷಣ ಕ್ರಮವೂ ಅಸ್ಥಿರವಾದ ಅಸ್ತಿವಾರದ ಮೇಲೆ ಕಟ್ಟಿದ ಕಟ್ಟಡದಂತೆ ಕುಸಿದು ಬಿದ್ದು ಮಾನವಕುಲದ ಅಧೋಗತಿಗೆ ಕಾರಣವಾಗುತ್ತಿದೆಯೆಂಬ ಭಾವನೆಯ ಬೆಳಕನ್ನು ಕಂಡಿದ್ದಾರೆ. ಈ ಕೆಳಗಿನ ಅವತರಣಗಳನ್ನು ನೋಡಿರಿ.

"ಸಮಾಜದ ನೈತಿಕ ಮತ್ತು ದೈವಿಕ ಅಸ್ತಿವಾರವನ್ನು ಕಂಡು ಹಿಡಿಯುವದೇ ಇಂದು ನಮ್ಮ ಮುಂದಿರುವ ಸಮಸ್ಯೆ. ಇಚ್ಛೆ, ಭಾವನೆ, ಮತ್ತು ಸ್ವಭಾವ ಇವುಗಳಲ್ಲಿಯೂ ಬೌದ್ಧಿಕ ಸಂಸ್ಕಾರಕ್ಕೆ ಅನುಗುಣವಾದ ಸಂಸ್ಕಾರವನ್ನು ಹೊಂದಿದ ನೂತನ ಸುಸಂಸ್ಕೃತಿಯುಳ್ಳ ಮಾನವರನ್ನು ಹುಟ್ಟಿಸಿಕೊಂಡ ಹೊರತು ನಮಗೆ ಗತ್ಯಂತರವಿಲ್ಲವಾಗಿದೆ. **ಈ ಬಗೆಯ ನೂತನ ಸಂಸ್ಕೃತಿಯನ್ನು ಹೊಂದಿದ ಹೊಸ ಬಗೆಯ ಮಾನವರನ್ನು ಸೃಷ್ಟಿಸುವದು ಇಂದಿನ ವಿಶ್ವವಿದ್ಯಾನಿಲಯಗಳ ಪ್ರಥಮ ಕರ್ತವ್ಯವಾಗಿದೆ.**"

"ನನ್ಮಾರ್ಗಗಾಮಿಯಾದ ಜಗತ್ತನ್ನು ನಿರ್ಮಿಸುವದಕ್ಕೆ ಅವಶ್ಯವಾಗಿರುವ ಜೀವನ ಕ್ರಮವನ್ನು ಹೊಂದಿರುವ ನಾಗರಿಕರನ್ನು ಒದಗಿಸಿಕೊಡಿರೆಂದು ನಮ್ಮ ರಾಷ್ಟ್ರ ಪುರುಷನು ಇಂದು ನಮ್ಮ ಕಡೆಗೆ ನೋಡುತ್ತಿದ್ದಾನೆ. ನಾವು ನಮ್ಮವರಿಗೆ ಸಂಪೂರ್ಣ ನೈತಿಕ ವಿಕಾಸದ ಮಟ್ಟವನ್ನು ತೋರಿಸಿಕೊಡಬೇಕಾಗಿದೆ. ನಾವು

ಅವರಿಗೆ ಮಾನವನ ಬುದ್ಧಿಮತ್ತೆ ಮತ್ತು ಶಕ್ತಿ ಇವಕ್ಕಿಂತಲೂ ಹಚ್ಚಿನದಾ
ಬೇರೊಂದು ಶಕ್ತಿಯ ಪರಿಚಯ ಮಾಡಿಕೊಡಬೇಕಾಗಿದೆ.''

'' ಇದೇ ಜಗತ್ತಿಗೆ ಬೇಕಾಗಿರುವ ಮೂಲಭೂತ ಶಿಕ್ಷಣವು. ಮಿಕ್ಕ ಎಲ್ಲ
ಶಿಕ್ಷಣಗಳು ಈ ಮೂಲ ಶಿಕ್ಷಣವನ್ನೇ ಅವಲಂಬಿಸುವವು. ಮಾನವ ಕುಲ
ಉದ್ಧಾರಕ್ಕೆ ತಕ್ಕದ್ದೂ ಅಪ್ರತಿಹತವೂ ಆದ ಮಾರ್ಗವನ್ನು ತೋರಿಸಿಕೊಟ್ಟು
ಬುದ್ಧಿಗೂ ಕಲ್ಪನಾಶಕ್ತಿಗೂ ಆವಶ್ಯಕವಿರುವ ಸಾಧನ ಸಾಮಗ್ರಿಗಳನ್ನು
ಹೊಂದಿದ ಹೊಸ ಪೀಳಿಗೆಯು ಹುಟ್ಟಿಬರಲು ಇದರಿಂದ ಸಹಾಯವಾಗುವದು
ಮತ್ತು ಪ್ರತಿ ಮಾನವನೂ ಪ್ರತಿ ರಾಷ್ಟ್ರವೂ ಸುಖ ಸಮಾಧಾನಗಳಿಂದಲೂ
ಶಾಂತಿಯಿಂದಲೂ ಬಾಳಲು ತಕ್ಕದ್ದಾದ ಪರಿಸ್ಥಿತಿಯು ಇದರಿಂದ ತಾನಾಗಿ
ಉಂಟಾಗುವದು.''

'' ಪ್ರತಿ ಗಂಡುಸು ಹೆಂಗುಸು ಇಲ್ಲವೆ ಕೂಸು ಇವರೆಲ್ಲರಿಗೂ ದೇವರಿಂದ
ಯೋಗ್ಯ ಸಂಸ್ಕಾರವು ಬರುವದು. ಅದೇ ನಿಜವಾದ ಶಿಕ್ಷಣವು.'' ಎಂಬುದೇ
ಆಧುನಿಕ ಶಿಕ್ಷಣ ಪ್ರಪಂಚದಲ್ಲಿ ಹೊಸ ಬಗೆಯ ಕ್ರಾಂತಿಯನ್ನು ಕೋರುವ
ಒಂದು ಪಂಗಡದವರ ಅಭಿಪ್ರಾಯವು.

'' ಯಾವ ದೇಶದಲ್ಲಿ ಮಕ್ಕಳ ಶಿಕ್ಷಣಕ್ಕೆ ಈಶ್ವರೀ ಪ್ರೇರಣೆಯೇ ಅಸ್ತಿವಾರ
ವೆಂದು ತಿಳಿಯಲ್ಪಡುವದೋ ಆ ದೇಶದ ಪ್ರಜೆಗಳ ಜೀವನವು ಶಾಂತಿಮಯವಾಗಿ
ಪರಿಣಮಿಸುವದು. ಮತ್ತು ಇಂಥ ಸುಲಭವೂ ಪ್ರತ್ಯಕ್ಷ ದೇವತಾ ಪ್ರೇರಿತವೂ
ಆದ ಮಾರ್ಗವೇ ಆ ದೇಶದ ಮತ್ತು ಇಡಿಯ ಜಗತ್ತಿನ ಐಕ್ಯಕ್ಕೂ ಸುಖ
ಸಮಾಧಾನಗಳಿಗೂ ಕಾರಣವಾಗುವದು.''

ಆಧುನಿಕ ಬಹಿರ್ಮುಖವಾದ ಜಗತ್ತಿನ ದೃಷ್ಟಿಯಿಂದ ನೋಡುವವರಿಗೆ
"ಗರ್ಮನಿಯ ಇಸ್ವಿಯಲ್ಲಿ ಯುರೋಪಖಂಡದಲ್ಲಿ ಜರ್ಮನಿಯೂ ಇಂಗ್ಲಂಡವೂ
ಶೈಕ್ಷಣಿಕ ಪ್ರಪಂಚದಲ್ಲಿ ಅಗ್ರಪೂಜೆಯನ್ನು ಹೊಂದಲು ತಕ್ಕವಾದ ರಾಷ್ಟ್ರ
ಗಳೆನಿಸಿದ್ದುವು. ಇದೇ ಮೇರೆಗೆ ಫ್ರಾನ್ಸ ರಷ್ಯಾ ಅಮೆರಿಕಾ ಜಪಾನ
ದಲ್ಲಿ ತೀರ ಮುಂದೆ ಸಾಗಿದ ದೇಶಗಳಾಗಿದ್ದುವು. ಆದರೆ ಶಿಕ್ಷಣ ಕ್ಷೇತ್ರದಲ್ಲಿ
ಅತಿ ಮುಂದುವರಿದ ದೇಶಗಳ ಈ ಸಂಸ್ಕೃತಿಯು ಅಂತರ್ರಾಷ್ಟ್ರೀಯ ಶಾಂತಿಗೆ
ಸಹಾಯವಾಗಲಿಲ್ಲ, ಇಷ್ಟೇ ಅಲ್ಲ ; ಪ್ರಕೃತದ ಮಹಾಯುದ್ಧಕ್ಕೆ ಕಾರಣವಾಗಿ
ಪರಿಣಮಿಸಿದುವು. ''

" ಜಗತ್ತಿನೊಳಗಿನ ಮುಂದಾಳುಗಳೆನ್ನಿಸಿಕೊಂಡ ವಿದ್ವಾಂಸರು ಆ ದ್ಯೋಗ
ವ್ಯವಸಾಯಗಳಿಗೂ ಆರ್ಥಿಕ ರಾಜಕೀಯ ಸಮಸ್ಯೆಗಳಿಗೂ ಸಂಬಂಧಿಸಿದ

ವಿಷಯಗಳನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದ ತಜ್ಞರೇ ಇರುವರು. ಆದರೆ ಪ್ರಪಂಚಕ್ಕೆಲ್ಲ ಸಾಮಾನ್ಯವಾಗಿರುವ ಬಡತನದ ಇಲ್ಲವೆ ನಿರುದ್ಯೋಗದ ಸಮಸ್ಯೆಯನ್ನು ಸುಸಂಗತವಾಗಿ ಬಿಡಿಸಲು ಅವರಲ್ಲಿ ಯಾರಿಗೂ ಸಾಧ್ಯವಾಗಲಿಲ್ಲ. ಪ್ರಪಂಚದ ಸಕಲ ಸಂಪತ್ತಿಗೆ ಅಲ್ಲಿರುವ ಒಟ್ಟು ಪ್ರಜಾ ಸಂಖ್ಯೆಯನ್ನು ಹೋಲಿಸಿ ನೋಡಿದರೆ ಪ್ರತಿ ಮಾನವ ಪ್ರಾಣಿಯೂ ಸುಖದಿಂದ ಬಾಳಲು ಸಾಕಾದಷ್ಟು ಸಂಪತ್ತನ್ನು ಭಗವಂತನು ಈ ಸೃಷ್ಟಿಯಲ್ಲಿ ಸೃಷ್ಟಿಸಿರುವನೆಂಬುದು ಸಿದ್ಧವಾಗುವುದು. ಆದರೆ ಕೋಟಿ ಕೋಟಿ ಜನರು ಅರೆ ಹೊಟ್ಟೆಗೂ ಗೇಣುಬಟ್ಟೆಗೂ ಇಲ್ಲದೆ ಗೋಳಾಡುತ್ತಿರುವರಲ್ಲ! ಇದಕ್ಕೇನು ಕಾರಣ?"

"ಇಂದಿನ ಭರತಖಂಡವನ್ನೇ ಇನ್ನೊಂದು ಉದಾಹರಣೆಯಾಗಿ ತೆಗೆದುಕೊಳ್ಳೋಣ. ಅದರ ಮುಂದಾಳುಗಳಲ್ಲಿ ಸುಶಿಕ್ಷಿತರಾದ ತಜ್ಞರಿಲ್ಲವೆಂದು ಹೇಳಬಹುದೆ? ಹಾಗಿದ್ದರೂ ಅಖಂಡ ದೇಶವೂ 'ಐಕ್ಯ' 'ಐಕ್ಯ' ಎಂದು ಕಂಠಶೋಷಣೆ ಮಾಡಿಕೊಂಡರೂ ಕೂಡ ಅವರಲ್ಲಿ ಐಕ್ಯವು ಸಾಧಿಸದಿರಲು ಕಾರಣವೇನು?"

"ಈ ಎಲ್ಲ ಪ್ರಶ್ನೆಗಳಿಗೆ ಒಂದೇ ಒಂದು ಒಡೆದು ಕಾಣುವ ಉತ್ತರವಿದೆ. ಅದೇನೆಂದರೆ ನಮ್ಮ ಶಿಕ್ಷಣವು ತಕ್ಕ ಮಾರ್ಗವನ್ನು ಸಾಧಿಸಲಿಲ್ಲ. ಇದನ್ನು ನಾವು ನಮ್ಮ ಸುಜ್ಞಾನದ ತಕ್ಕಡಿಯಲ್ಲಿ ತೂಗಿ ನೋಡಿ ಅದರಲ್ಲಿ ಕೊರತೆಯಿದೆಯೆಂಬುದನ್ನು ಕಂಡುಕೊಂಡಿದ್ದೇವೆ."

"ಆಧುನಿಕ ಶಿಕ್ಷಣದ ದಿಕ್ಕು ತಪ್ಪಿದೆ. ಅದರಲ್ಲೇನೋ ಕೊರತೆಯಿದೆ ಎಂಬುದನ್ನು ನಾವೆಲ್ಲರೂ ಒಪ್ಪಿದ್ದೇವೆ. ತತ್ವಜ್ಞಾನಿಗಳೂ ಶಾಸ್ತ್ರಜ್ಞರೂ ಅದನ್ನು ನಿರ್ವಂಚನೆಯಿಂದ ಅನುಮೋದಿಸಿದ್ದಾರೆ. ಕಾಲಕಾಲಕ್ಕೆ ಪ್ರಕಟವಾದ ಹಲವು ಪುಸ್ತಕ ಪತ್ರಿಕೆಗಳಲ್ಲಿ ಈ ವಿಚಾರವು ಕೂಲಂಕಷವಾಗಿ ಚರ್ಚಿಸಲ್ಪಟ್ಟು ಸರ್ವಾನುಮತದ ನಿರ್ಣಯವನ್ನು ಹೊಂದಿದೆ. ಇಷ್ಟರಿಂದಲೇ ಪ್ರಯೋಜನವೇನು?"

ಈ ಸಾಮಾನ್ಯ ತತ್ವವನ್ನು ಒಂದು ವ್ಯಾವಹಾರಿಕ ಉದಾಹರಣೆಗೆ ಇಳಿಸಿ ನೋಡೋಣ.

"ನಮ್ಮ ಶಾಲೆಯೊಳಗಿನ ವಿದ್ಯಾರ್ಥಿಗಳು ನನ್ನ ಮಾತಿನಲ್ಲಿ ಶ್ರದ್ಧೆಯಿಟ್ಟು ನಡೆಯುವದಿಲ್ಲ. ಕೆಲವೊಂದು ವಿಶಿಷ್ಟ ದಿನದಲ್ಲಿ ಶಾಲೆಗೆ ಬನ್ನಿರೆಂದು ಉಪದೇಶ ಮಾಡಹೋದರೆ 'ಶೇಮು! ಶೇಮು!' ಎಂದು ಒದರುವರು. ನನ್ನ ಸಹಾಯಕ ಶಿಕ್ಷಕರಿಗೂ ಕೂಡ ನನ್ನ ಮೇಲೆ ವಿಶ್ವಾಸವಿಲ್ಲ. ನಾನು ಅವರನ್ನು ಸಂಶಯಾವೃತ

ದೃಷ್ಟಿಯಿಂದಲೇ ನೋಡುತ್ತೇನೆ. ಹಾಗೆಂದು ನನ್ನ ಶಾಲೆಯ ಕೆಲಸವು ಸರಿಯಾಗಿ ನಡೆದಿಲ್ಲವೆಂದು ಹೇಳಲೇ ? ಹಾಗೆಯೂ ಹೇಳಲಾರೆ. ಯಾಕೆಂದರೆ ಶಾಲೆಯ ತಪಾಸಣೆಗೆ ಬಂದ ಅಧಿಕಾರಿಗಳು ಅಲ್ಲಿ ನಡೆದಿರುವ ಕೆಲಸವನ್ನು ನೋಡಿ ತುಂಬ ಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ವಾರ್ಷಿಕ ಇಲ್ಲವೆ ವಿದ್ಯಾ ಇಲಾಖೆಯವರು ಗೊತ್ತುಪಡಿಸಿದ ವಿಶಿಷ್ಟ ತರಗತಿಗಳ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಬಹು ಸಂಖ್ಯೆಯಿಂದ ಪಾಸಾಗುತ್ತಾರೆ.

ಹೊರಗೆ ನೋಡುವವರಿಗೆ ನಮ್ಮ ಶಾಲೆಯ ಸುಸ್ಥಿತಿಯೇ ಕಂಡುಬರುತ್ತಿದ್ದರೂ ಒಳಗಿರುವ ನಮಗೆ ಮಾತ್ರ ಎಳ್ಳಷ್ಟೂ ಅದರಲ್ಲಿ ಸಮಾಧಾನವಿಲ್ಲ. ಇದಕ್ಕೆ ಕಾರಣವೇನು ?

ಒಬ್ಬ ಮೇಲ್ತರಗತಿಯ ಮುಖ್ಯಾಧ್ಯಾಪಕನ ಉದ್ಗಾರಗಳಿವು.

ಇಂತಹ ವಿಷಮ ಪರಿಸ್ಥಿತಿಗೆ ಒಂದೇ ಒಂದು ಕಾರಣವನ್ನು ಹೇಳಬಹುದು. ಅಂತಃಕರಣದ ಐಕ್ಯದ ಅಭಾವವೇ ಇದರ ಮೂಲಕಾರಣವಲ್ಲದೆ ಬೇರಿಲ್ಲ. ಮಾನವನ ಅಂತಃಕರಣವನ್ನು ಒಂದುಗೂಡಿಸುವ ಅದರಲ್ಲಿ ಪರಸ್ಪರ ಪ್ರೇಮ ಸದ್ಭಾವಗಳನ್ನು ಹುಟ್ಟಿಸುವ ಒಂದು ಶಕ್ತಿಯ ಅಭಾವವು ನಮ್ಮನ್ನು ಈ ರೀತಿ ಸಂಕಟಗಳಿಗೆ ಗುರಿಮಾಡಿದೆ. ಇಂತಹ ಅಮಾನುಷೇಯವಾದ ಶಕ್ತಿಯನ್ನು ನಾವು ಮರೆತು ಒಳಗಿರುವ ಕೊಬ್ಬರಿಗೆ ಹುಟ್ಟುವ ಶಕ್ತಿಯಿಲ್ಲದ್ದರಿಂದ ಹೊರಗಿನ ಪರಟೆಯನ್ನು ಕೆರೆದು ಹಲ್ಲು ನೋಯಿಸಿಕೊಳ್ಳುವ ಕಪಿಯಂತೆ ತೊಳಲಾಡುತ್ತಿದ್ದೇವೆ.

ಆ ಶಕ್ತಿಯು ಎಲ್ಲಿದೆ ? ಅವನ್ನು ಎಲ್ಲರೂ ಹೇಗೆ ಪಡೆಯುವರು ? ಈ ಪ್ರಶ್ನೆಗಳಿಗೆ ಉತ್ತರ ಕೊಡುವದು ಸುಲಭವಲ್ಲ. ಹಾಗೆಂದು ಅಸಾಧ್ಯವೂ ಅಲ್ಲ. ಅದು ಅನುಭವದಿಂದ ತಾನಾಗಿ ಗೋಚರವಾಗುವದು.

ಆಧುನಿಕ ಶಾಸ್ತ್ರಜ್ಞರಲ್ಲಿ ಗಣ್ಯರಾದ ಸರ್ ಜಗದೀಶಚಂದ್ರ ಬೋಸರು ಉದ್ಭಿಜ್ಜಗಳಿಗೂ ಖನಿಜಗಳಿಗೂ ಜೀವವಿದೆ; ಅವಕ್ಕೂ ಕೂಡ ಪ್ರಾಣಿಗಳಂತೆ ಸುಖದುಃಖಾನುಭವವಾಗುವದು; ಎಂಬುದನ್ನು ಜಗತ್ತಿನ ನಿದರ್ಶನಕ್ಕೆ ತಂದು ಕೊಟ್ಟರು. ಇದು ಯಾತರ ಪರಿಣಾಮ ? ಇದು ಅವರು ಕೈಕೊಂಡ ಅಸಂಖ್ಯ ಪ್ರಯೋಗಾನುಭವಗಳ ಫಲಿತವೆಂಬದನ್ನು ಯಾರೂ ಅಲ್ಲಗಳೆಯರು. ಹಾಗೆಯೇ ನಾವೂ ಈ ಮಾರ್ಗದಲ್ಲಿ ಪ್ರಯಾಣವನ್ನು ಆರಂಭಿಸಿ ಕೊನೆಯ ಫಲಿತವನ್ನು ಪಡೆಯಬೇಕು. ಒಂದೊಂದು ಪ್ರಯೋಗದ ಫಲಿತವನ್ನು ಕಂಡುಕೊಂಡು ಅದರ ಸಹಾಯದಿಂದ ಮುಂದಿನ ಹೆಜ್ಜೆಯನ್ನು ಎಲ್ಲಿಡಬೇಕೆಂಬದನ್ನು ಗುರುತಿಸಿಕೊಳ್ಳಬೇಕು.

ಹಿಂದು ತತ್ತ್ವಜ್ಞಾನದಲ್ಲಿಯಂತೂ ಈ ಪ್ರಶ್ನೆಗಳಿಗೆ ತಕ್ಕ ಉತ್ತರವು ಸುಗಮವಾಗಿ ವಿವೇಚಿಸಲ್ಪಟ್ಟಿದೆ. ಮತ್ತು ನಮ್ಮವರಿಗೆ ಇದು ತಾಯಿಯ ಹಾಲಿನ ಸಂಗಡವೇ ರಕ್ತದಲ್ಲಿ ಸೇರಿಹೋಗುವದು. ಮೇಲೆ ಹೇಳಿದ ಶಕ್ತಿಗೆ ನಮ್ಮವರು ದೇವರೆನ್ನುವರು. ದೇವರು ಸರ್ವಾಂತರ್ಯಾಮಿಯು ಅಣುರೇಣುತೃಣಕಾಷ್ಠಗಳಲ್ಲಿಯೂ ಆತನು ಅವ್ಯಾಹತವಾಗಿ ವಾಸವಾಗಿದ್ದಾನೆ. ಎಂಬುದನ್ನು ನಮ್ಮ ಹಸುಗೂಸುಗಳೂ ಕೂಡ ಅರಿತಿರುವರು.

ಹಸುಗೂಸುಗಳ ಅಂತಃಕರಣವು ನಿಷ್ಕಲ್ಮಶವಾಗಿರುವದು.
ಅವರ ಅಂತಃಕರಣವು ಕಪಟಲಿಲ್ಲದೆ ಈಶ್ವರಾಭಿಮುಖಿಯಾಗಿರುವದು.
ಅವರ ಅಂತಃಕರಣವು ಅಹಂಭಾವರಹಿತವಾಗಿರುವದು.
ಅವರ ಅಂತಃಕರಣವು ಸತ್ಯಮಯವಾಗಿರುವದು.
ಅವರ ಅಂತಃಕರಣವು ಸ್ವೇಚ್ಛಾನುಗಾಮಿಯಾಗಿರುವದು.

ಆದುದರಿಂದ ಹಸುಗೂಸುಗಳು ದೇವಸಮಾನವೆಂದು ನಮ್ಮವರು ಹೇಳುವದುಂಟು. ಅರ್ಥಾತ್ ನಿಷ್ಕಲ್ಮಶವೂ ಈಶ್ವರಾಭಿಮುಖಿಯೂ ಅಹಂಭಾವರಹಿತವೂ ಸತ್ಯಮಯವೂ ಸ್ವೇಚ್ಛಾನುಗಾಮೀಶಕ್ತಿಯುತವೂ ಆದ ಅಂತಃಕರಣವುಳ್ಳ ಮಾನವನು ದೇವಸಮಾನವಾದ ಗುಣವುಳ್ಳವನೆನಿಸುವನು. ಇಂಥವರಿಗೇ ನಮ್ಮವರು ಸಾಧುಸಂತರು, ಸಜ್ಜನರು ಎಂದು ಹೇಳುವರು.

'ಸತಾಂ ಹಿ ಸಂದೇಹ ಪದೇಷು ವಸ್ತುಷು ಪ್ರಮಾಣಮಂತಃಕರಣ ಪ್ರವೃತ್ತಯಃ' ಎಂದು ನಮ್ಮ ನ್ಯೆಯಾಯಿಕರು ಪ್ರತಿಪಾದಿಸಿದ ಮಾತಿನ ಭಾವವೂ ಕೂಡ ಇದರಲ್ಲಿಯೇ ಸಮಾವೇಶವಾಗುವದು.

ಹಿಂದೆ ಹೇಳಿದ ಪಾಶ್ಚಿಮಾತ್ಯ ದೇಶಗಳಲ್ಲಿ ಶಿಕ್ಷಣಕ್ಷೇತ್ರದಲ್ಲಿ ಹೊಸ ಬೆಳಕನ್ನು ಕಾಣಲು ಹವಣಿಸುವ ಸಂಘದವರು ಪ್ರತಿಪಾದಿಸುವ ಈಶ್ವರೀಪ್ರೇರಣೆ (Listening to god)ಯ ಗೂಢವು ಕೂಡ ಈ ವಿವರಣೆಯಿಂದ ಬಿಡಬಹುದು. ಅವರು ಹೇಳುವ ಶಾಂತಿಕಾಲದಲ್ಲಿ ಅಂತಃಕರಣದಲ್ಲಿ ಉದ್ಭವವಾಗುವ ಈಶ್ವರೀಪ್ರೇರಣೆಗೇ ನಮ್ಮವರು ಅಂತಃಕರಣಪ್ರವೃತ್ತಿ ಎಂದು ಹೇಳುವರೆಂದರೆ ಭಿನ್ನಾಭಿಪ್ರಾಯವನ್ನು ಹೇಳಿದಂತಾಗುವದಿಲ್ಲವೆಂದು ನಂಬುವೆವು. ತ್ರಿಕರಣಶುದ್ಧಿಯುಳ್ಳ ಸತ್ಪುರುಷನು ಅಂತರ್ಮುಖಿಯಾಗಿ ಕುಳಿತು ತನ್ನ ಅಂತಃಕರಣದಲ್ಲಿ ಈಶ್ವರೀಪ್ರೇರಣೆಯನ್ನು ಕೋರಿದರೆ ಅವನಿಗೆ ತಕ್ಕ ಪ್ರೇರಣೆಯಾಗುವದೆಂಬುದನ್ನು ನಮ್ಮ ತತ್ತ್ವಜ್ಞಾನಿಗಳೂ ಸಮ್ಮತಿಸುವರೆಂಬುದು ಮೇಲಿನ 'ಸತಾಂ ಹಿ ....' ಎಂಬ ವಾಕ್ಯದಲ್ಲಿ ಸಮಾವೇಶವಾಗಿದೆ.

'ಯಾವಿದ್ಯಾ ಸಾ ವಿಮುಕ್ತಯೇ' ಎಂದರೆ 'ಮುಕ್ತಿಸಾಧಕವಾದುದೇ ನಿಜವಾದ ವಿದ್ಯೆ' ಎಂಬುದನ್ನು ನಮ್ಮವರು ಎಂದೋ ಅರಿತಿದ್ದಾರೆ. ಉದರ ಪೋಷಣೆಗೊ ಯಾವುದೊಂದು ಅಧಿಕಾರಚಲಾವಣೆಗೊ ಅವಶ್ಯಕವಾದ ವಿದ್ಯೆಗೆ ಅವರು ವಿದ್ಯೆಯೆನ್ನಲಿಲ್ಲ. ಮುಕ್ತಿಸಾಧಕವೆಂದರೆ ಮರಣಾನಂತರದಲ್ಲಿ ಯಾವುದೋ ಅಜ್ಞಾತಲೋಕದಲ್ಲಿ ಲಭಿಸುವ ಸುಖಸಮಾಧಾನಗಳೆಂದೂ ಅವರು ಭಾವಿಸಿರಲಿಲ್ಲ. ಶಮದಮಾದಿ ಸದ್ಗುಣಗಳಿಂದ ಯುಕ್ತವಾದ ಶಾಂತಿಸಮಾಧಾನಗಳನ್ನು ಪಡೆದ ಜೀವನವೇ ಮುಕ್ತಿಯೆಂದೂ ಜನಕಾದಿ ರಾಜರ್ಷಿಗಳೂ ಕೂಡ ಜೀವನ್ಮುಕ್ತಾವಸ್ಥೆಯಲ್ಲಿದ್ದರೆಂದೂ ನಾವು ತಿಳಿದಿದ್ದೇವೆ. ಅರ್ಥಾತ್ ನಮ್ಮವರು ವಿದ್ಯೆಯ ಅಸ್ತಿವಾರವೂ ಅದರಿಂದ ಸಾಧಿಸಬೇಕಾದ ಧ್ಯೇಯವೂ ಯಾವುದೆಂಬುದನ್ನು ಸುಸ್ಪಷ್ಟವಾಗಿ ಅರಿತುಕೊಂಡಿದ್ದರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ದೇವರು ಧರ್ಮ ನೀತಿ ಇವುಗಳ ಅಸ್ತಿಕಭಾವನೆ ಜ್ಞಾನ ಆಚರಣೆ ಇವೇ ಶಿಕ್ಷಣದ ಅಸ್ತಿವಾರಗಳು. ದೇವರನ್ನು ನಂಬಿ ಧರ್ಮಮಾರ್ಗಾವಲಂಬಿಯಾಗಿ ನಡೆದು ನೀತಿಮಯವಾದ ಅತ್ಯುಚ್ಚಜೀವನವನ್ನು ನಡೆಯಿಸಲು ಸಮರ್ಥನಾಗುವಂತೆ ಮಾಡುವದೇ ಮಾನವನ ಶೀಕ್ಷಣದ ಧ್ಯೇಯವೆಂಬುದನ್ನು ಅವರು ದೃಢವಾಗಿ ನಂಬಿದ್ದರು. ಅದಕ್ಕನುಗುಣವಾಗಿಯೇ ಅವರಿಗೆ ಕಲಿಸುವ ವಿಷಯಯೋಜನೆಯೂ ಇದ್ದಿತು.

ನಾಲ್ಕು ವೇದಗಳು, ಆರು ಶಾಸ್ತ್ರಗಳು, ಹದಿನೆಂಟು ಪುರಾಣಗಳು ಇವು ಶಿಕ್ಷಣದ ವಿಷಯಗಳು. ಇವುಗಳಲ್ಲಿ ವರ್ಣಿತವಾದ ವಿಷಯಗಳು ದೇವರು ಧರ್ಮ ನೀತಿ ಇವನ್ನು ಬಿಟ್ಟಿಲ್ಲ. ವೇದಗಳ ಅರ್ಥಜ್ಞಾನಕ್ಕಾಗಿ ವ್ಯಾಕರಣ ಛಂದಸ್ಸು ಅಲಂಕಾರ ಮೊದಲಾದ ಭಾಷಾಶಾಸ್ತ್ರವಿಷಯಗಳು ಬೆಳೆವಣಿಗೆ ಹೊಂದಿದುವು. ವೇದಾಂಗಜ್ಯೋತಿಷ ಫಲಿಜ್ಯೋತಿಷ ಪಂಚಾಂಗಗಳ ರಚನೆ ಇವಕ್ಕಾಗಿ ಜ್ಯೋತಿಷಶಾಸ್ತ್ರ ಗಣಿತಶಾಸ್ತ್ರಗಳು ವಿಸ್ತಾರವಾದವು. ಶೂನ್ಯದ ಉಪಯೋಗವನ್ನು ಪ್ರಚಾರದಲ್ಲಿ ತಂದು ಅಂಕಗಣಿತವನ್ನು ಪರಿಪೂರ್ಣಸ್ಥಿತಿಗೆ ಒಯ್ದು ಮುಟ್ಟಿಸಿದ ಶ್ರೇಯಸ್ಸು ನಮ್ಮ ಭಾಸ್ಕರಾಚಾರ್ಯನಿಗೇ ಸಲ್ಲುವದು. ಸುವರ್ಣಸಾಧನೆಯ ಕಾರ್ಯದಲ್ಲಿ ತೊಡಗಿದವರು ರಸಾಯನಶಾಸ್ತ್ರವನ್ನು ಬೆಳೆಯಿಸಿದರು. ಹೀಗೆ ಆಧುನಿಕ ಜಗತ್ತಿನಲ್ಲಿ ಮನ್ನಣೆ ಪಡೆದ ಶಾಸ್ತ್ರವಿಷಯಗಳೂ ಕೂಡ ನಮ್ಮವರಿಗೆ ಅಪರಿಚಿತವಾಗಿರಲಿಲ್ಲ; ಹೀಗೆ ಉಚ್ಚತರದ ವಿದ್ಯಾಸಂಸ್ಕಾರದಲ್ಲಿ ಕೂಡ ಅವರು ಉದಾಸೀನರಾಗಿರದಿದ್ದರೂ ನೀತಿಯ ನೆಲಗಟ್ಟನ್ನು ಮಾತ್ರ ಎಂದೂ ಮರೆತಿರಲಿಲ್ಲ. ತಾನು ಮಾಡುವದೆಲ್ಲ ದೇವರ ಸೇವೆಗಾಗಿ. ಜನತಾಜದಾರ್ದನನ ಪ್ರೀತಿಗಾಗಿ, ಎಂದು ಅವರು ನಂಬುತ್ತಿದ್ದರು. ಪೂರ್ವಕಾಲದ ಜ್ಞಾನಿಗಳಿಗೂ

ಹಿಂದು ತತ್ತ್ವಜ್ಞಾನದಲ್ಲಿಯಂತೂ ಈ ಪ್ರಶ್ನೆಗಳಿಗೆ ತಕ್ಕ ಉತ್ತರವು ಸುಗಮವಾಗಿ ವಿವೇಚಿಸಲ್ಪಟ್ಟಿದೆ. ಮತ್ತು ನಮ್ಮವರಿಗೆ ಇದು ತಾಯಿಯ ಹಾಲಿನ ಸಂಗಡವೇ ರಕ್ತದಲ್ಲಿ ಸೇರಿಹೋಗುವದು. ಮೇಲೆ ಹೇಳಿದ ಶಕ್ತಿಗೆ ನಮ್ಮವರು ದೇವರೆನ್ನುವರು. ದೇವರು ಸರ್ವಾಂತರ್ಯಾಮಿಯು ಅಣುರೇಣುತೃಣಕಾಷ್ಠ ಗಳಲ್ಲಿಯೂ ಆತನು ಅವ್ಯಾಹತವಾಗಿ ವಾಸವಾಗಿದ್ದಾನೆ. ಎಂಬುದನ್ನು ನಮ್ಮ ಹಸುಗೂಸುಗಳೂ ಕೂಡ ಅರಿತಿರುವರು.

ಹಸುಗೂಸುಗಳ ಅಂತಃಕರಣವು ನಿಷ್ಕಲ್ಮಶವಾಗಿರುವದು.
ಅವರ ಅಂತಃಕರಣವು ಕವಲಿಲ್ಲದೆ ಈಶ್ವರಾಭಿಮುಖಿಯಾಗಿರುವದು.
ಅವರ ಅಂತಃಕರಣವು ಅಹಂಭಾವರಹಿತವಾಗಿರುವದು.
ಅವರ ಅಂತಃಕರಣವು ಸತ್ಯಮಯವಾಗಿರುವದು.
ಅವರ ಅಂತಃಕರಣವು ಸ್ವೇಚ್ಛಾನುಗಾಮಿಯಾಗಿರುವದು.

ಆದುದರಿಂದ ಹಸುಗೂಸುಗಳು ದೇವಸಮಾನವೆಂದು ನಮ್ಮವರು ಹೇಳುವ ದುಂಟು. ಅರ್ಥಾತ್ ನಿಷ್ಕಲ್ಮಶವೂ ಈಶ್ವರಾಭಿಮುಖಿಯೂ ಅಹಂಭಾವ ರಹಿತವೂ ಸತ್ಯಮಯವೂ ಸ್ವೇಚ್ಛಾನುಗಾಮೀಶಕ್ತಿಯುತವೂ ಆದ ಅಂತಃಕರಣ ವುಳ್ಳ ಮಾನವನು ದೇವಸಮಾನವಾದ ಗುಣವುಳ್ಳವನೆನಿಸುವನು. ಇಂಥವರಿಗೇ ನಮ್ಮವರು ಸಾಧುಸಂತರು, ಸಜ್ಜನರು ಎಂದು ಹೇಳುವರು.

'ಸತಾಂ ಹಿ ಸಂದೇಹ ಪದೇಷು ವಸ್ತುಷು ಪ್ರಮಾಣಮಂತಃಕರಣ ಪ್ರವೃತ್ತಯಃ' ಎಂದು ನಮ್ಮ ನ್ಯೈಯಾಯಿಕರು ಪ್ರತಿಪಾದಿಸಿದ ಮಾತಿನ ಭಾವವೂ ಕೂಡ ಇದರಲ್ಲಿಯೇ ಸಮಾವೇಶವಾಗುವದು.

ಹಿಂದೆ ಹೇಳಿದ ಪಾಶ್ಚಿಮಾತ್ಯ ದೇಶಗಳಲ್ಲಿ ಶಿಕ್ಷಣಕ್ಷೇತ್ರದಲ್ಲಿ ಹೊಸ ಬೆಳಕನ್ನು ಕಾಣಲು ಹವಣಿಸುವ ಸಂಘದವರು ಪ್ರತಿಪಾದಿಸುವ ಈಶ್ವರೀಪ್ರೇರಣೆ (Listening to god)ಯ ಗೂಢವು ಕೂಡ ಈ ವಿವರಣೆಯಿಂದ ಬಿಡಬಹುದು. ಅವರು ಹೇಳುವ ಶಾಂತಿಕಾಲದಲ್ಲಿ ಅಂತಃಕರಣದಲ್ಲಿ ಉದ್ಭವವಾಗುವ ಈಶ್ವರೀ ಪ್ರೇರಣೆಗೇ ನಮ್ಮವರು ಅಂತಃಕರಣಪ್ರವೃತ್ತಿ ಎಂದು ಹೇಳುವರೆಂದರೆ ಭಿನ್ನಾಭಿ ಪ್ರಾಯವನ್ನು ಹೇಳಿದಂತಾಗುವದಿಲ್ಲವೆಂದು ನಂಬುವೆವು. ತ್ರಿಕರಣಶುದ್ಧಿಯುಳ್ಳ ಸತ್ಪುರುಷನು ಅಂತರ್ಮುಖಿಯಾಗಿ ಕುಳಿತು ತನ್ನ ಅಂತಃಕರಣದಲ್ಲಿ ಈಶ್ವರೀ ಪ್ರೇರಣೆಯನ್ನು ಕೋರಿದರೆ ಅವನಿಗೆ ತಕ್ಕ ಪ್ರೇರಣೆಯಾಗುವದೆಂಬುದನ್ನು ನಮ್ಮ ತತ್ತ್ವಜ್ಞಾನಿಗಳೂ ಸಮ್ಮತಿಸುವರೆಂಬುದು ಮೇಲಿನ 'ಸತಾಂ ಹಿ ....' ಎಂಬ ವಾಕ್ಯದಲ್ಲಿ ಸಮಾವೇಶವಾಗಿದೆ.

'ಯಾವಿದ್ಯಾ ಸಾ ವಿಮುಕ್ತಯೇ ' ಎಂದರೆ ' ಮುಕ್ತಿಸಾಧಕವಾದುದೇ ನಿಜವಾದ ವಿದ್ಯೆ ' ಎಂಬುದನ್ನು ನಮ್ಮವರು ಎಂದೋ ಅರಿತಿದ್ದಾರೆ. ಉದರ ಪೋಷಣೆಗೊ ಯಾವುದೊಂದು ಅಧಿಕಾರಜಲಾವಣೆಗೊ ಆವಶ್ಯಕವಾದ ವಿದ್ಯೆಗೆ ಅವರು ವಿದ್ಯೆಯೆನ್ನಲಿಲ್ಲ. ಮುಕ್ತಿಸಾಧಕವೆಂದರೆ ಮರಣಾನಂತರದಲ್ಲಿ ಯಾವುದೋ ಅಜ್ಞಾತಲೋಕದಲ್ಲಿ ಲಭಿಸುವ ಸುಖಸಮಾಧಾನಗಳೆಂದೂ ಅವರು ಭಾವಿಸಿರಲಿಲ್ಲ. ಶಮದಮಾದಿ ಸದ್ಗುಣಗಳಿಂದ ಯುಕ್ತವಾದ ಶಾಂತಿಸಮಾಧಾನಗಳನ್ನು ಪಡೆದ ಜೀವನವೇ ಮುಕ್ತಿಯೆಂದೂ ಜನಕಾದಿ ರಾಜರ್ಷಿಗಳೂ ಕೂಡ ಜೀವನ್ಮುಕ್ತಾವಸ್ಥೆಯಲ್ಲಿದ್ದರೆಂದೂ ನಾವು ತಿಳಿದಿದ್ದೇವೆ. ಅರ್ಥಾತ್ ನಮ್ಮವರು ವಿದ್ಯೆಯ ಅಸ್ತಿವಾರವೂ ಅದರಿಂದ ಸಾಧಿಸಬೇಕಾದ ಧ್ಯೇಯವೂ ಯಾವುದೆಂಬುದನ್ನು ಸುಸ್ಪಷ್ಟವಾಗಿ ಅರಿತುಕೊಂಡಿದ್ದರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ದೇವರು ಧರ್ಮ ನೀತಿ ಇವುಗಳ ಆಸ್ತಿಕಭಾವನೆ ಜ್ಞಾನ ಆಚರಣೆ ಇವೇ ಶಿಕ್ಷಣದ ಅಸ್ತಿವಾರಗಳು. ದೇವರನ್ನು ನಂಬಿ ಧರ್ಮಮಾರ್ಗಾವಲಂಬಿಯಾಗಿ ನಡೆದು ನೀತಿಮಯವಾದ ಉತ್ಕೃಷ್ಟ ಜೀವನವನ್ನು ನಡೆಯಿಸಲು ಸಮರ್ಥನಾಗುವಂತೆ ಮಾಡುವದೇ ಮಾನವನ ಶಿಕ್ಷಣದ ಧ್ಯೇಯವೆಂಬುದನ್ನು ಅವರು ದೃಢವಾಗಿ ನಂಬಿದ್ದರು. ಅದಕ್ಕನುಗುಣವಾಗಿಯೇ ಅವರಿಗೆ ಕಲಿಸುವ ವಿಷಯಯೋಜನೆಯೂ ಇದ್ದಿತು.

ನಾಲ್ಕು ವೇದಗಳು, ಆರು ಶಾಸ್ತ್ರಗಳು, ಹದಿನೆಂಟು ಪುರಾಣಗಳು ಇವು ಶಿಕ್ಷಣದ ವಿಷಯಗಳು. ಇವುಗಳಲ್ಲಿ ವರ್ಣಿತವಾದ ವಿಷಯಗಳು ದೇವರು ಧರ್ಮ ನೀತಿ ಇವನ್ನು ಬಿಟ್ಟಿಲ್ಲ. ವೇದಗಳ ಅರ್ಥಜ್ಞಾನಕ್ಕಾಗಿ ವ್ಯಾಕರಣ ಛಂದಸ್ಸು ಅಲಂಕಾರ ಮೊದಲಾದ ಭಾಷಾಶಾಸ್ತ್ರವಿಷಯಗಳು ಬೆಳೆವಣಿಗೆ ಹೊಂದಿದುವು. ವೇದಾಂಗಜ್ಯೋತಿಷ ಫಲಿಜ್ಯೋತಿಷ ಪಂಚಾಂಗಗಳ ರಚನೆ ಇವಕ್ಕಾಗಿ ಜ್ಯೋತಿಷಶಾಸ್ತ್ರ ಗಣಿತಶಾಸ್ತ್ರಗಳು ವಿಸ್ತಾರವಾದವು. ಶೂನ್ಯದ ಉಪಯೋಗವನ್ನು ಪ್ರಚಾರದಲ್ಲಿ ತಂದು ಅಂಕಗಣಿತವನ್ನು ಪರಿಪೂರ್ಣಸ್ಥಿತಿಗೆ ಒಯ್ದು ಮುಟ್ಟಿಸಿದ ಶ್ರೇಯಸ್ಸು ನಮ್ಮ ಭಾಸ್ಕರಾಚಾರ್ಯನಿಗೇ ಸಲ್ಲುವದು. ಸುವರ್ಣಸಾಧನೆಯ ಕಾರ್ಯದಲ್ಲಿ ತೊಡಗಿದವರು ರಸಾಯನಶಾಸ್ತ್ರವನ್ನು ಬೆಳೆಯಿಸಿದರು. ಹೀಗೆ ಆಧುನಿಕ ಜಗತ್ತಿನಲ್ಲಿ ಮನ್ನಣೆ ಪಡೆದ ಶಾಸ್ತ್ರವಿಷಯಗಳೂ ಕೂಡ ನಮ್ಮವರಿಗೆ ಅಪರಿಚಿತವಾಗಿರಲಿಲ್ಲ; ಹೀಗೆ ಉಚ್ಚತರದ ವಿದ್ಯಾಸಂಸ್ಕಾರದಲ್ಲಿ ಕೂಡ ಅವರು ಉದಾಸೀನರಾಗಿರದಿದ್ದರೂ ನೀತಿಯ ನೆಲಗಟ್ಟನ್ನು ಮಾತ್ರ ಎಂದೂ ಮರೆತಿರಲಿಲ್ಲ. ತಾನು ಮಾಡುವದೆಲ್ಲ ದೇವರ ಸೇವೆಗಾಗಿ. ಜನತಾಜದಾರ್ದನನ ಪ್ರೀತಿಗಾಗಿ, ಎಂದು ಅವರು ನಂಬುತ್ತಿದ್ದರು. ಪೂರ್ವಕಾಲದ ಜ್ಞಾನಿಗಳಿಗೂ

ಆಧುನಿಕ ವಿದ್ಯಾಸಂಸ್ಕೃತರಾದ ಪಂಡಿತರಿಗೂ ಇದೊಂದೇ ಮಾತಿನಲ್ಲಿ ತಾರತಮ್ಯವಿದೆ. ಅವರು ದೇವರು ಧರ್ಮ ನೀತಿಗಳನ್ನು ತಮ್ಮ ಶಿಕ್ಷಣದ ತಳಹದಿಯಾಗಿಟ್ಟುಕೊಂಡು ಆಧ್ಯಾತ್ಮಿಕ ಉನ್ನತಿಗಾಗಿಯೂ ಜನತೆಯ ಸುಖ ಸಮಾಧಾನಗಳಿಗಾಗಿಯೂ ಹೆಣಗಿದರು. ಆಧುನಿಕರು ಭೌತಿಕಶಾಸ್ತ್ರಗಳನ್ನು ಭೌತಿಕ ಸುಖಸಂವರ್ಧನೆಗಾಗಿ ಕಲಿತು ಬಹಿರ್ಮುಖಿಗಳಾಗಿ ಪ್ರಪಂಚದ ಶಾಂತಿಸಮಾಧಾನಗಳನ್ನು ನಿರ್ಮೂಲನಗೊಳಿಸಲು ಯತ್ನಿಸಿದರು.

ಭಾರತೀಯ ಸಂಸ್ಕೃತಿಯ ವಿಷಯದಲ್ಲಿಯೂ ನಮ್ಮವರ ಶಿಕ್ಷಣದ ಅಸ್ತಿವಾರದ ವಿಷಯದಲ್ಲಿಯೂ ನಾವು ಅತಿಶಯ ಗೌರವಾರ್ಹವಾದ ಸ್ಥಾನವನ್ನು ಸ್ಥಾಪಿಸಿ ತೋರಿಸಬಹುದೆಂಬುದು ನಿರ್ವಿವಾದವಾಗಿದೆ. ಆದರೆ ಇದು ಹಿಂದಿನ ಯುಗದ ಮಾತು. ಆಧುನಿಕ ಕಾಲದಲ್ಲಿ ನಾವು ಪರರ ಅನುಕರಣೆಯಿಂದ ಅಡ್ಡದಾರಿಯಲ್ಲಿ ಹೊರಟಿದ್ದೇವೆ. ನಮ್ಮ ಶಿಕ್ಷಣದ ತಳಹದಿಯು ಗೆದ್ದಲು ತಿಂದ ಪುಸ್ತಕದೊಳಗಿನ ವಿಷಯಜ್ಞಾನದಂತೆಯೋ ಒಳಗಿನ ಕೊಬ್ಬರಿಯು ಕೊಳೆತು ಹೋದ ತೆಂಗಿನ ಬುರುಡೆಯಂತೆಯೋ ಆಗಿದೆ. ನಮ್ಮ ನೂತನ ಪೀಳಿಗೆಯು ನೀತಿಯ ತಳಹದಿಯನ್ನು ಸಂಪೂರ್ಣ ಮುರಿತು ಬಿಟ್ಟಿದೆ. ಹಿಂದಿನವರ ಆತ್ಮೋನ್ನತಿಯ ಪೌರುಷವನ್ನು ಹೊಗಳಿಕೊಂಡರೆ ಅದು ನಮ್ಮ ಇಂದಿನ ಘನತೆಯನ್ನು ಸಾಧಿಸಲಾರದು. ನಾವು ಇಂದು ಏನಾಗಿದ್ದೇವೆ ಎಂಬುದನ್ನು ನೋಡಿಕೊಳ್ಳಬೇಕು. ಆ ದೃಷ್ಟಿಯಿಂದ ನೋಡಿದರೆ ನಮಗೆ ನಾಚಿಕೆ ಬರುವದು. ನಾವು ನಮ್ಮ ಪೂರ್ವಜರ ನೈತಿಕ ವೈಭವವನ್ನು ಪುನರುಜ್ಜೀವನಗೊಳಿಸಿಕೊಂಡಾಗಲೇ ನಮ್ಮ ಪೂರ್ವದ ಋಷಿ ಪರಂಪರೆಯ ಗೌರವವನ್ನು ಹೊಗಳಲು ನಮಗೆ ಅಧಿಕಾರವುಂಟಾಗುವುದು. ಭಾರತೀಯ ಸಂಸ್ಕೃತಿ ಪುರುಷನ ದೇಹದಲ್ಲಿ ಇಂದು ಆತ್ಮವುಳಿದಿಲ್ಲ. ಅದು ನಿರ್ಜೀವವಾಗಿದೆ. ಪಾಶ್ಚಿಮಾತ್ಯರ ಅನುಕರಣೆಯಿಂದ ನಾವು ಅದನ್ನು ನೆಲದೊಳಗೆ ಹೂಳಿ ಗೋರಿಯನ್ನು ಕಟ್ಟಿಟ್ಟಂತಾಗಿದೆ. ಆ ಗೋರಿಯನ್ನು ತೋರಿ ಅಭಿಮಾನಪಡುವುದರಿಂದ ಪ್ರಯೋಜನವೇನು? ಆದ್ದರಿಂದ ನಾವು ನಮ್ಮ ಆಧುನಿಕ ಪುಸ್ತಕೀಯ ಶಿಕ್ಷಣದಿಂದ ಸಮಾಧಾನ ಹೊಂದಲಾಗದು. ನಾವು ನಮ್ಮ ಮುಂದಿನ ಪೀಳಿಗೆಯ ಸುಖಸಮಾಧಾನಗಳಿಗೆ ಅತ್ಯಾವಶ್ಯಕವಾದ ದೇವರು, ಧರ್ಮ, ನೀತಿಗಳ ನೆಲಗಟ್ಟಿನ ಮೇಲೆ ಹೊಸ ಕಾಲದ ಶಿಕ್ಷಣ ಮಂದಿರವನ್ನು ರಚಿಸಿಕೊಳ್ಳುವದು ಅನಿವಾರ್ಯವಾಗಿದೆ. ಇದಕ್ಕಾಗಿ ಪ್ರಕೃತದ ಶಾಲಾ ಶಿಕ್ಷಣದ ಜೊತೆಗೆ ನಮ್ಮ ಸಂಸ್ಕೃತಿಯ ಮೂಲಾಧಾರವಾದ ಗೃಹಶಿಕ್ಷಣವೂ ಸರಿಸಮಾನವಾಗಿ ಸಾಗಲೇಬೇಕು. ಅಂತಹ ಆ ಗೃಹ ಶಿಕ್ಷಣವೇ ಶಾಲಾ ಶಿಕ್ಷಣಕ್ಕೆ ಅಸ್ತಿವಾರವಾಗುವದು.

ಮುಖ್ಯಾಧ್ಯಾಪಕರೂ ಅವರ ಕಾರ್ಯಕಲಾಪಗಳೂ

(ಸಪ್ಟಂಬರ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು)

ಇವೆಲ್ಲಕ್ಕೂ ಹೆಚ್ಚಿನದಾದ ಹೊಸ ಯುಗಕ್ಕೆ ಅನಿವಾರ್ಯವಾಗಿರುವ ಶಿಸ್ತು ಶಾಸನಗಳ ಮಟ್ಟನ್ನು ತಿಳಿದು ನಡೆಯಬಲ್ಲ ಚಾಣಾಕ್ಷನಾಗಿರಬೇಕು. ಇಷ್ಟೆಲ್ಲ ಗುಣ ಸಮುಚ್ಚಯವುಳ್ಳ ಅವಾವಧಾನಿಯೆನ್ನಿಸಿಕೊಂಡಾಗಲೆ ಮುಖ್ಯಾಧ್ಯಾಪಕನ ಹೊಣೆಗಾರಿಕೆಯ ಸ್ಥಾನವು ಅವನಿಗೆ ಯಶಸ್ಸು ಕೊಡಬಹುದೆಂಬುದು ನಿರ್ವಿವಾದವಾಗಿದೆ.

ತನ್ನ ವ್ಯವಸಾಯಬಂಧುಗಳಾದ ಶಿಕ್ಷಕರ ಸಂಗಡ ನಡೆದುಕೊಳ್ಳುವದು. ಒಂದು ದೊಡ್ಡ ಶಾಲೆಯಲ್ಲಿ ಬೇರೆ ಬೇರೆ ಬುದ್ಧಿಸಾಮರ್ಥ್ಯ ಶಿಕ್ಷಣ ಶಕ್ತಿಗಳಿರುವ, ಭಿನ್ನ ಭಿನ್ನ ಚಟ ಅಭ್ಯಾಸ ರೂಢಿಗಳಿರುವ, ನಾನಾತರದ ಅಭಿರುಚಿ ಜೀವನದ ಧ್ಯೇಯಗಳನ್ನು ಮುಂದಿಟ್ಟುಕೊಂಡಿರುವ, ಹಲವು ಶಿಕ್ಷಕರಿರುವರು. ಕೆಲವರು ಟ್ರೇಂಡರಿರುವರು; ಕೆಲವರು ಅಂಟ್ರೇಂಡರಿರುವರು. ಕೆಲವರು ಸ್ಥಾನಿಕ ಅನುಕೂಲ್ಯಗಳುಳ್ಳವರಿದ್ದರೆ ಕೆಲವರು ಪರಸ್ಥಳದಿಂದ ಬಂದ ಅನನುಭವಿಕರೂ ಹಲವು ಅಡಚಣೆಗಳುಳ್ಳವರೂ ಇರುವರು. ಕೆಲವರು ದುರಭಿಮಾನ ಅಧಿಕಾರ ಪ್ರೀತಿ ಅವಿಧೇಯತೆ ಮುಂತಾದ ಅವಗುಣಗಳಿಂದ ಕೂಡಿದವರಿದ್ದರೆ ಕೆಲವರು ವಿಧೇಯರೂ ಆಸ್ಥೆಯಿಂದ ದುಡಿಯುವವರೂ ತಮಗೆ ಒಪ್ಪಿಸಿದ ಸಾಲೆಯ ಅಭ್ಯಾಸಕ್ರಮಕ್ಕೆ ಸೇರಿದ ಇಲ್ಲವೆ ಹೊರಗಿನ ಎಲ್ಲ ಬಗೆಯ ಕೆಲಸಗಳನ್ನು ನಿರ್ವಂಚನೆಯಿಂದ ನೆರವೇರಿಸುವ ಗುಣವುಳ್ಳ ಕಾರ್ಯದಕ್ಷರಿರುವರು. ಮುಖ್ಯಾಧ್ಯಾಪಕನು ಈ ಎಲ್ಲ ತರಗತಿ ಪರಿಸ್ಥಿತಿಗಳ ಶಿಕ್ಷಕರ ವೈಯಕ್ತಿಕ ಗುಣಾವಗುಣಗಳನ್ನೂ ನ್ಯೂನಾಧಿಕ್ಯಗಳನ್ನೂ ಅವರವರ ಸಂಬಂಧದಿಂದ ತಾನು ಮಾಡಬೇಕಾದ ಕಾರ್ಯಕಲಾಪಗಳನ್ನೂ ಮೊತ್ತಮೊದಲು ಅರಿತುಕೊಳ್ಳಬೇಕು. ಮತ್ತು ಆಯಾ ಶಿಕ್ಷಕರು ಆಧುನಿಕ ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸುವ ಎಲ್ಲ ಬಗೆಯ ಸುಧಾರಣೆಗಳ ಗುಟ್ಟನ್ನು ಅರಿತುಕೊಳ್ಳುವಂತೆ ಯತ್ನಿಸಬೇಕು. ಬೇರೆ ಬೇರೆ ವಿಷಯಗಳನ್ನು **ಕಲಿಸುವದು ಬೇರೆ;** ಆಯಾ ವಿಷಯಗಳು ವಿದ್ಯಾರ್ಥಿಗಳಿಗೆ **ಸರಿಯಾಗಿ ಅವಗತವಾಗುವಂತೆ ಸಂಸ್ಕಾರ ಮಾಡಿಕೊಡುವದು ಬೇರೆ;** ಎಂಬದನ್ನು ಎಲ್ಲರೂ ಅರಿತುಕೊಂಡು ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಬಾಲಬಾಲಿಕೆಯರಿಗೆ ಒಳ್ಳೆಯ ಅಭಿರುಚಿಯನ್ನೂ ಸುಸಂಸ್ಕೃತ ಚಟ

ಅಭ್ಯಾಸ ರೂಢಿಗಳನ್ನೂ ಸರಿಯಾದ ಕ್ರಮದಿಂದ ವಿಚಾರ ಮಾಡುವದನ್ನೂ ಕಲಿಸಬೇಕಾಗುವದು. ಮುಖ್ಯಾಧ್ಯಾಪಕನು ಈ ಎಲ್ಲ ಗೊತ್ತುಗುರಿಗಳನ್ನು ಮುಂದಿಟ್ಟುಕೊಂಡು ಇಡಿಯ ಶಾಲೆಯ ಮತ್ತು ಅದಕ್ಕೆ ಸಂಬಂಧಿಸುವ ಶಿಕ್ಷಕ ವರ್ಗದ ಕಾರ್ಯಕಲಾಪಗಳನ್ನು ನೋಡುತ್ತಿರಬೇಕಾಗುವದು. ಶಾಲೆಯೊಳಗಿನ ಶಿಕ್ಷಕವರ್ಗವು ತಮ್ಮತಮ್ಮೊಳಗೆ ವೈಮನಸ್ಯವನ್ನಾಗಲಿ ಅನವಶ್ಯಕವಾದ ಮಾತ್ಸರ್ಯಮೂಲಕ ಮೇಲಾಟಗಳನ್ನಾಗಲಿ ನಡೆಯಿಸದಂತೆ ನೋಡಿಕೊಳ್ಳಬೇಕು. ಮತ್ತು ತನ್ನ ವಿಷಯದಲ್ಲಿಯೂ ಅವರಲ್ಲಿ ವಿರೋಧಭಾವವುಂಟಾಗದಂತೆ ಎಚ್ಚರಗೊಳ್ಳಬೇಕಾಗುವದು. ಮುಖ್ಯಾಧ್ಯಾಪಕನೂ ಎಲ್ಲ ಶಿಕ್ಷಕರೂ ತಮ್ಮ ಸಂಸ್ಥೆಯ ಸರ್ವತೋಮುಖವಾದ ಉತ್ಕರ್ಷವೆಂಬ ಒಂದೇ ಒಂದು ಧ್ಯೇಯವನ್ನು ಮುಂದಿಟ್ಟುಕೊಂಡು ಪರಸ್ಪರ ಬಂಧುಭಾವದಿಂದ ನಡೆದುಕೊಳ್ಳುವದು ಈ ಸಂಸ್ಥೆಯ ಹಾಗು ಮುಖ್ಯಾಧ್ಯಾಪಕನ ಹಿತದ ದೃಷ್ಟಿಯಿಂದ ಅತ್ಯಾವಶ್ಯಕವಾದ ಮಾತಾಗಿದೆ.

ವಿದ್ಯಾರ್ಥಿಗಳ ಸಂಬಂಧ:— ನಮ್ಮಲ್ಲಿಯ ಮಧ್ಯಮ ತರಗತಿಯ ಶಾಲೆಯಲ್ಲಿ ಸರ್ವಸಾಧಾರಣವಾಗಿ ನೂರಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವರು. ಹಿಂದೆ ಹೇಳಿದಂತೆ ಅವರೆಲ್ಲರ ಗುಣಾವಗುಣಗಳನ್ನು ಮುಖ್ಯಾಧ್ಯಾಪಕನು ವೈಯಕ್ತಿಕವಾಗಿ ಅರಿತುಕೊಂಡು ಅವರ ಸಂಗಡ ನಡೆದುಕೊಳ್ಳಬೇಕಾಗುವದು. ಶಾಲೆಗೆ ಬರುವ ವಿದ್ಯಾರ್ಥಿಗಳು ಮುಖ್ಯಾಧ್ಯಾಪಕನಾಗಲಿ ವರ್ಗದ ಶಿಕ್ಷಕರಾಗಲಿ ಮಾಡಿದ್ದನ್ನೆಲ್ಲ ಮಾಡಿಸಿಕೊಳ್ಳುವ ಇಲ್ಲವೆ ಅವರು ಒತ್ತುವ ಮುದ್ರೆಯನ್ನು ಒತ್ತಿಸಿಕೊಳ್ಳುವಂಥ ಮಣ್ಣುಗೊಂಬೆಗಳಲ್ಲವೆಂಬದನ್ನು ಯಾರೂ ಮರೆಯುವಂತಿಲ್ಲ. ಅವರಲ್ಲಿ ಕೆಲವರು ಕುಶಾಗ್ರಬುದ್ಧಿಯವರೂ ಚಟುವಟಿಕೆಯುಳ್ಳವರೂ ಮತ್ತೆ ಕೆಲವರು ಮಂದಬುದ್ಧಿಯವರೂ ಆಳಸಿಗಳೂ ಇರುವರು. ಆಧುನಿಕ ಶಾಲೆಯ ಮುಖ್ಯಾಧ್ಯಾಪಕನು ತನ್ನ ಎಲ್ಲ ವಿದ್ಯಾರ್ಥಿಗಳ ವೈಯಕ್ತಿಕ ಕುಂದುಕೊರತೆಗಳನ್ನು ಅರಿತುಕೊಂಡು ಅವರವರ ಆಶೆ ಆಕಾಂಕ್ಷೆಗಳನ್ನು ಕಂಡುಕೊಂಡು ಅವರವರ ಮನಃಸ್ಥಿತಿ ಪೂರ್ವಸಂಸ್ಕಾರಗಳನ್ನು ತಿಳಿದುಕೊಂಡು ಎಲ್ಲರ ಮನೋವಿಕಾಸ ಶಾರೀರಿಕ ಶಕ್ತಿಗಳ ಬೆಳೆವಣಿಗೆ ನೈತಿಕ ಸಂಸ್ಕಾರಗಳನ್ನು ಗುರಿಯಾಗಿಟ್ಟುಕೊಂಡು ಕೆಲಸಮಾಡಬೇಕಾಗುವದು.

ಪಾಲಕರ ಸಂಬಂಧ:— ನಮ್ಮ ದೇಶದಲ್ಲಿ ಪಾಲಕ ವರ್ಗವು ಹೆಚ್ಚು ಸುಸಂಸ್ಕೃತವಾಗಿರುವದಿಲ್ಲ. ದೊಡ್ಡ ದೊಡ್ಡ ನಗರಗಳನ್ನು ಬಿಟ್ಟರೆ ಹಳ್ಳಿಯ ಬಹುಜನ ಸಮಾಜವು ಇನ್ನೂ ಅಶಿಕ್ಷಿತ ಸ್ಥಿತಿಯಲ್ಲಿಯೇ ಇರುವದು. ಅವರಿಗೆ

ಮಕ್ಕಳ ಸಂಬಂಧದಿಂದ ತಮ್ಮ ಮೇಲಿರುವ ಹೊಣೆಗಾರಿಕೆಯ ಅರಿವು ಇರುವದಿಲ್ಲ. ತಮ್ಮ ಮಕ್ಕಳಿಗೆ ಯಾವ ಬಗೆಯ ಶಿಕ್ಷಣವು ದೊರೆಯಬೇಕು ? ಅವರ ಮುಂದಿನ ಜೀವನಕ್ಕೆ ಅನುಗುಣವಾದ ಶೈಕ್ಷಣಿಕ ಸಂಸ್ಕಾರವು ಯಾವದು? ಇವೇ ಮುಂತಾದ ಯಾವ ಸಂಗತಿಗಳನ್ನೂ ಅವರು ಅರಿಯರು; ಇಷ್ಟೇ ಅಲ್ಲ. ಶಾಲಾ ಸಂಸ್ಕಾರಕ್ಕೂ ಅವರ ಗೃಹ ಸಂಸ್ಕಾರಕ್ಕೂ ಯಾವ ಸಂಬಂಧವೂ ಇರುವದಿಲ್ಲ. ತಮ್ಮ ಮಕ್ಕಳಿಗೆ ಬೇಕಾಗುವ ಉಡುಗೆ ತೊಡುಗೆ ಪಾಟಿ ಪುಸ್ತಕಗಳು ಇವನ್ನು ಒದಗಿಸಿ ಕೊಟ್ಟು ತಿಂಗಳು ತಿಂಗಳಿಗೆ ಸಲ್ಲಿಸಬೇಕಾದ ಫೀ ಹಣವನ್ನು ಕೊಡುವದಕ್ಕೂ ಮಕ್ಕಳನ್ನು ವೇಳೆಗೆ ಸರಿಯಾಗಿ ಶಾಲೆಗೆ ಕಳಿಸುವದಕ್ಕೂ ಅವರು ಮುಂದೆ ಬಂದರೆ ಶಿಕ್ಷಕನ ದೃಷ್ಟಿಯಿಂದ ಅವರು ಮಾಡತಕ್ಕದ್ದನ್ನೆಲ್ಲ ಮಾಡಿದರೆಂದು ಸಂತೋಷದಿಂದ ಒಪ್ಪಿಕೊಳ್ಳಬೇಕಾಗುವದು. ಈ ಮಾತು ಸುಶಿಕ್ಷಿತರಾದ ಮಧ್ಯಮ ತರಗತಿಯ ಜೀವನದ ಪಾಲಕರಿಗಷ್ಟೇ ಅನ್ವಯಿಸುವದು. ಅಶಿಕ್ಷಿತರೂ ಬಡವರೂ ಆದ ಪಾಲಕರಿಂದ ಶಿಕ್ಷಕರಿಗೆ ದೊರೆಯುವ ನೆರವಿನ ಮಾತನ್ನು ಇಲ್ಲಿ ವಿವರಿಸಲು ಬರಲಾರದು. ಅವರಿಂದ ತಮ್ಮ ಮಕ್ಕಳ ಶಿಕ್ಷಣಕ್ಕೆ ದೊರೆಯುವ ಅನುಕೂಲತೆಗಳಿಗಿಂತ ಪ್ರತಿಕೂಲತೆಗಳೇ ಹೆಚ್ಚಾಗಿರುವವು. ಮುಖ್ಯಾಧ್ಯಾಪಕರು ಇಂಥ ಸ್ಥಿತಿಯಲ್ಲಿ ತಮ್ಮ ಸಂಸ್ಥೆಗೆ ವಿದ್ಯಾರ್ಥಿಗಳ ಪಾಲಕರಿಂದ ಸಹಾಯವನ್ನು ಅಪೇಕ್ಷಿಸುವದಾಗಲಿ, ತಮ್ಮ ದಿನಚರ್ಯೆಯಲ್ಲಿ ಅವರ ನೆರವನ್ನು ಬಯಸುವದಾಗಲಿ, ಶಾಲಾ ಶಿಕ್ಷಣಕ್ಕೆ ಅನುಗುಣವಾದ ಗೃಹ ಶಿಕ್ಷಣವನ್ನು ಇಂಥ ಪಾಲಕರಿಂದ ಕೋರುವದಾಗಲಿ ತೀರ ಅಸಂಭವನೀಯವಾದ ಮಾತೆನಿಸುವದು. ಹೀಗಿದ್ದರೂ ಮುಖ್ಯಾಧ್ಯಾಪಕರು ತಮ್ಮ ವಿದ್ಯಾರ್ಥಿಗಳ ಪಾಲಕರನ್ನು ಮರೆತರೆ ಕೆಲಸವಾಗದು. ಅಯಾ ಶಿಕ್ಷಕರು ತಮ್ಮ ತಮ್ಮ ಸ್ಥಾನಿಕ ಪರಿಸ್ಥಿತಿಗೆ ಅನುಗುಣವಾಗಿ ಯುಕ್ತಿ-ಪ್ರಯುಕ್ತಿಗಳಿಂದ ಪಾಲಕರಿಂದ ತಮ್ಮ ಕಾರ್ಯಕ್ಕೆ ತಕ್ಕಷ್ಟು ಸಹಾಯ ಸಹಾನುಭೂತಿಗಳನ್ನು ಪಡೆದುಕೊಳ್ಳಬೇಕಾಗುವದೆಂಬ ಒಂದೇ ಮಾತನ್ನು ಇಲ್ಲಿ ಹೇಳಲು ಸಾಧ್ಯವಾಗಿದೆ.

ಗುಣವಿಶೇಷಗಳು:— ಆಧುನಿಕ ಶಾಲೆಗಳ ಮುಖ್ಯಾಧ್ಯಾಪಕನು ಕೈಮಿದುಳು ಅಂತಃಕರಣ ಈ ಮೂರರ ಕಾರ್ಯಗಳಲ್ಲಿಯೂ ದಕ್ಷನಾದ ಕಲಾಕುಶಲನಾಗಿರಬೇಕಾಗುವದು. ಅವನು ಸ್ವತಃ ದುಡಿಯಲು ಸದಾಸಿದ್ಧನಾಗಿರಬೇಕು. ವಿಷಯಜ್ಞಾನ, ವಿದ್ವತ್ತೆ, ಅನುಭವ, ಯುಕ್ತಿಪ್ರಯುಕ್ತಿಗಳು, ಸಾಂತರೀತಿಯಿಂದ ವಿಚಾರಮಾಡಿ ಸುಸ್ಪಷ್ಟವಾದ ನಿರ್ಣಯಕ್ಕೆ ಮುಟ್ಟುವ ವಿಚಾರಕ್ರಮ ಇವು ಆತನಲ್ಲಿರಬೇಕಾದ ಮಿದುಳಿನ ಗುಣವಿಶೇಷಗಳು. ಮತ್ತು ಅಂತಃಕರಣದಲ್ಲಿ ತನ್ನ ವಿದ್ಯಾರ್ಥಿಗಳ ಮತ್ತು ಕೈಕೆಳಗಿನ ಶಿಕ್ಷಕವರ್ಗದ ವಿಷಯದಲ್ಲಿ ಪ್ರೀತಿ ಸಹಾನುಭೂತಿ ಸಮಭಾವ ಮತ್ತು ಅವರೆಲ್ಲರ ಹಿತಚಿಂತನ

ಇವುಗಳನ್ನು ತಳೆದಿರಬೇಕು. ಆತನಲ್ಲಿ ಪ್ರಸನ್ನವಾದ ಮುಖಮುದ್ರೆಯಿಂದೊಡ ಗೂಡಿದ ಆದರ್ಶವ್ಯಕ್ತಿತ್ವವಿದ್ದು ಅದು ತುಂಬ ಆಕರ್ಷಕವೂ ಅಚಲವೂ ಬಲಶಾಲಿಯಾದದ್ದೂ ಇರಬೇಕಾಗುವದು.

ಬೇರೆ ಬೇರೆ ವಿಷಯಗಳ ಕೂಲಂಕಷವಾದ ಸಂಪೂರ್ಣಜ್ಞಾನ, ವರ್ಗದ ಕೋಣೆಗಳಲ್ಲಿ ಪ್ರತ್ಯಕ್ಷ ಕಲಿಸುವದರ ಅನುಭವ, ಮೇಲ್ವಿಚಾರಣೆಯ ಕಟ್ಟು ನಿಟ್ಟುಗಳು, ವ್ಯಾವಹಾರಿಕ ಆಡಳಿತೆಯ ಕುಶಲತೆ, ಇವೆಲ್ಲವನ್ನೂ ಮೀರಿದ ಶಿಕ್ಷಣದಿಂದ ಘಟಿಸುವ ಸಮಾಜಜೀವನದ ಅಸ್ಥಿವಾರ, ಶಿಕ್ಷಣಪದ್ಧತಿಗಳು, ಮುನ್ನೋಟ (ಯಾರಾದರೂ ತನ್ನ ಕಡೆಗೆ ಬಂದರೆ ಅವರು ಇಂಥ ಕೆಲಸಕ್ಕೇ ಬಂದಿರುವರೆಂಬದನ್ನು ಮುಂಗಂಡು ಮಾತಾಡುವದು) ಶಾಲಾ ಗೃಹಕ್ಕೆ ಸಂಬಂಧಿಸಿದ ಅಲ್ಲಿರುವ ಸಾಧನಸಾಮಗ್ರಿಗಳು ಸಮಾಜದ ಆರ್ಥಿಕ ಮತ್ತು ಸಾಮೂಹಿಕ ಚಟುವಟಿಕೆಗಳು ಇವುಗಳ ಗುಟ್ಟುಮುಟ್ಟುಗಳು ಇವನ್ನೆಲ್ಲ ತಿಳಿದಿರಬೇಕು. ಆತನು ಆಧುನಿಕ ಶೈಕ್ಷಣಿಕ ಮಾನಸಶಾಸ್ತ್ರದ ಹಾಲುಂಡು ಬೆಳೆದ ಕರುವಾಗಿರಬೇಕು; ಮತ್ತು ಭಾವನಾಪ್ರವಾಹದಲ್ಲಿ ಸಿಕ್ಕಾಗ ಅದರ ಸೆಳವಿಗೆ ಒಳಗಾಗದೆ ಈಸಿ ಪಾರಾಗಬಲ್ಲ ಅಂಬಿಗನಾಗಿರಬೇಕು. ಅವನು ಸಮುದ್ರದಲ್ಲಿಯ ಹಡಗಿಗೆ ದೀಪಸ್ತಂಭದ ಬೆಳಕಿನಂತೆಯೋ ಧ್ರುವತಾರೆಯಂತೆಯೋ ಆಗಿರಬೇಕು ತನ್ನ ಶಾಲಾಪರಿವಾರದವರ ಬುದ್ಧಿ ಮನಸ್ಸು ಆತ್ಮ ಅಂತಃಕರಣ ಇವುಗಳ ಕೇಂದ್ರವಾಗಿರಬೇಕು. ಹೀಗಿದ್ದರೆ ಮಾತ್ರ ಆತನ ಶಾಲೆಯ ಪ್ರಗತಿಯು ಉಚ್ಚ ಉಚ್ಚತರ ಉಚ್ಚತಮ ಸ್ಥಿತಿಗಳನ್ನು ಪಡೆಯಲು ಸಾಧ್ಯವಾಗಬಹುದು. ಕಾರ್ಯೋತ್ಸಾಹ, ಸಲಕರಣೆಗಳನ್ನು ಜರಿಸಿಕೊಳ್ಳುವ ಜಾಣ್ಮೆ, ಚಿಕ್ಕಮಕ್ಕಳ ನಡತೆಯಲ್ಲಿ ಕಂಡುಬರುವ ಗುಣದೋಷಗಳನ್ನು ಕಂಡುಹಿಡಿಯುವ ಚಾಣಾಕ್ಷತನ, ಮಾರ್ಗದರ್ಶಿತ್ವ, ಕರ್ತವ್ಯಪಾಲನೆಯಲ್ಲಿ ಅವಿಚಲವಾದ ಶ್ರದ್ಧೆ ಮತ್ತು ಪರಿಶ್ರಮ ಇವುಗಳಿಂದ ಆತನು ತನ್ನ ಓರಗೆಯ ಮುಖ್ಯಾಧ್ಯಾಪಕರನ್ನು ಮೀರಿದವನಾಗಿರಬೇಕು.

ಕಾರ್ಯಕಲಾಪಗಳು:— ಇಡಿಯ ಶಾಲೆಯ ಕಾರ್ಯಕಲಾಪಗಳು ಯಾವ ಕಟ್ಟಳೆಗೆ ಅನುಗುಣವಾಗಿ ನಡೆಯಬೇಕೆಂಬದನ್ನು ನಿರ್ಣಯಿಸಿಕೊಂಡು ಅದರಂತೆ ಕಾರ್ಯ ನಡೆಯಿಸುವದಕ್ಕೆ ಮುಖ್ಯಾಧ್ಯಾಪಕನೇ ಹೊಣೆಗಾರನು. ಮತ್ತು ತನ್ನ ವಿಶಾಲವೂ ವಿವಿಧವೂ ಆದ ಅನುಭವದ ಬಲದಿಂದ ಆಯಾ ವರ್ಗಗಳ ಶಿಕ್ಷಕರೂ ಕೂಡ ಯಾವ ತತ್ತ್ವವನ್ನು ಮುಂದಿಟ್ಟುಕೊಂಡು ತಮ್ಮ ತಮ್ಮ ವರ್ಗಗಳಲ್ಲಿ ಕೆಲಸ ಮಾಡಬೇಕೆಂಬದನ್ನು ಕೂಡ ವಿಶೇಷ ಸಂದರ್ಭ-ಗಳಲ್ಲಿ ಅವನು ತನ್ನ ಸಹಾಯಕ ಶಿಕ್ಷಕರಿಗೆ ಸೂಚಿಸಬೇಕಾಗುವದು.

ಶಿಸ್ತು ಕಾದುಕೊಳ್ಳುವದು :— ಶಾಲೆಯ ಸುವ್ಯವಸ್ಥೆ, ಓರಣ, ಅಚ್ಚು-ಕಟ್ಟುತನ, ಕಟ್ಟುನಿಟ್ಟಿನ ನಡತೆ ಯೋಗ್ಯವಾದ ನ್ಯಾಯ ನಿರ್ಣಯ, ಇವಕ್ಕೆಲ್ಲ ಶಾಲೆಯಲ್ಲಿಯ ಶಿಸ್ತೇ ಕಾರಣವಾಗಿರುವದು. ಮತ್ತು ಆಧುನಿಕ ಶಾಲೆಗಳ ಮುಖ್ಯಾಧ್ಯಾಪಕರಲ್ಲಿ ಈ ಶಿಸ್ತಿನ ನಡತೆಯು ಪರಮಾವಧಿಗೆ ಮುಟ್ಟಿರಬೇಕಾಗುವದು. ಶಾಲೆಯೊಳಗಿನ ಪ್ರತಿ ವ್ಯಕ್ತಿಯೂ ಮುಖ್ಯಾಧ್ಯಾಪಕ ಅಧಿಕಾರವನ್ನು ಮನ್ನಿಸಲೇಬೇಕು. ಮತ್ತು ಅವನ ಅಸ್ತಿತ್ವವನ್ನು ಒಪ್ಪಿಕೊಳ್ಳಲೇಬೇಕು. ಇದಿಷ್ಟೇ ಅಲ್ಲ ಅದರ ಬಗ್ಗೆ ಯಾರೂ ಯಾವ ಸಂದರ್ಭದಲ್ಲಿಯೂ ಪ್ರತಿಯಾಡಕೂಡದು; ಯಾವ ಸಂದರ್ಭದಲ್ಲಿಯೂ ಕಕ್ಷಿಯನ್ನೆತ್ತಲೇಕೂಡದು. ಮುಖ್ಯಾಧ್ಯಾಪಕನ ಆಳಿಕೆಯ ಸಾಮರ್ಥ್ಯವು ಇಷ್ಟು ಬಿಗಿಯಾಗಿರಬೇಕು. "ಇದು ಹೆಡ್-ಮಾಸ್ತರನ ಹೇಳಿಕೆ" ಎಂದು ಆಡಿಕೊಳ್ಳುವಂತೆ ಶಾಲೆಯಲ್ಲಿ ಅದೊಂದು ವಾಡಿಕೆಯು ನಾಣ್ಣುಡಿಯಾಗಿರಬೇಕು. ಆದರೆ ಮುಖ್ಯಾಧ್ಯಾಪಕನ ಈ ಬಗೆಯ ಶಿಸ್ತುಗಾರಿಕೆಯಲ್ಲಿಯ ಕಟ್ಟುನಿಟ್ಟುಗಳು ಜಾಣತನವನ್ನು ಅನುಸರಿಸಿದವಿರಬೇಕು. ಎಷ್ಟೋ ಶಿಕ್ಷಕರು ತಮ್ಮ ಕಟ್ಟಳೆಯೇ ತಮಗೆ ಬಾಧಕವಾಗಿ ಪರಿಣಮಿಸಲು ತಮ್ಮ ಅಸ್ತಿತ್ವವನ್ನು ಕೂಡ ಕಳೆದುಕೊಂಡ ಉದಾಹರಣೆಗಳಿವೆ. ಜಾಣತನದ ಮುನ್ನೋಟವಿಲ್ಲದೆ ಕಟ್ಟಳೆಗಳನ್ನು ಮಾಡಿದರೆ ಇಂಥ ಅಜಾಗರೂಕತೆಯ ಪರಿಣಾಮವು ಘಟಿಸಬಹುದು. ಮನಮುಟ್ಟಿ ಕೆಲಸ ಮಾಡುವ ಮತ್ತು ಮನಸ್ಸಿಗೆ ಹಚ್ಚಿಕೊಳ್ಳುವ ಗುಣವುಳ್ಳವರಿಗೆ ಅಯೋಗ್ಯವಾದ ಬಿಗುವುಳ್ಳ ಆಳಿಕೆಯಿಂದ ನಿರುತ್ಸಾಹವುಂಟಾಗುವ ಸಂಭವವಿದೆ. ಶಾಲೆಯ ಶಿಸ್ತಿನ ಕಟ್ಟಳೆಗಳು ತನ್ನ ಮತ್ತು ತನ್ನವರ ನಡತೆಯನ್ನು ತಿದ್ದಿ ಕಾರ್ಯೋತ್ಸಾಹವನ್ನು ಹೆಚ್ಚಿಸುವದಕ್ಕೆ ಸಹಾಯಕವಾಗಿರಬೇಕು. ಮತ್ತು ಆ ಕಟ್ಟಳೆಗಳನ್ನು ಗೊತ್ತುಪಡಿಸುವಾಗ ಮುಖ್ಯಾಧ್ಯಾಪಕನು ಈ ಮಾತನ್ನು ಮುಂದಿಟ್ಟುಕೊಂಡೇತೀರಬೇಕು. ಆತನು ನೂತನ ಸಾಮಾಜಿಕ ಜೀವನದ ಮತ್ತು ಬೌದ್ಧಿಕ ಸಂಸ್ಕಾರಗಳ ಸಂದರ್ಭಗಳನ್ನು ಮುಂಗಂಡು ಸ್ವತಂತ್ರ ಕಾರ್ಯೋತ್ಸಾಹವನ್ನು ಪ್ರಕಟಿಸಲು ಅನುವು ಇಟ್ಟುಕೊಂಡೇ ಕಟ್ಟಳೆಗಳನ್ನು ಮಾಡಿಕೊಳ್ಳಬೇಕು. ಮತ್ತು ಒಮ್ಮೆ ಹೀಗೆ ಕಟ್ಟಳೆಗಳನ್ನು ಮಾಡಿಕೊಂಡು ಅದನ್ನು ಪ್ರಚಾರದಲ್ಲಿ ತಂದಬಳಿಕ ಅದಕ್ಕೆ ವಿರೋಧವುಂಟಾದಲ್ಲಿ ಅತಿಶಯ ಧೈರ್ಯದಿಂದ ಆ ವಿರೋಧವನ್ನು ಬಗ್ಗುಬಡಿಯಲೇಬೇಕು. ವಿರೋಧವೆ ಹುಟ್ಟದಂತೆ ನೋಡಿಕೊಳ್ಳುವದು ಜಾಣತನದ ಮೊದಲನೆಯ ಕೆಲಸ; ವಿರೋಧಿಗಳಿಗೆ ಶಿಕ್ಷೆಯನ್ನು ವಿಧಿಸುವ ಸಂದರ್ಭವುಂಟಾಗದಂತೆ ನೋಡಿಕೊಳ್ಳುವದು ಅದರ ಮುಂದಿನ ಮೆಟ್ಟಲು. ಪರಿಸ್ಥಿತಿಯ ಮೂಲಕ ಅಂಥ ಸಂದರ್ಭವೆ ಉಂಟಾದರೆ ಅದಕ್ಕೆ ಅಳುಕಿ ಬಳುಕದೆ ಹೆದರಿ ಹಿಂಜರಿಯದೆ

ತನ್ನ ಅಧಿಕಾರವನ್ನು ಉಪಯೋಗಿಸಿ ವಿರೋಧಿಗಳನ್ನು ಸದೆಬಡಿಯುವದಕ್ಕೆ ಹಿಂದುಮುಂದು ನೋಡದಿರುವದು ಕೊನೆಯ ಕೆಲಸ.

ಶಾಲೆಯಲ್ಲಿ ಶಿಸ್ತನ್ನು ಕಾದುಕೊಳ್ಳುವದಕ್ಕೆ ಶಿಕ್ಷೆಯೆಂಬ ಕೊನೆಯ ಉಪಾಯವೊಂದಿದೆಯೆಂಬದನ್ನು ಒಪ್ಪಿಕೊಳ್ಳಬೇಕು. ಆದರೆ ಹಟಮಾರಿಗಳೂ ದುರ್ಗುಣಿಗಳೂ ಆದ ಬಾಲಕ ಬಾಲಿಕೆಯರನ್ನಾಗಲಿ ಸುಳ್ಳುಹೇಳುವ ಇಲ್ಲವೆ ಕಳವು ಮಾಡುವವರನ್ನಾಗಲಿ ತಿದ್ದುವದಕ್ಕೆ ಶಾರೀರಿಕ ಶಿಕ್ಷೆಯನ್ನು ವಿಧಿಸುವದು ಬೈಯುವದು ಅವರಿಗೆ ನಾಚಿಕೆ ಬರುವಂತೆ ಮಾಡುವದು ಮುಂತಾದ ಉಪಾಯ-ಗಳು ಇವೇ ಯೋಗ್ಯಸಾಧನಗಳೆಂದು ಮಾತ್ರ ತಿಳಿದುಕೊಂಡಿರಲಾಗದು. ಮತ್ತು ಇಂಥ ದೋಷಗಳುಳ್ಳ ವಿದ್ಯಾರ್ಥಿಗಳ ಬಗ್ಗೆ ತನ್ನ ಮನಸ್ಸಿನ ಶಾಂತಿ ಸಮಭಾವಗಳನ್ನು ಕಳೆದುಕೊಂಡು ಯಾವ ಕಾರ್ಯವನ್ನೂ ಮಾಡಕೂಡದು. ಶಾರೀರಿಕ ಶಿಕ್ಷೆಯು ಶಾಲಾಸಂವಿಧಾನದಲ್ಲಿ ಕೊನೆಯ ಮತ್ತು ತೀರ ಅಪರೂಪ-ವಾಗಿ ಪ್ರಯೋಗಿಸಲ್ಪಡುವ ಉಪಾಯವೆಂಬುದನ್ನೂ ತೀರ ಅನಿವಾರ್ಯವಾದ ಮತ್ತು ಅತ್ಯಾವಶ್ಯಕವೆನಿಸಿದ ಸಂದರ್ಭದಲ್ಲಿಯೇ ಮುಖ್ಯಾಧ್ಯಾಪಕನು ಅದನ್ನು ಹೊರಗೆ ತೆಗೆಯುವನೆಂಬದನ್ನೂ ವಿದ್ಯಾರ್ಥಿಗಳು ತಿಳಿದುಕೊಂಡಿರಬೇಕು. ತಿರಕೆ-ಗಾಗಿ ಮನೆಮನೆಗೆ ಹೋಗುವ ಹಾವುಗಾರನ ಬುಟ್ಟಿಯೊಳಗಿನ ಹಾವಿನಂತೆ ಶಾರೀರಿಕ ಶಿಕ್ಷೆಯು ಅಡಿಗಡಿಗೆ ಹೊರಗೆ ಬರಹತ್ತಿದರೆ ಅದಕ್ಕೆ ಆ ಹಾವಿನಷ್ಟೇ ಬೆಲೆಯಾಗಿ ಮುಖ್ಯಾಧ್ಯಾಪಕನು ಹಾವುಗಾರನಂತೆ ಹಿಡಿ ಕಾಳಿಗೆ ಮಾತ್ರ ಅರ್ಹನೆನಿಸುವನು.

ಮುಖ್ಯಾಧ್ಯಾಪಕನು ಚಿಕ್ಕ ಬಾಲಕರನ್ನೂ ಪ್ರಬುದ್ಧ ವಿದ್ಯಾರ್ಥಿಗಳನ್ನೂ ಒಂದೇರೀತಿಯಾಗಿ ನಡೆಯಿಸಿಕೊಳ್ಳಲು ಹವಣಿಸಲಾಗದು. ಕೆಳಗಿನ ತರಗತಿ ಗಳಲ್ಲಿ ಓದುತ್ತಿರುವ ಚಿಕ್ಕ ಮಕ್ಕಳು ಶಿಕ್ಷಕನ ಹೇಳಿಕೆಯನ್ನು ತರ್ಕವಿತರ್ಕ ಮಾಡದೆ ಒಪ್ಪಿಕೊಳ್ಳಬಹುದು. ಆದರೆ ೧೫-೧೬ ವರ್ಷ ವಯಸ್ಸಾದ ವಿದ್ಯಾರ್ಥಿ ಗಳು ಶಿಕ್ಷಕನು ಹೇಳಿದ ನ್ಯಾಯನಿರ್ಣಯವನ್ನಾಗಲಿ ವಿಧಿನಿಷೇಧಗಳನ್ನಾಗಲಿ ತರ್ಕದ ಒರೆಗಲ್ಲಿಗೆ ಒಡ್ಡದೆ ಒಪ್ಪಿಕೊಳ್ಳಲಾರರು. ಶಿಕ್ಷಕನು ತನಗೆ ವಿಧಿಸಿದ ಶಿಕ್ಷೆಯನ್ನು ಒಪ್ಪಿಕೊಳ್ಳುವದಕ್ಕಿಂತ ಮೊದಲು ಅವರು ತಾವು ಮಾಡಿದ ಅಪರಾಧ ವೇನೆಂಬದನ್ನು ತಿಳಿದುಕೊಳ್ಳಲು ಬಯಸುವರು. ಅಧುನಿಕ ಶಾಲೆಗಳ ಮುಖ್ಯಾ ಧ್ಯಾಪಕನು ಇಂಥ ಸಂದರ್ಭಗಳಲ್ಲಿ ಬೆತ್ತವನ್ನು ಎತ್ತಲು ಹವಣಿಸದೆ ವಿದ್ಯಾರ್ಥಿ ಗಳ ಚಿತ್ತವನ್ನು ದಂಡಿಸಲು ಆತುರಗೊಳ್ಳುವನು. ಅವನು ತನ್ನ ಶಾಲೆಯಲ್ಲಿಯ ವಿದ್ಯಾರ್ಥಿಗಳ ಸಂಘಗಳನ್ನು ಏರ್ಪಡಿಸಿ ಅವುಗಳ ಮೂಲಕ

ವಿದ್ಯಾರ್ಥಿಗಳು ಸಾಮೂಹಿಕ ನಿರ್ಬಂಧಗಳನ್ನು ಅನುಸರಿಸಿ ನಡೆದು ತಮ್ಮ ಸ್ವಂತವನ್ನು ತಾವೇ ಕಲಿತು ಆಚರಿಸುವ ಉಪಾಯಗಳನ್ನು ಯೋಜಿಸಿಕೊಂಡಿರುವನು.

ಒಬ್ಬ ತುಂಟ ವಿದ್ಯಾರ್ಥಿಯು ಶಿಕ್ಷಕನು ಸಿಟ್ಟಿಗೆದ್ದು ಹೊಡೆಯುವ ನಾಲ್ಕು ಏಟ್ಟುಗಳನ್ನು ಸುಮ್ಮನೆ ತಾಳಿಕೊಂಡು ಮರುದಿನವೇ ಆ ನೋವನ್ನೆಲ್ಲ ಮರೆತು ಬಿಡಬಹುದು. ಆದರೆ ಓರಗೆಯ ಗೆಳೆಯರಾದ ವಿದ್ಯಾರ್ಥಿಗಳು ತನ್ನ ದುರ್ನಡತೆಗಾಗಿ ಆಡುವ ನಿಂದಾವ್ಯಂಜಕ ಮಾತುಗಳನ್ನಾಗಲಿ ಅವರು ತನ್ನಿಂದ ದೂರ ಸರುವದನ್ನಾಗಲಿ ಎಂದೂ ಸಹಿಸಿಕೊಳ್ಳಲಾರನು. ಶಾಲೆಯಲ್ಲಿಯ ಅತಿ ನಿರ್ಬಂಧದ ವಾತಾವರಣದಲ್ಲಿ ಬೆಳೆದ ಹುಡುಗರು ಮುಂದಿನ ಸ್ವಾತಂತ್ರ್ಯದ ಜೀವನದಲ್ಲಿ ಕಾಲಿಟ್ಟಕೂಡಲೆ ನಿರಂಕುಶ ಪ್ರವೃತ್ತಿಗೆ ಒಳಗಾಗಿ ನಡೆಯುವ ಉದಾಹರಣೆಗಳಿಷ್ಟೋ ಇವೆ. ತಂದೆಯು ಇರುವವರೆಗೂ ಚಹಾ ಕುಡಿಯು ವಾಗದೆಂಬ ಒಂದು ಕಟ್ಟಳೆಗೆ ಅಕ್ಷರಶಃ ಒಳಗಾದ ಪ್ರಬುದ್ಧನೊಬ್ಬನು ತಂದೆಯು ತೀರಿಕೊಂಡ ದಿನವೇ ಹತ್ತು ಕಪ್ಪು ಚಹಾ ಕುಡಿದ ಉದಾಹರಣೆ ಯಿದೆಯಂತೆ. ಶಾಲೆಯ ಶಿಸ್ತಿನ ದುಷ್ಪರಿಣಾಮವು ಮುಂದಿನ ಆಯುಷ್ಯದಲ್ಲಿ ಈ ರೀತಿ ನಿರಂಕುಶ ಪ್ರವೃತ್ತಿಗೆ ಕಾರಣವಾಗದಂತೆ ನೋಡಿಕೊಳ್ಳುವದು ಕೂಡ ಮುಖ್ಯಾಧ್ಯಾಪಕನ ಮುನ್ನೋಟದಲ್ಲಿರಬೇಕು.

ಶಿಕ್ಷಣದ ಧೋರಣೆ:— ಶಾಲಾಶಿಕ್ಷಣದ ಪರಿಣಾಮವನ್ನು ಅಳೆಯುವ ನಕ್ಕೆ ಪರೀಕ್ಷೆಯ ಪರಿಣಾಮವೆಂಬ ಅಳತೆಯ ಕೋಲನ್ನು ಉಪಯೋಗಿಸುವದು ತೀರ ಹಳೆಯ ಮಾತು. ನನ್ನ ಶಾಲೆಯ ವಾರ್ಷಿಕ ಪರೀಕ್ಷೆಯಲ್ಲಿ ಅಥವಾ ಮುಲ್ಕಿ ಪರೀಕ್ಷೆಯಲ್ಲಿ ನೂರಕ್ಕೆ ಇಷ್ಟರಂತೆ ವಿದ್ಯಾರ್ಥಿಗಳು ಪಾಸಾಗುವರು; ಆದ್ದರಿಂದ ನಮ್ಮ ಶಾಲೆಯಲ್ಲಿ ಶಿಕ್ಷಣವು ಸುಸಂಗತವಾಗಿ ಸಾಗಿದೆ, ಎಂದು ಹೇಳುವ ಶಿಕ್ಷಕನು ಅಂಚಿನ ಧೋತರ ಜರದ ರುಮಾಲಗಳನ್ನು ಉಡುತೊಡುವ ಎಲೆಯಡಕೆಯ ಚಂಚಿಯ ಹಿಂದಿನ ಶತಮಾನದ ಮುಖ್ಯಾಧ್ಯಾಪಕನೆಂಬ ಹೆಸರಿಗೆ ತಕ್ಕವನಾಗುವನು. ಆಧುನಿಕ ಮುಖ್ಯಾಧ್ಯಾಪಕನು ಆ ಪರೀಕ್ಷೆಯ ಪರಿಣಾಮವನ್ನು ಆ ವಿದ್ಯಾರ್ಥಿಗಳು ಪ್ರಚಲಿತ ಜಗತ್ತಿನ ವಿಶಾಲವಾದ ಸಂಸಾರ ಸಾಗರದಲ್ಲಿ ಇಳಿದು ಜೀವಿಸಬೇಕೆನ್ನುವಾಗ ಅವರಲ್ಲಿ ಕಂಡುಬರುವ ಜೀವನ ಕ್ರಮ ತೃಪ್ತಿಕರವಾದ ನಡತೆ ಇವುಗಳ ಪರೀಕ್ಷೆಗಳಿಗೂ ಅನ್ವಯಿಸಿಕೊಳ್ಳಬೇಕು. ಅಭ್ಯಾಸಪತ್ರಿಕೆಯ ಸಂಯೋಜನೆ ಮಾನಸಿಕ ಶಕ್ತಿಗನುಸಾರವಾಗಿ ವಿದ್ಯಾರ್ಥಿ ಗಳನ್ನು ವರ್ಗೀಕರಿಸುವದು, ಶೈಕ್ಷಣಿಕ ಪ್ರಪಂಚದಲ್ಲಿ ನಡೆದಿರುವ ಬದಲಾವಣೆಗೆ ಅನುಸಾರವಾದ ಹೊಸಹೊಸ ಪ್ರಯೋಗಾನುಭವಗಳನ್ನು ಕಂಡುಕೊಳ್ಳುವದು ಅಭ್ಯಾಸ ಪತ್ರಿಕೆಯ ಹೊರಗಿನ ಚಟುವಟಿಕೆಗಳಿಗೆ ತುಂಬ ಪ್ರೋತ್ಸಾಹನೆ

ಕೊಡುವದು ಇವೇ ಮೊದಲಾದುವು ಆಧುನಿಕ ಪ್ರಾಗತಿಕ ಶಾಲೆಯು ಧೋರಣ
ವಾಗಬೇಕು.

ಶಾಲೆಯು ಕೆಲಸದ ಹಂಚುವಿಕೆ :— ಮುಖ್ಯಾಧ್ಯಾಪಕನು ತನ್ನ ಅ
ಕಾರ ಇಚ್ಛೆಗಳಿಗೆ ಮಹತ್ವಕೊಟ್ಟು ಶಿಕ್ಷಕರಿಗೆ ರುಚಿಸದ ಇಲ್ಲವೆ ಅವರ ಮನಸ್ಸ
ಮೆಚ್ಚದ ವಿಷಯಗಳನ್ನು ಕಲಿಸಬೇಕೆಂದು ನಿರ್ಬಂಧಪಡಿಸಲಾಗದು. ಅವನ
ತನ್ನ ಶಾಲೆಯಲ್ಲಿ ಕೆಲಸಮಾಡುವ ಪ್ರತಿ ಶಿಕ್ಷಕನ ವಿಶೇಷ ಅಭಿರುಚಿಗಳು, ವಿದ್ಯತ್ತ್ವ
ಶಾರೀರಿಕ ಸ್ಥಿತಿಗತಿಗಳು, ದೌರ್ಬಲ್ಯ, ಮತ್ತು ಸಾಮಾನ್ಯ ವ್ಯಾವಹಾರಿಕ ನಡ
ಇವನ್ನು ಕಂಡುಕೊಂಡು ಅವರವರಿಗೆ ಅನುಗುಣವಾದ ಕೆಲಸಗಳನ್ನು ಒಪ್ಪಿ
ಬೇಕು. ಗಣಿತದಲ್ಲಿ ಅಭಿರುಚಿಯುಳ್ಳವನಿಗೆ ಭಾಷೆಯನ್ನು ಕಲಿಸುವದಕ್
ನಿಯಮಿಸುವದು, ಮುಂಗೋಪಿಯಾದವನನ್ನು ಚಿಕ್ಕಮಕ್ಕಳ ವರ್ಗವನ್ನು ಕಲಿ
ತೊಡಗಿಸುವದು, ಕೋಲುಕುದುರೆಯ ಆಧಾರದಿಂದ ನಡೆಯುವವನನ್ನ
ಶಾರೀರಿಕ ಶಿಕ್ಷಣದ ಮೇಲ್ವಿಚಾರಣೆಗೆ ನಿಯಮಿಸುವದು ಇವೆಲ್ಲ ನಡೆಯುದಂ
ಮುಖ್ಯಾಧ್ಯಾಪಕನು ನೋಡಿಕೊಳ್ಳಬೇಕು. ಹೀಗಾದರೆ ಮಾತ್ರ ಶಾಲಾ ಶಿಕ್ಷಣಕ್ಕ
ತಕ್ಕ ದಾರಿಯಲ್ಲಿ ಸಾಗಿ ಒಳ್ಳೆಯ ಪರಿಣಾಮವನ್ನು ಸಾಧಿಸಲು ಅನುಕೂ
ವಾಗುವದು.

ಮೇಲ್ವಿಚಾರಣೆ :— ತನ್ನ ಶಾಲೆಯಲ್ಲಿ ನಡೆದಿರುವ ಶಿಕ್ಷಣದ ಸ್ಥಿತಿಗ
ಗಳನ್ನು ತಿಳಿದುಕೊಳ್ಳುವದು ಮುಖ್ಯಾಧ್ಯಾಪಕನ ಎಲ್ಲ ಕಾರ್ಯಕಲಾಪಗಳಲ್ಲಿ
ಅತಿ ಮುಖ್ಯವೂ ಅತಿ ಕಠಿನತರವೂ ಆದ ಕಾರ್ಯವು. ಆಧುನಿಕ ಕಾಲದಲ್ಲಿ
ಮುಖ್ಯಾಧ್ಯಾಪಕ ಮೇಲ್ವಿಚಾರಣೆಯ ಕಾರ್ಯಕ್ಕೆ ಅತಿ ಮಹತ್ವವುಂಟಾಗಿದೆ
ಶಾಲೆಯೊಳಗಿನ ಶಿಕ್ಷಕರಲ್ಲಿ ಸಹಕಾರ ಸಂಘಟನೆಗಳನ್ನು ಉಂಟುಮಾಡಿ ಕಡಿವೆ
ತರಗತಿಯವರಲ್ಲಿಯೂ ಕೂಡ ಹೆಚ್ಚಿನ ತರಗತಿಯವರಷ್ಟೇ ಉತ್ಸಾಹ ಕಾರ್ಯಾ
ಸಕ್ತಿಗಳನ್ನು ಹುಟ್ಟಿಸಿ ಎಲ್ಲರಿಂದಲೂ ಹೆಚ್ಚಿನ ಕೆಲಸವನ್ನು ಮಾಡಿಸಿಕೊಳ್ಳುವ
ಜಾಣ್ಮೆಯು ಮುಖ್ಯಾಧ್ಯಾಪಕನ ಮೇಲ್ವಿಚಾರಣೆಯ ಕೌಶಲ್ಯದಿಂದಲೇ ಸಾಧ್ಯ
ವಾಗುವದೆಂದು ಹೇಳುವದುಂಟು.

ಆಧುನಿಕ ಶಾಲೆಯ ಮುಖ್ಯಾಧ್ಯಾಪಕನು ಹೊಸ ಕಾಲದ ಬೇರೆ ಬೇರೆ
ಶಿಕ್ಷಣ ಪದ್ಧತಿಗಳು ಯೋಗ್ಯ ಜ್ಞಾನವುಳ್ಳವನಾಗಿದ್ದು ಅವನ್ನು ತನ್ನ ಕೈಕೆಳಗಿನ
ಶಿಕ್ಷಕರ ಶಿಕ್ಷಣಕ್ರಮದ ಒರೆಗೆ ಉಪಯೋಗಿಸಿಕೊಳ್ಳುವ ಹತೋಟಿಯನ್ನು ಕಂಡು
ಕೊಂಡಿರಬೇಕು. ಅವನು ತನ್ನ ಶಾಲೆಯೊಳಗಿನ ಇತರ ಶಿಕ್ಷಕರನ್ನು ಸ್ನೇಹಿತ
ರಂತೆಯೇ ನಡಿಸಿಕೊಳ್ಳುವ ಮತ್ತು ಅವರನ್ನು ತುಂಬ ಸಹಾನುಭೂತಿಯಿಂದ
ನೋಡುವ ಸ್ವಭಾವದವನಾಗಿರಬೇಕು. ಅವನು ತನ್ನ ಶಿಕ್ಷಕವರ್ಗದ ಕೆಲಸ

ವನ್ನು ಕದ್ದುಮುಚ್ಚಿ ನೋಡುವ ಇಲ್ಲವೆ ಟೀಕೆಮಾಡುವ ಪ್ರವೃತ್ತಿಯನ್ನು ತೋರಿಸಲಾಗದು. ಇದರಿಂದ ಅವರ ಮನಸ್ಸಿನಲ್ಲಿ ಮುಖ್ಯಾಧ್ಯಾಪಕನ ಸರಳ ಮನೋವೃತ್ತಿಯ ಬಗ್ಗೆ ಸಂಶಯವು ತಲೆದೋರಿ ತಮ್ಮ ಕೆಲಸಕ್ಕೆ ಇವನಿಂದ ತಡೆಯುಂಟಾಗುವದೆಂಬ ಭಾವನೆಯವರಾಗಬಹುದು. ಮುಖ್ಯಾಧ್ಯಾಪಕನು ತನ್ನ ಸಹಾಯಕ ಶಿಕ್ಷಕರ ಗುಣದೋಷಗಳನ್ನು ವರ್ಗದ ವಿದ್ಯಾರ್ಥಿಗಳ ಮುಂದೆ ಎಂದೂ ನಿರೂಪಿಸಬಾರದು; ಅಥವಾ ಟೀಕೆ ಮಾಡಬಾರದು. ಆದರೆ ಅಂಥ ಸಂದರ್ಭವೊದಗಿದಾಗ ಅವರನ್ನು ತನ್ನ ಕಚೇರಿಯ ಕೋಣೆಗೊ ಅಥವಾ ಬೇರೊಂದು ಸ್ಥಳಕ್ಕೆ ಕರೆಯಿಸಿಕೊಂಡು ತಕ್ಕ ಪ್ರಶ್ನೋತ್ತರಗಳಿಂದ ಅವರ ದೋಷವನ್ನು ಅವರಿಗೆ ಒಪ್ಪಿಸಿಕೊಟ್ಟು ಸುಧಾರಣೆಯ ಮಾರ್ಗವನ್ನು ಸೂಚಿಸಬೇಕು. ಅವರು ಅನುಸರಿಸುವ ಶಿಕ್ಷಣ ಪದ್ಧತಿ, ಹತೋಟಿ, ವಿದ್ಯಾರ್ಥಿಗಳಿಂದ ಅಪೇಕ್ಷಿಸುವ ಪರಿಣಾಮ ಇವುಗಳ ಬಗ್ಗೆ ತಕ್ಕ ಚರ್ಚೆ ನಡೆಯಿಸಿ ಅವರನ್ನು ಸಮಾಧಾನ ಪಡಿಸಿ ಸರಿಯಾದ ಮಾರ್ಗವನ್ನು ತೋರಿಸಿಕೊಟ್ಟು ಸಮಾಧಾನದಿಂದ ನಡೆಯಿಸಿಕೊಳ್ಳಬೇಕು. ತಾನು ಹಿಡಿದ ಮೊಲಕ್ಕೆ ಮೂರೇ ಕಾಲೆಂಬುವ ಧೋರಣೆಯಾಗಲಿ ತಾನು ತೋರಿಸಿದ್ದೇ ಪೂರ್ವದಿಕ್ಕೆಂಬುವ ಅಧಿಕಾರದ ದರ್ಪವಾಗಲಿ ಈ ಸಂದರ್ಭದಲ್ಲಿ ಅಷ್ಟು ಪರಿಣಾಮಕಾರಿಯಾಗದು; ಇಷ್ಟೇ ಅಲ್ಲ ; ಅದು ಅವನ ಕೆಲಸಕ್ಕೂ ವಿದ್ವತ್ತೆ–ಅಧಿಕಾರಬಲಾವಣೆ ಮುಂತಾದವುಗಳಿಗೂ ತಡೆಯನ್ನುಂಟುಮಾಡುವ ಪ್ರವೃತ್ತಿಯನ್ನು ಶಿಕ್ಷಕವರ್ಗದಲ್ಲಿ ಹುಟ್ಟಿಬೆಳೆಯಿಸಲು ಕಾರಣವಾಗಬಹುದು ಅವನು ಹಿತ್ತಾಳೆಯ ಕಿವಿಯವನು ಇಲ್ಲವೆ ಹರಿವೆಯ ಬಾಯಿಯವನು ಎಂದೂ ಆಗಿರಲಾಗದು.

ಕೆಲಕೆಲವು ವಿಶೇಷ ಸಂಗತಿಗಳನ್ನು ಶಿಕ್ಷಕರೆಲ್ಲರು ಕೂಡಿದ ಆಪ್ತಾಲೋಚನೆಯ ಸಭೆಯಲ್ಲಿ ಯಾರನ್ನೂ ವೈಯಕ್ತಿಕವಾಗಿ ಎತ್ತಿ ಆಡದೆ ಚರ್ಚಿಸಿ ಕೆಲವೊಂದು ನಿರ್ಣಯಕ್ಕೆ ಮುಟ್ಟುವದೂ ಕೂಡ ಎಷ್ಟೋ ಸಾರೆ ಹಿತಕರವಾಗಿ ಪರಿಣಮಿಸುವದು. ಇಂಥದನ್ನು ಹೀಗೆಯೇ ಮಾಡಿರೆಂದು ಹೇಳುವದು ಕಟ್ಟಿಕೊಟ್ಟ ಬುತ್ತಿಯಂತೆ ಆರ್ಧದಾರಿಗೆ ಸರಿದುಹೋಗಬಹುದು. ಕೆಲವೊಂದು ನಿಯಮಿತ ಕಾಲಾವಧಿಗೆ ಒಮ್ಮೆ ಶಿಕ್ಷಕರೆಲ್ಲರೂ ಸೇರಿ ಇಂಥ ಸಭೆ ನಡೆಯಿಸುವದು ದೊಡ್ಡ ದೊಡ್ಡ ಶಾಲೆಗಳಲ್ಲಿ ತುಂಬ ಹಿತಕರವಾಗುವದು. ಈ ಸಮಯದಲ್ಲಿ ಮುಖ್ಯಾಧ್ಯಾಪಕನು ಇಡಿಯ ಶಾಲೆಯ ಆಡಳಿತೆ, ಶಿಸ್ತು ಮುಂತಾದವುಗಳಿಗೆ ಸಂಬಂಧಿಸಿದ ತನ್ನದೇ ಅಧಿಕಾರಕ್ಕೆ ಒಳಪಡುವ ವಿಚಾರಗಳನ್ನು ಕೂಡ ತನ್ನ ಶಿಕ್ಷಕವರ್ಗದ ಮುಂದಿರಿಸಿ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳಬಹುದು. ಶಾಲೆಯ ಸಾಮೂಹಿಕ ಕೆಲಸ, ಆಟ ನೋಟಗಳು, ಸಾರ್ವಜನಿಕ

ಉತ್ಸವ ಸಮಾರಂಭಗಳು, ಅಭ್ಯಾಸಪತ್ರಿಕೆಯ ಹೊರಗಿನ ಎಲ್ಲ ಚಟುವಟಿಕೆಗಳು ಇವನ್ನು ಇಂಥ ಸಭೆಯಲ್ಲಿಯೇ ಚರ್ಚಿಸಿ ನಿರ್ಣಯಿಸಿಕೊಂಡು ಅವುಗಳ ರೂಪ ರೇಷೆಯನ್ನು ಗುರುತಿಸಿಕೊಳ್ಳುವದು ತುಂಬ ಹಿತಕರವು.

ಆಟನೋಟಗಳು :— ತನ್ನ ಶಾಲೆಯ ಬೌದ್ಧಿಕ ಮತ್ತು ನೈತಿಕ ಪ್ರಗತಿಯನ್ನು ಬಯಸುವಾಗ ಮುಖ್ಯಾಧ್ಯಾಪಕನು ತನ್ನ ವಿದ್ಯಾರ್ಥಿಗಳ ವರ್ಗದ ಶಾರೀರಿಕ ಶಿಕ್ಷಣ ಮತ್ತು ಉಚ್ಚಭಾವನೆಗಳ ವಿಕಾಸ ಇವನ್ನು ಮರೆತು ಕೆಲಸ ಮಾಡಿದರೆ ಸಾಗದು. ಶಾರೀರಿಕ ವ್ಯಾಯಾಮಗಳೂ ಆಟಗಳೂ ಶಾಲೆಯ ಸರ್ವ ಸಾಮಾನ್ಯ ಪ್ರಗತಿಗೆ ಅತಿ ಮಹತ್ವದ ಸಹಾಯವನ್ನು ನೀಡುವವು. ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಪರಸ್ಪರ ಪ್ರೇಮಸಂಬಂಧವನ್ನು ಬೆಳೆಯಿಸಲು ಇದರಲ್ಲಿರುವಷ್ಟು ಎಲ್ಲ ಅನುಕೂಲತೆಯು ಬೇರೆ ಎಲ್ಲಿಯೂ ಇಲ್ಲ. ಇವು ಸರಿಯಾಗಿ ನಡೆದಿರುವ ಶಾಲೆಯು ಬಾಲಬಾಲಿಕೆಯರಿಗೆ ತಮ್ಮ ಸ್ವಂತ ಮನೆಯೆಂದೇ ಭಾಸವಾಗ ಬಹುದು. 'ಶಾಲೆಯು ವಿದ್ಯಾರ್ಥಿಗಳಿಗೆ ಎಲ್ಲ ವಿಧದ ಸಂಸ್ಕಾರಗಳನ್ನು ಒದಗಿಸುವ ಮನೆಯಾಗಬೇಕು' ಎಂಬುದು ನೂತನ ಶಿಕ್ಷಣದ ಒಂದು ಅತಿ ಮುಖ್ಯವಾದ ಲಕ್ಷಣ. ಮುಖ್ಯಾಧ್ಯಾಪಕನು ವಯೋವೃದ್ಧನಾಗಿದ್ದುದರಿಂದ ಇಲ್ಲವೆ ಬೇರೆ ಯಾವದಾದರೂ ಕಾರಣದಿಂದ ಆತನು ಆಟಪಾಟಗಳಲ್ಲಿ ಪ್ರತ್ಯಕ್ಷ ಭಾಗ ವಹಿಸಲು ಸಾಧ್ಯವಿಲ್ಲದಿರುವ ಸಂದರ್ಭದಲ್ಲಿ ತನ್ನ ಕೈಕೆಳಗಿನ ಶಿಕ್ಷಕರನ್ನು ಆ ಕೆಲಸಕ್ಕೆ ಪ್ರೋತ್ಸಾಹಿಸಿ ಅವರಿಂದ ಆ ಎಲ್ಲ ಕೆಲಸಗಳನ್ನು ಸುವ್ಯವಸ್ಥಿತವಾಗಿ ನಡೆಯಿಸಿ ಕೊಳ್ಳುವ ಹತೋಟಿಯನ್ನಾದರೂ ಸಾಧಿಸಿಕೊಂಡಿರಬೇಕು. ಅವನು ಶಾರೀರಿಕ ವ್ಯಾಯಾಮಗಳೂ ಆಟಪಾಟಗಳೂ ನಡೆದಿರುವಲ್ಲಿಗೆ ಆಗಾಗ ಹೋಗಿ ನೋಡುತ್ತಿರಬೇಕು. ಅವನ ಮುಖಲಕ್ಷಣ ಮತ್ತು ನಡೆವಳಿ ಇವೆಲ್ಲ ವಿದ್ಯಾರ್ಥಿಗಳನ್ನೂ ಶಿಕ್ಷಕರನ್ನೂ ಪ್ರೋತ್ಸಾಹಿಸುವಂಥವಿರಬೇಕು. ಬೇರೆ ಬೇರೆ ವರ್ಗಗಳ ವಿದ್ಯಾರ್ಥಿಗಳ ನಡುವೆ, ಶಿಕ್ಷಕರು ವಿದ್ಯಾರ್ಥಿಗಳ ನಡುವೆ, ಪಂದ್ಯಾಟಗಳನ್ನು ನಡೆಯಿಸುವದು, ಶಾರೀರಿಕ ಕಸರತ್ತುಗಳು ಆಟಗಳು ಇವುಗಳ ಪ್ರದರ್ಶನವನ್ನೇರ್ಪಡಿಸುವದು, ಇವುಗಳಿಂದ ಮುಖ್ಯಾಧ್ಯಾಪಕನು ಅವರಿಗೆ ಉತ್ತೇಜನಕೊಡುತ್ತಿರಬೇಕು.

ಅಭ್ಯಾಸಪತ್ರಿಕೆಯ ಹೊರಗಿನ ಚಟುವಟಿಕೆಗಳು :— ವಿದ್ಯಾರ್ಥಿಗಳಿಗೆ ಹಲಕೆಲವು ವಿಷಯಗಳನ್ನು ಕಲಿಸುವದಿಷ್ಟೇ ಆಧುನಿಕ ಶಾಲೆಯ ಧ್ಯೇಯವಲ್ಲ ವೆಂಬದನ್ನು ಹಿಂದೆಯೆ ಹೇಳಿದೆ. ಆಧುನಿಕ ಶಾಲೆಯ ಮುಖ್ಯಾಧ್ಯಾಪಕನು ತನ್ನ ಶಾಲೆಗೆ ಬರುವ ಪ್ರತಿ ವಿದ್ಯಾರ್ಥಿಯಲ್ಲಿ ಅಂತರ್ಭೂತವಾಗಿರುವ ಒಂದಿಲ್ಲೊಂದು ಬಗೆಯ ವೈಯಕ್ತಿಕ ಗುಣವಿಶೇಷಗಳನ್ನು ವಿಕಾಸಗೊಳಿಸುವ ಗುರಿ

ಯನ್ನಿಟ್ಟುಕೊಂಡು ಅವರೆಲ್ಲರ ಶಿಕ್ಷಣವನ್ನು ಸಾಗಿಸಬೇಕಾಗಿರುವದು. ನಮ್ಮ ಹಿಂದು ತತ್ತ್ವಜ್ಞಾನದ ಮೇರೆಗೆ ಪ್ರತಿ ಮಾನವನಿಗೂ ಅವನ ಪೂರ್ವ ಸಂಚಿತ ವೊಂದು ಇದ್ದೇ ಇರುವದಷ್ಟೇ? ಅದಕ್ಕನುಗುಣವಾಗಿ ಆಯಾ ವ್ಯಕ್ತಿಯಲ್ಲಿ ಬೇರೆಬೇರೆ ಶಾಸ್ತ್ರ ಕಲೆ ಜ್ಞಾನ ಇವುಗಳ ಸಂಚಿತವಿರುತ್ತಿದ್ದು ಮುಖ್ಯಾಧ್ಯಾಪಕನು ಅವರವರಿಗೆ ಅನುಗುಣವಾದ ರೀತಿಯಲ್ಲಿ ಪ್ರೋತ್ಸಾಹನೆ ಕೊಟ್ಟು ಒಳಗೆ ಅಡಗಿರುವ ಆ ಪೂರ್ವಜ್ಞಾನಪರಂಪರೆಯನ್ನು ವಿಕಾಸಗೊಳಿಸಿ ಬೆಳಕಿಗೆ ತರುವದಕ್ಕೆ ಯತ್ನಿಸಬೇಕಾಗುವದು. ಆದ್ದರಿಂದ ಆತನು ಅವರವರ ಆತ್ಮದ ಗುಟ್ಟನ್ನರಿತುಕೊಳ್ಳುವದು ಆವಶ್ಯಕವೆನಿಸುವದು. "ಬಹುರತ್ನಾ ವಸುಂಧರಾ" ಎಂಬಂತೆ ಭವಿಷ್ಯದ ನಾಗರಿಕರಾಗಲಿರುವ ಸದ್ಯದ ಶಾಲೆಯ ವಿದ್ಯಾರ್ಥಿಗಳಲ್ಲಿ ಅಡಗಿರುವ ಮಹಾಪುರುಷೋಚಿತವಾದ ಆತ್ಮವನ್ನು ಕಂಡುಕೊಳ್ಳುವದು ಶಿಕ್ಷಕರ ಕರ್ತವ್ಯ.

ಸಮುದ್ರವು ಬರಿಯ ತೆರೆಬುರುಗುಗಳಿಂದ ಮುಚ್ಚಿದ ಅಲ್ಲೋಲಕಲ್ಲೋಲವಾದ ಜಲರಾಶಿಯಷ್ಟೇ ಅಲ್ಲ; ಅದು 'ರತ್ನಾಕರ' ವೂ ಆಗಿದೆ. ಒಳಗೆ ಇಳಿದು ಮುಳುಗಿ ಮುತ್ತುರತ್ನಗಳನ್ನು ಎತ್ತಿ ತರಬಲ್ಲ ಜಾಣನಾದ ಜಾಲಗಾರನಿಗೆ ಈ ಮಾತು ಗೊತ್ತಿದೆ. ಹಾಗೆಯೇ ಜಾಣನಾದ ಶಿಕ್ಷಕನು ಮಾತ್ರ ತನ್ನ ವಿದ್ಯಾರ್ಥಿಗಳಲ್ಲಿ ಅಡಗಿರುವ ಬುದ್ಧಿಶಕ್ತಿಗಳನ್ನು ವಿಕಾಸಗೊಳಿಸಿ ಅವರನ್ನು ಲೋಕಮಾನ್ಯ ವ್ಯಕ್ತಿಗಳನ್ನಾಗಿ ಮಾರ್ಪಡಿಸಬಲ್ಲ ಮಾಟಗಾರನಾಗಿರುವನು. ಅಂತಹ ಶಕ್ತಿಯಿಲ್ಲದ ಶಿಕ್ಷಕನ ಕೈಯೊಳಗೆ ಸಿಕ್ಕ ವಿದ್ಯಾರ್ಥಿಗಳು ಆರರಿಯದ ಕಾಡಿನ ನಡುವೆ ಅರಳಿ ಸುವಾಸನೆ ಬೀರಿ ಬಾಡಿಹೋಗುವ ವನಕುಸುಮದಂತೆ ನಿರರ್ಥಕ ಜೀವಿಗಳಾಗಿ ಹೋಗುವ ಸಂಭವವಿದೆ.

ಜಾಣನಾದ ಶಿಕ್ಷಕನು ತನ್ನ ವಿದ್ಯಾರ್ಥಿಗಳು ಪ್ರಬುದ್ಧರಾಗುತ್ತ ಬಂದ ಹಾಗೆ ಅವರಿಗೆ ಸ್ವತಂತ್ರವಾಗಿ ವಿಚಾರಮಾಡಲು ಅನುವುಕೊಟ್ಟು, ತಮ್ಮ ದಾರಿಯಲ್ಲಿ ತಾವೇ ಕೆಲಸಮಾಡಲು ಬಿಟ್ಟುಬಿಟ್ಟು, ತಾನು ಕೇವಲ ಮಾರ್ಗದರ್ಶಿಯಾಗಿ ಉಳಿದು, ಅವರವರು ತಮತಮಗೆ ತಕ್ಕ ಶಾರೀರಿಕ-ಬೌದ್ಧಿಕ-ಸಾಮಾಜಿಕ ನೈತಿಕ ಮತ್ತು ನಾಗರಿಕ ಶಿಕ್ಷಣವನ್ನು ಪಡೆಯುವದಕ್ಕೆ ಅವಕಾಶವನ್ನು ಕಲ್ಪಿಸಿಕೊಡುವನು. ಅವನು ತನ್ನ ವಿದ್ಯಾರ್ಥಿಗಳಿಗೆ ಅವರ ಮನೋಭಾವಗಳಿಗೆ ಅನುಗುಣವಾದ ಬೇರೆ ಬೇರೆ ಉತ್ಪಾದಕ ಕಾರ್ಯಗಳಲ್ಲಿ ತೊಡಗಲು ಆವಶ್ಯಕವಿರುವ ನಾನಾಬಗೆಯ ಸಾಧನಸಾಮಗ್ರಿಗಳನ್ನೂ ಮಾರ್ಗಗಳನ್ನೂ ಕಲ್ಪಿಸಿಕೊಡಬೇಕು. ಅದಕ್ಕಾಗಿ ಆಧುನಿಕ ಶಾಲೆಯಲ್ಲಿ ಬೇರೆ ಬೇರೆ ಸಂಘ ಸಂಸ್ಥೆಗಳಿರಬೇಕಾಗುವದು. ಉದಾ :— ನಾಟಕ, ಹಾಡುಗಾರಿಕೆ, ಮಾಸಪತ್ರಿಕೆಯನ್ನು ನಡೆಯಿಸುವದು, ವಾದವಿವಾದ, ತೋಟದ ಕೆಲಸ, ಪ್ರಕೃತಿ ವಿಮರ್ಶೆಯ

ಕಾರ್ಯಗಳು, ಶುಶ್ರೂಷಾಪಥಕ, ಸ್ಕೌಟ ಗುಂಪುಗಳು, ವಸ್ತುಸಂಗ್ರಹಾಲಯದ ವಿಭಾಗ ಮುಂತಾದ ಬೇರೆ ಬೇರೆ ಚಟುವಟಿಕೆಗಳನ್ನು ಕೈಕೊಂಡು ತಮ್ಮ ಕೆಲಸವನ್ನು ತಾವೇ ಮೇಲ್ವಿಚಾರಣೆ ನಡೆಯಿಸಿಕೊಂಡು ಕೆಲಸ ಮಾಡುವದಕ್ಕೆ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಈ ಬಗೆಯ ಕಾರ್ಯ ಕಲಾಪಗಳಲ್ಲಿ ತೊಡಗಿದಾಗ ವಿದ್ಯಾರ್ಥಿಗಳಲ್ಲಿ ಅಡಗಿರುವ ಹಿಂದೆ ಹೇಳಿದಂಥ ಪೂರ್ವ ಸಂಸ್ಕೃತಿಯು ಬೆಳಕಿಗೆ ಬರಲು ಅನುವು ದೊರೆಯುವದು. ಇದರಿಂದ ಶಾಲಾಜೀವನವು ಸಾಮಾಜಿಕ ಜೀವನಕ್ಕೆ ಅನುರೂಪವಾಗಿ ಮಾರ್ಪಡುವದು. ಮತ್ತು ಶಾಲಾಶಿಕ್ಷಣದ ಪರಿಣಾಮವು ಒಳ್ಳೆಯದಾಗುವದಕ್ಕೂ ವಿದ್ಯಾರ್ಥಿಗಳು ತಮ್ಮ ಮುಂದಿನ ಜೀವನದಲ್ಲಿ ಕೈಕೊಳ್ಳಲಿರುವ ಕಾರ್ಯಕಲಾಪಗಳಿಗೆ ಅವಶ್ಯಕವಾದ ಶಿಕ್ಷಣವನ್ನು ಪಡೆಯುವದಕ್ಕೂ ತನ್ಮೂಲಕ ಶಾಲೆಯು ವಿದ್ಯಾರ್ಥಿಗಳಿಗೂ ಜನತೆಗೂ ಪ್ರಮಾಣವಾಗುವದಕ್ಕೂ ಶಾಲೆಯು ಕೀರ್ತಿಗೂ ಇದರಿಂದ ಸಹಾಯವಾಗುವದು. ಶಾಲೆಯಲ್ಲಿ ಕಲಿತ ವಿಷಯಗಳನ್ನು ಪ್ರತ್ಯಕ್ಷ ವ್ಯವಹಾರದಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ಅತಿ ಮಹತ್ವದ ಸಮಸ್ಯೆಯನ್ನು ಬಿಡಿಸುವದಕ್ಕೂ ಇಂಥ ಚಟುವಟಿಕೆಗಳು ಅತ್ಯಾವಶ್ಯಕವಾಗಿವೆ. ಮುಖ್ಯಾಧ್ಯಾಪಕನು ಇವನ್ನೆಲ್ಲ ತಾನೇ ನಡೆಯಿಸಬೇಕೆಂದಾಗಲಿ ತಾನೊಬ್ಬನೆ ಈ ಎಲ್ಲ ವಿವಿಧಕಾರ್ಯಗಳಲ್ಲಿ ಗತಿಯುಳ್ಳವನಿರಬೇಕೆಂದಾಗಲಿ ಯಾರೂ ಹೇಳುವದಿಲ್ಲ. ತನ್ನ ಶಾಲೆಯಲ್ಲಿಯ ಶಿಕ್ಷಕರಲ್ಲಿ ಆಯಾ ಕೆಲಸಕ್ಕೆ ತಕ್ಕ ಗುಣವಿಶೇಷಗಳಿರುವ ಶಿಕ್ಷಕರನ್ನು ಆರಿಸಿ ಅವರವರಿಗೆ ತಕ್ಕಂತೆ ಸಹಾಯ ಸಲಹೆಗಳನ್ನು ಕಲ್ಪಿಸಿ ಅವರು ಉತ್ಸಾಹದಿಂದ ಮುಂಬೆ ಬಂದು ಕೆಲಸಮಾಡುವದಕ್ಕೆ ತಕ್ಕ ವಾತಾವರಣವನ್ನುಂಟುಮಾಡಿಕೊಟ್ಟರೆ ಮುಖ್ಯಾಧ್ಯಾಪಕನು ತನ್ನ ಕೆಲಸವನ್ನು ಮಾಡಿದಂತಾಗುವದು. ಇದರಲ್ಲಿ ಶಾಲೆಯು ತನ್ನದು ಎನ್ನುವ ಆತ್ಮೀಯಭಾವನೆಯಿಂದ ಕೆಲಸಮಾಡಲು ಪ್ರತಿ ವ್ಯಕ್ತಿಗೂ ತಕ್ಕ ಪ್ರೋತ್ಸಾಹನೆ ದೊರೆತು ಅದು ಸರ್ವರಿಗೂ ಪ್ರಿಯಕರವಾದ ಸಂಸ್ಥೆಯಾಗುವದು.

ಶಾಲೆಯಲ್ಲಿ ಪ್ರಜಾಸತ್ತೆಯು ಒಂದು ಮಾದರಿಯೂ ಇರಬೇಕು :— ಮುಖ್ಯಾಧ್ಯಾಪಕನು ತನ್ನ ತೋರ್ಬೆರಳಿಗೆ ಅನುಗುಣವಾಗಿ ಶಾಲೆಯನ್ನು ಜರಿಸಲಿಚ್ಛಿಸುವ ಸರ್ವಾಧಿಕಾರಿಯಲ್ಲ. ಅವನು ಬೇಕಾದಷ್ಟು ಬುದ್ಧಿವಂತನಿರಲಿ, ಬೇಕಾದಷ್ಟು ಕೆಲಸ ಮಾಡಬಲ್ಲ ಶಕ್ತಿಯುಳ್ಳವನಿರಲಿ, ತನ್ನ ಶಿಕ್ಷಕವರ್ಗ ಮತ್ತು ವಿದ್ಯಾರ್ಥಿಗಳು ಇವರೆಲ್ಲರ ಅಂತಃಕರಣಪೂರ್ವಕವಾದ ಸಹಾಯ ಸಹಾನುಭೂತಿ, ಸಹಕಾರಗಳನ್ನು ಪಡೆದುಕೊಳ್ಳದೆ ಯಶಸ್ವಿಯಾಗಿ ಕೆಲಸ ಮಾಡುವದು ಅವನಿಗೆ ಸಾಧ್ಯವಾಗಲಾರದು. ಮುಖ್ಯಾಧ್ಯಾಪಕನು ಸೂತ್ರಧಾರಿ

ಅವನ ಸೂತ್ರಚಾಲನೆಗೆ ಅನುಗುಣವಾಗಿ ಶಾಲೆಯ ಬೇರೆಬೇರೆ ಭಾಗಗಳಲ್ಲಿ ಕಾರ್ಯಕಲಾಪಗಳು ಜರುಗಬೇಕು. ರಣಭೂಮಿಯಲ್ಲಿ ಸೇನಾಪತಿಯೇ ಯುದ್ಧವಾಡಿ ವೈರಿಗಳನ್ನು ಜಯಿಸುವನೇ? ಅವನ ಜಾಣತನದ ಅಪ್ಪಣೆಯಂತೆ ನಡೆಯುವ ಅಧಿಕಾರಿಗಳು ಸೈನಿಕರೇ ನಿಜವಾದ ಕೆಲಸಗಾರರು. ಇದೇ ಮೇರೆಗೆ ಶಾಲೆಯಲ್ಲಿ ವಿದ್ಯಾರ್ಥಿಗಳೂ ಶಿಕ್ಷಕವರ್ಗವೂ ಆರಿಸಿದ ಹಲಕೆಲವು ಮುಖ್ಯ ಕೆಲಸಗಾರರಿರುವ ಒಂದು ಸಂಘವು ಸ್ಥಾಪಿಸಲ್ಪಡಬೇಕು. ಅವರು ಶಾಲೆಯ ಮತ್ತು ಅದರ ಆವರಣದ ಸ್ವಚ್ಛತೆ, ಓರಣ, ವ್ಯವಸ್ಥೆ, ಅಚ್ಚುಕಟ್ಟುತನ ಮುಂತಾದುವನ್ನು ನೋಡಿಕೊಳ್ಳಬೇಕು. ಶಾಲೆಗೆ ಸಂಬಂಧಿಸಿದ ಆಟನೋಟಗಳು ಇತರ ಸಾರ್ವಜನಿಕ ಚಟುವಟಿಕೆಗಳು ಇವನ್ನೆಲ್ಲ ನಡೆಯಿಸಬೇಕು. ಇಂಗ್ಲಂಡ ಅಮೇರಿಕಾ ಮುಂತಾದ ಮುಂದುವರಿದ ದೇಶಗಳಲ್ಲಿ ಈ ಬಗೆಯಿಂದಲೇ ಕೆಲಸ ಸಾಗಿದೆ. ಎಂದಒಳಿಕ ನಮ್ಮ ದೇಶಕ್ಕೆ ಅನುಗುಣವಾದ ರೀತಿಯಲ್ಲಿ ತಕ್ಕ ಬದಲಾವಣೆಗಳೊಂದಿಗೆ ಈ ಎಲ್ಲ ಕಾರ್ಯಕಲಾಪಗಳು ನಮ್ಮ ಶಾಲೆಗಳಲ್ಲಿಯೂ ಯಾಕೆ ನಡೆಯಬಾರದು?

ಉಪಸಂಹಾರ:— ಆರಂಭದಲ್ಲಿ ಹೇಳಿದಂತೆ ಮುಖ್ಯಾಧ್ಯಾಪಕನು ಅಷ್ಟಾವಧಾನಿಯಾದಾಗಲೆ ಅವನಿಗೆ ಆ ಹೊಣೆಗಾರಿಕೆಯ ಸ್ಥಾನವು ಯಶಸ್ಸು ಕೊಡಬಹುದೆಂಬುದು ನಿರ್ವಿವಾದವಾಗಿದೆ. ತನ್ನ ಕೆಲಸಗಳ ಹೊಣೆಗಾರಿಕೆಯನ್ನರಿತು ಕಾರ್ಯಮಾಡುವದು, ತನ್ನ ಸಹವ್ಯವಸಾಯಿಗಳು ವಿದ್ಯಾರ್ಥಿಗಳು ಇತರರು ಇವರೊಡನೆ ತಕ್ಕ ಸಂಬಂಧವನ್ನಿಟ್ಟುಕೊಳ್ಳುವದು, ತನ್ನ ಗುಣವಿಶೇಷಗಳಿಂದ ಇತರರನ್ನು ಆಕರ್ಷಿಸಿಕೊಂಡು ಅವರಿಂದ ಕೆಲಸಮಾಡಿಸಿಕೊಳ್ಳುವದು, ಶಾಲೆಯ ಶಿಸ್ತನ್ನು ಕಾದುಕೊಳ್ಳುವದು—ಅದಕ್ಕೆ ತಕ್ಕಂತಹ ನಿಯಮನಡತೆಗಳನ್ನು ಸರ್ವರಿಗೂ ಅನುಕೂಲವಾದ ರೀತಿಯಲ್ಲಿ ರಚಿಸಿ ಕಾರ್ಯರೂಪಕ್ಕೆ ತರುವದು, ತನ್ನ ಶಾಲೆಯ ಶಿಕ್ಷಣದಲ್ಲಿ ಒಳ್ಳೆಯ ಧೋರಣೆಯನ್ನಿಟ್ಟುಕೊಳ್ಳುವದು, ಕೈಕೆಳಗಿನವರಲ್ಲಿ ಅವರವರಿಗೆ ಅನುಗುಣವಾದ ಕೆಲಸವನ್ನು ಹಂಚಿಕೊಟ್ಟು ಎಲ್ಲರ ಸಹಾಯ ಸಹಾನುಭೂತಿಗಳನ್ನು ಪಡೆದು ತಾನು ತಕ್ಕ ರೀತಿಯಲ್ಲಿ ಮೇಲ್ವಿಚಾರಣೆ ನಡೆಯಿಸುವದು, ಆಟನೋಟಗಳೇ ಮೊದಲಾದ ಶಾಲೆಯ ಅಭ್ಯಾಸಕ್ಕೆ ಸಂಬಂಧಿಸಿದ ಇಲ್ಲವೆ ಹೊರಗಿನ ಚಟುವಟಿಕೆಗಳನ್ನು ನಿಯಮಾನುರೋಧದಿಂದ ನೆರವೇರಿಸುವದು, ಶಾಲೆಯಲ್ಲಿ ಪ್ರಜಾಸತ್ತೆಯ ಮಾದರಿಗಳನ್ನು ಕಲ್ಪಿಸಿಕೊಟ್ಟು ಎಲ್ಲರಲ್ಲಿಯೂ ಅಧಿಕಾರವನ್ನು ಹಂಚಿಕೊಟ್ಟು ತಮ್ಮ ತಮ್ಮ ಗುಣವಿಶೇಷಗಳನ್ನು ವಿಕಾಸಗೊಳಿಸಿಕೊಳ್ಳಲು ತಕ್ಕ ಸಂದರ್ಭವನ್ನು ಕಲ್ಪಿಸಿಕೊಡುವದು ಇವೇ ಮುಖ್ಯಾಧ್ಯಾಪಕನ ಅವಧಾನವನ್ನು ಆಕರ್ಷಿಸಿಕೊಳ್ಳುವ

ಎಂಟು ವಿಧಾನಗಳು. ಇವನ್ನು ಅನುಲಕ್ಷಿಸಿ ಆ ಎಲ್ಲ ವಿಧಾನಗಳನ್ನು ಅಂಕಿತದಲ್ಲಿಟ್ಟುಕೊಂಡು ಕೆಲಸಮಾಡುವ ಮುಖ್ಯಾಧ್ಯಾಪಕನು ತನ್ನ ಎಲ್ಲ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಯಿಸಿ ಕೀರ್ತಿಶಾಲಿಯೂ ಸುಖಿಯೂ ಆಗುವನೆಂದು ಹೇಳಬಹುದು.

ವಿಜಾಪುರ ಪಟ್ಟಣದಲ್ಲಿಯ ಪ್ರಾಥಮಿಕ ಶಿಕ್ಷಣ

ವಿಜಾಪುರವು ಇತಿಹಾಸಪ್ರಸಿದ್ಧ ಪಟ್ಟಣವೆಂಬದು ಎಲ್ಲರಿಗೂ ತಿಳಿದ ಸಂಗತಿ. ಈಗ ಅದು ಮುಂಬೈ ಕರ್ನಾಟಕದಲ್ಲಿ ನಾಲ್ಕನೆಯ ದೊಡ್ಡ ಪಟ್ಟಣ ವೆನಿಸಿದೆ. ಈ ಪಟ್ಟಣದಲ್ಲಿಯ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯು ಅಲ್ಲಿಯ ಸ್ಥಾನಿಕ ಅಧಿಕಾರಿ ಸಂಘವಾದ ಮ್ಯುನಿಸಿಪಾಲಿಟಿಯ ಆಡಳತೆಗೆ ಒಳಗಾಗಿದೆ. ಕಳೆದ ೪೦ ವರುಷಗಳಲ್ಲಿ ಈ ಪಟ್ಟಣದ ಪ್ರಾಥಮಿಕ ಶಿಕ್ಷಣವು ಕೆಳಗೆ ತೋರಿಸಿದಂತೆ ಬೆಳೆದಿದೆ.

ವರುಷ	ಜನಸಂಖ್ಯೆ	ವಿದ್ಯಾರ್ಥಿಗಳು	ವಿದ್ಯಾರ್ಥಿನಿಯರು	ಜನಸಂಖ್ಯೆಗೆ ವಿ- ಪ್ರಮಾಣ
೧೯೦೧	೨೩೪೮೧	೧೬೦೯	೨೩೦	೭·೭
೧೯೪೧	೪೮೯೪೫	೪೪೩೭	೧೭೧೨	೧೩·೪

೧. ಪಟ್ಟಣದ ಜನಸಂಖ್ಯೆಯು ಈ ೩೦ ವರುಷಗಳಲ್ಲಿ ೧೦೦ ಕ್ಕೆ ೧೦೬ ರಷ್ಟು ಬೆಳೆದಿದೆ. ಆದರೆ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯು ಮಾತ್ರ ೧೦೦ ಕ್ಕೆ ೭೪ ರಷ್ಟೆ ಹೆಚ್ಚಿದೆ. ಅಂದರೆ ಜನಸಂಖ್ಯೆಯ ಬೆಳವಣಿಗೆಗೂ ವಿದ್ಯಾರ್ಥಿಗಳ ಬೆಳವಣಿಗೆಗೂ ಸಮತೆ ಕಂಡುಬರುವದಿಲ್ಲ. ಜನಸಂಖ್ಯೆಯು ಬೆಳೆದಂತೆ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯದಿದ್ದರೆ ನಮ್ಮಲ್ಲಿ ಅಶಿಕ್ಷಿತರ ಸಂಖ್ಯೆಯು ಬೆಳೆಯುತ್ತ ಹೋಗುವದು.

ಸಾಧಾರಣವಾಗಿ ಒಟ್ಟು ಜನಸಂಖ್ಯೆಗೆ ೧೦೦ ಕ್ಕೆ ೧೫ ರಂತೆ ಬಾಲ-ಬಾಲಿಕೆಯರು ಪ್ರಾಥಮಿಕ ಶಿಕ್ಷಣ ಪಡೆಯಲು ತಕ್ಕವರಿರುತ್ತಾರೆಂದು ಗ್ರಹಿಸಿದರೆ ಈ ಪಟ್ಟಣದಲ್ಲಿ ಇನ್ನೂ ಅನೇಕ ಬಾಲಬಾಲಿಕೆಯರು ಶಾಲೆಗಳ ಹೊರಗೆ ಇರುತ್ತಾರೆ. ಯಾಕಂದರೆ ಇಲ್ಲಿಯ ಶಾಲೆಗಳಲ್ಲಿಯ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯು ಜನಸಂಖ್ಯೆಯ ಮಾನಕ್ಕೆ ೧೦೦ ಕ್ಕೆ ೧೩·೪ ರಷ್ಟು ಮಾತ್ರ ಇರುವದು.

೨. ವಿದ್ಯಾರ್ಥಿಗಳ ಸಂಖ್ಯೆಗೂ ವಿದ್ಯಾರ್ಥಿನಿಯರ ಸಂಖ್ಯೆಗೂ ಇರುವ ವೈಷಮ್ಯ—೧೯೧೧ ರಲ್ಲಿ ೧೦೦ ವಿದ್ಯಾರ್ಥಿಗಳಲ್ಲಿ ಸರಾಸರಿ ಒಬ್ಬಳಂತೆ ವಿದ್ಯಾರ್ಥಿನಿಯು ಶಾಲೆಗೆ ಹೋಗುತ್ತಿದ್ದಳು. ಆದರೆ ಈಗ ೧೦೦ ವಿದ್ಯಾರ್ಥಿಗಳಲ್ಲಿ ೩೫ ವಿದ್ಯಾರ್ಥಿನಿಯರಂತೆ ಶಾಲೆಗೆ ಹೋಗುತ್ತಾರೆ. ಅಂದರೆ ಮೊದಲಿಗಿಂತಲೂ ಹೆಚ್ಚು ವಿದ್ಯಾರ್ಥಿನಿಯರು ಈಗ ಶಾಲೆಗೆ ಹೋಗುತ್ತಾರೆ. ನಿಜ: ಆದರೂ ಒಟ್ಟಿನಮೇಲೆ ನೋಡಿದರೆ ಇಲ್ಲಿ ಸ್ತ್ರೀ ಶಿಕ್ಷಣವು ಹಿಂದುಳಿದಿದೆಯೆಂಬ ಸಂಗತಿಯು ಒಡೆದುಕಾಣುವದು.

ಒಟ್ಟಿನಲ್ಲಿ ಹೇಳುವದಾದರೆ ಈ ಪಟ್ಟಣದಲ್ಲಿ ಪ್ರಾಥಮಿಕ ಶಿಕ್ಷಣವು ತಕ್ಕ ಮಟ್ಟಿಗೆ ಪ್ರಗತಿಹೊಂದಿದೆಯಾದರೂ ಇದರಲ್ಲಿ ಇನ್ನೂ ಹೆಚ್ಚು ಪ್ರಗತಿಯಾಗಲಿಕ್ಕೆ ಹೆಚ್ಚು ಅವಕಾಶವಿದೆ. ಆದ್ದರಿಂದ ಮ್ಯುನಿಸಿಪಲ್ ಬೋರ್ಡಿನವರು ಆದಷ್ಟು ಬೇಗ ಒತ್ತಾಯ ಶಿಕ್ಷಣದ ಮೂಲಕ ಬಾಲಕರನ್ನು ವಿಶೇಷವಾಗಿ ಬಾಲಕಿಯರನ್ನು ಶಾಲೆಗೆ ಬರಮಾಡಿಕೊಳ್ಳುವದು ಅತ್ಯವಶ್ಯವೆನಿಸುವದು.

ಸಿ. ಎಸ್. ಬೆನ್ನೂರ

ಔದ್ಯೋಗಿಕ ಶಿಕ್ಷಣ

ನಮ್ಮ ದೇಶದಲ್ಲಿ ನಿರುದ್ಯೋಗದ ಸಮಸ್ಯೆಯು ದಿನದಿನಕ್ಕೆ ಹೆಚ್ಚು ಹೆಚ್ಚು ಜಟಿಲವಾಗುತ್ತ ಸಾಗಿದೆ. ಇದಕ್ಕೆ ಬೇರೆ ಬೇರೆ ತಜ್ಞರು ಬೇರೆ ಬೇರೆ ಕಾರಣಗಳನ್ನು ಹೇಳುತ್ತಿದ್ದಾರೆ. ಅವರೆಲ್ಲರ ಹೇಳಿಕೆಯ ವಿವರಣೆಯಲ್ಲಿ ತುಸು ತಾರತಮ್ಯವಿದ್ದರೂ ಪ್ರಕೃತದ ಶಿಕ್ಷಣ ಕ್ರಮದ ಬಗ್ಗೆ ಅವರೆಲ್ಲರೂ ಒಂದಿಲ್ಲೊಂದು ಬಗೆಯಿಂದ ಆಕ್ಷೇಪವನ್ನೆತ್ತುವದು ಮಾತ್ರ ಸರ್ವಸಾಧಾರಣವಾಗಿದೆ. ಸದ್ಯದ ಶಿಕ್ಷಣ ಕ್ರಮವು ಕೇವಲ ಪುಸ್ತಕೀಯ ಜ್ಞಾನಕ್ಕೇ ಪ್ರಾಧಾನ್ಯ ಕೊಟ್ಟಿರುವದೆ ಇದಕ್ಕೆ ಮುಖ್ಯ ಕಾರಣವೆಂದೂ ಅದಕ್ಕಾಗಿ ಶಿಕ್ಷಣ ಕ್ರಮದಲ್ಲಿ ಪುಸ್ತಕೀಯ ಜ್ಞಾನಕ್ಕಿಂತಲೂ ವಿದ್ಯಾರ್ಥಿಗಳ ಜೀವನೋಪಾಯಕ್ಕೆ ಸಾಧನವಾಗುವ ವಿಷಯಗಳಿಗೇ ಹೆಚ್ಚು ಪ್ರಾಮುಖ್ಯತೆಯಿರಬೇಕೆಂದೂ ಅವರು ಪ್ರತಿಪಾದಿಸುವರು. ಇತ್ತೀಚೆಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಈ ದಿಶೆಯಲ್ಲಿ ತಕ್ಕಷ್ಟು ಪ್ರಯತ್ನಗಳು ನಡೆದು ಅವು ತಕ್ಕಮಟ್ಟಿಗೆ ಯಶಸ್ವಿಯಾಗಿವೆ.

ಯುರೋಪದೊಳಗಿನ ದೇಶಗಳಲ್ಲಿಯೂ ಅಮೇರಿಕೆಯಲ್ಲಿಯೂ ತಮ್ಮ ತಮ್ಮ ದೇಶಗಳಲ್ಲಿಯ ನಿರುದ್ಯೋಗದ ಸಮಸ್ಯೆಯನ್ನೆ ಬಿಡಿಸಲು ಎರಡು ಮುಖ್ಯ

ಉಪಾಯಗಳನ್ನು ಯೋಜಿಸಿರುವರು. (೧) ಶಿಕ್ಷಣ ಸಂಸ್ಥೆಗೆ ಬರುವ ವಿದ್ಯಾರ್ಥಿಗಳ ಮಾನಸಿಕ ಒಲವನ್ನೂ ಅವರವರ ಕಾರ್ಯಶಕ್ತಿಯನ್ನೂ ಪರೀಕ್ಷಿಸಿ ನೋಡಿ ಅವರವರಿಗೆ ಸಾಧ್ಯವಾಗಬಹುದಾದ ವಿಷಯಗಳನ್ನು ನಿರ್ಣಯಿಸಿ ಅವನ್ನೇ ಕಲಿಯುವದಕ್ಕೆ ಪ್ರೋತ್ಸಾಹಿಸುವದು. (೨) ದೇಶದ ಪ್ರಗತಿಗೆ ಆವಶ್ಯಕವಾದ ಹಲವು ಉದ್ಯೋಗ ವ್ಯವಸಾಯಗಳನ್ನು ಕಲಿಸುವ ಶಾಲೆಗಳನ್ನು ಆಯಾ ಸ್ಥಳಗಳಲ್ಲಿ ನಡೆಯಿಸುವದು.

ಈ ಎರಡೂ ಕೆಲಸಗಳನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಾಮುಖ್ಯವಾಗಿ ಸರಕಾರವೇ ಮಾಡುವದು. ಸಾರ್ವಜನಿಕ ಸಂಸ್ಥೆಗಳೂ ಈ ಕಾರ್ಯಕ್ಕೆ ನೆರವಾಗುವವು. ನಮ್ಮ ದೇಶದಲ್ಲಿ ಕಲಕತ್ತೆಯ ವಿಶ್ವವಿದ್ಯಾನಿಲಯವೂ ಕೂಡ ಈ ಮಾರ್ಗದಲ್ಲಿ ಕಾರ್ಯಾರಂಭಮಾಡಿದೆ. ಇದು ವಿಶ್ವವಿದ್ಯಾನಿಲಯಗಳು ಕೈಕೊಳ್ಳಬೇಕಾದ ಅತಿ ಮಹತ್ವದ ದೇಶಕಾರ್ಯವೆಂದು ಹೇಳುವದುಂಟು ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಅವರ ಮಾನಸಿಕ ಪ್ರವೃತ್ತಿಯೂ ಅವರ ಕಾರ್ಯಶಕ್ತಿಯೂ ಯಾವ ವ್ಯವಸಾಯವನ್ನು ಯಶಸ್ವಿಯಾಗಿ ಪೂರೈಸಲು ತಕ್ಕವಾಗಿರುವವೆಂಬದನ್ನು ತೋರಿಸಿಕೊಡುವ ಕಾರ್ಯವನ್ನು ಕಲಕತ್ತೆಯ ವಿಶ್ವವಿದ್ಯಾನಿಲಯವು ಪ್ರಾರಂಭಿಸಿರುವಂತೆಯೇ ಹಲಕೆಲವು ಔದ್ಯೋಗಿಕ ಶಾಲೆಕಾಲೇಜಗಳೂ ಕಲಾಮಂದಿರಗಳೂ ದೇಶದ ಬೇರೆ ಬೇರೆ ಭಾಗಗಳಲ್ಲಿ ಅಲ್ಲೊಂದು ಇಲ್ಲೊಂದು ತಲೆದೋರಿರುವದೂ ಕೂಡ ಸುದ್ದಿಯದ ಮಾತಾಗಿದೆ. ಮೈಸೂರ ವಿಶ್ವವಿದ್ಯಾನಿಲಯದಲ್ಲಿಯೂ ಮಾನಸಿಕ ಶಕ್ತಿಗಳ ಪರೀಕ್ಷೆ ಪ್ರಯೋಗಗಳು ಪ್ರಾರಂಭವಾಗಿವೆಯಂತೆ.

ಸೇವಾನಿವೃತ್ತರಾದ ಕುಲಕರ್ಣಿ ಜೀವಣ್ಣರಾಯರು

ನನ್ನ ಪ್ರಾಕ್ಟೀಸಿಂಗ್ ಸ್ಕೂಲಿನಲ್ಲಿ ಬಹುಕಾಲ ಶಿಕ್ಷಕರಾಗಿದ್ದ ಶ್ರೀಮಾನ್ ಕುಲಕರ್ಣಿ ಜೀವಣ್ಣರಾಯರು ಕಳೆದ ಸಪ್ಟಂಬರ ತಿಂಗಳ ೨೩ನೆಯ ತಾರೀಖಿನ ದಿವಸ ಕಾರ್ಯನಿವೃತ್ತರಾದರು. ಇವರಿಗೆ ೫೫ ವರ್ಷ ವಯಸ್ಸು ಆದುದನ್ನು ಅವರ ಪರಿಚಯದವರು ಕೂಡ ಕುತೂಹಲಯುಕ್ತರಾಗಿಯೇ ಕೇಳುವರು; ಇಷ್ಟೊಂದು ಗಟ್ಟಿಮುಟ್ಟಾದ ಮೈಕಟ್ಟಿನವರು ಅವರು. ನೌಕರಿಯ ಆರಂಭದಲ್ಲಿ ಇದ್ದ ಮುಖಲಕ್ಷಣವೇ ನಿವೃತ್ತರಾಗುವ ಕಾಲದಲ್ಲಿಯೂ ಉಳಿದಿದೆಯೆಂದು

ಇವರ ಬಾಲ್ಯಸ್ನೇಹಿತರು ಹೇಳುವರು. ಇಷ್ಟೊಂದು ಶರೀರಸಂಪತ್ತನ್ನು ಗಳಿಸಿ ಉಳಿಸಿಕೊಳ್ಳಲು ಅವರ ಆನಂದವೃತ್ತಿ, ಶಾಂತಸ್ವಭಾವ, ಸೌಜನ್ಯ ಇವೇ ಮುಖ್ಯ ಕಾರಣಗಳಾಗಿವೆ.

ಬೆಳಗಾವಿ ಜಿಲ್ಲೆಯೊಳಗಿನ ಖಾನಾಪುರ ತಾಲೂಕನೂಳಗಿನ ಬೀಡಿ ಎಂಬುದು ಇವರ ಜನ್ಮಸ್ಥಳ. ಇಲ್ಲಿ ಇವರು ಕರಣಿಕ ಮನೆತನದವರು. ಹೊಟ್ಟೆ-ಬಟ್ಟೆ, ಮಾನ-ಮರ್ಯಾದೆಗಳಿಗೆ ಸಾಕೆನಿಸುವಷ್ಟು ಪಿತ್ರಾರ್ಜಿತ ಆಸ್ತಿ ಅಧಿಕಾರಗಳು ಇದ್ದವು. ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಬಳಿಕ ಇವರು ಮನೆತನದ ಹೋರೆಯಲ್ಲಿ ತೊಡಗಿದರು. ಆದರೆ ಸೌಜನ್ಯಶೀಲರಾದ ಇವರ ಮನಸ್ಸಿಗೆ ಆ ಕುಲಕರ್ಣಿಕೆಯ ಕಸಬು ಒಗ್ಗಲಿಲ್ಲ. ಶಿಕ್ಷಕರ ಹೋರೆಯೇ ಆಕರ್ಷಕವೆನಿಸಿದುದರಿಂದ ಧಾರವಾಡದ ಟ್ರೇನಿಂಗ್ ಕಾಲೇಜವನ್ನು ಸೇರಿ ಮೂರನೆಯ ವರ್ಷದಲ್ಲಿ ಮೊದಲನೆಯ ನಂಬರ ಪಾಸಾಗಿ ೧೯೧೧ ರಲ್ಲಿ ಪ್ರಾಥ. ಸ್ಕೂಲಿನಲ್ಲಿ ನೌಕರಿಯನ್ನು ಆರಂಭಮಾಡಿದರು.

ಜೀವಣ್ಣರಾಯರ ಬರೆಹವು ಮುತ್ತಿನಂತೆ ಜಂದವಾದದ್ದು; ಜೊಕ್ಕಟವಾದದ್ದು. ನಡತೆಯು ನಿಷ್ಕಪಟವಾದದ್ದು. ಕೈಕೊಂಡ ಕೆಲಸಗಳಲ್ಲಿ ತುಂಬ ಆಸ್ಥೆ. ಕನಸಿನಲ್ಲಿ ಸಹ ಬಿರುಸತನವಿಲ್ಲ. ಇವೆಲ್ಲದರಿಂದ ತುಸ ದಿನಗಳಲ್ಲಿಯೇ ಟ್ರೇನಿಂಗ್ ಸಂಸ್ಥೆಯ ಮೇಲಧಿಕಾರಿಗಳಿಂದಲೂ ವ್ಯವಸಾಯಬಂಧುಗಳಿಂದಲೂ ವಿದ್ಯಾರ್ಥಿ-ಶಿಕ್ಷಕರಿಂದಲೂ ತುಂಬ ಆದರ-ಮೆಚ್ಚುಗೆಗಳನ್ನು ಪಡೆದರು. ೧೯೨೧ ರಲ್ಲಿ ಪ್ರಾರಂಭವಾದ ಬೆಳಗಾವಿ ಜಿಲ್ಲೆಯ ಟ್ರೇನಿಂಗ್ ಸ್ಕೂಲಿಗೆ ಅಧ್ಯಾಪಕರಾಗಿ ಹೋದರು. ಈ ಸ್ಥಳದಲ್ಲಿದ್ದಾಗಲೂ ಇವರು ಮಾಡಿದ ಕೆಲಸವು ಅಮೌಲ್ಯವಾಗಿದೆ. ಆದರೆ ದುರ್ದೈವದಿಂದ ಕರ್ನಾಟಕದೊಳಗಿನ ಟ್ರೇನಿಂಗ್-ಸ್ಕೂಲುಗಳೆಲ್ಲವೂ ನಿಂತು ಹೋಗಿ ಧಾರವಾಡದ ಟ್ರೇನಿಂಗ್ ಕಾಲೇಜವು ಸಹ ಟ್ರೇನಿಂಗ್‌ಸ್ಕೂಲಾಗಿ ಮಾರ್ಪಟ್ಟದ್ದರಿಂದ ಇವರು ಬೆಳಗಾವಿಯ ಮ್ಯು. ಬೋ. ಲೋ. ಬೋ. ಗಳ ಶಾಲೆಗಳಲ್ಲಿ ಶಿಕ್ಷಕರಾಗಿ ೧೯೩೪ರ ವರೆಗೆ ದುಡಿದು ಪುನಃ ಪ್ರಾಥ. ಸ್ಕೂಲಿಗೆ ಬಂದರು. ಪ್ರಾಕ್ಟೀಸಿಂಗ್ ಸ್ಕೂಲಿನಲ್ಲಿಯೇ ನೌಕರಿಯನ್ನು ಪ್ರಾರಂಭಿಸಿ ಪ್ರಾಕ್ಟೀಸಿಂಗ್ ಸ್ಕೂಲಿನಲ್ಲಿಯೇ ನಿವೃತ್ತರಾಗುವ ಶಿಕ್ಷಕರಲ್ಲಿ ಇವರೇ ಮೊದಲನೆಯವರು.

ಜೀವಣ್ಣರಾಯರನ್ನು ಅರಿಯದ ಶಿಕ್ಷಕರು ಅಪರೂಪ. ನಮ್ಮ ಕನ್ನಡ ನಾಡಿನಲ್ಲಿ ಇಷ್ಟೊಂದು ಪರಿಚಿತರಾಗಿರಲು ಇವರ ಸ್ವಭಾವವು ಕಾರಣವಾಗಿದ್ದಂತೆ ತೀರ ಚಿಕ್ಕಮಕ್ಕಳಿಗೆ ಕಲಿಸುವದರಲ್ಲಿ ಇವರಿಗಿದ್ದ ಹಿಡಿತವೂ ಒಂದು ಮುಖ್ಯ ಕಾರಣವಾಗಿದೆ. ಹೊಸದಾಗಿ ಬಂದ ಚಿಕ್ಕಮಕ್ಕಳಿಗೆ ಸರಿಯಾಗಿ

ಕಲಿಸುವ ಕಠಿಣವಾದ ಕೆಲಸದ ನಿಜವಾದ ಮಹತ್ವವನ್ನು ಶಿಕ್ಷಕರಲ್ಲದೆ ಮತ್ತಾರು ಅರಿಯುವರು? ಇವರು ಪಾಠಗಳನ್ನು ಕಲಿಸುವಾಗ ವಿದ್ಯಾರ್ಥಿಗಳು, ವಿದ್ಯಾರ್ಥಿ ಶಿಕ್ಷಕರು ಮೇಲಧಿಕಾರಿಗಳು ಆನಂದಪರವಶರಾಗಿ ತಲೆದೂಗದ ಸಂದರ್ಭಗಳೇ ಇರಲಿಲ್ಲ. ಅಲ್ಲಲ್ಲಿಯ ಸಮ್ಮೇಲನಗಳಿಗೆ ಕರೆಯಿಸಿಕೊಂಡು ಕರ್ನಾಟಕದ ಶಿಕ್ಷಣಪ್ರೇಮಿಗಳೂ ಅಧಿಕಾರಿಗಳೂ ಇವರನ್ನು ಸನ್ಮಾನಿಸಿದ್ದಾರೆ. ಗಾಮದುರ್ಗ ಸಂಸ್ಥಾನದ ಅಧಿಕಾರಿಗಳಂತೂ ಇವರಿಗೆ 'ಕನ್ನಡನಾಡಿನ ನೂಂಟಿಸೂರಿ' ಎಂದು ಗೌರವಿಸಿದುದನ್ನು ಕೇಳಿದ್ದೇನೆ.

ಮೂವತ್ತುವರ್ಷ ಈ ರೀತಿಯಲ್ಲಿ ಸರಕಾರದ ಕಟ್ಟಳೆಗನುಸರಿಸಿ ದುಡಿದ ಬಾಗು ಇನ್ನು ಮುಂದೆಯೂ ಕನ್ನಡನಾಡಿಗೆ ಅನಿರ್ಬಂಧವಾದ ಸೇವೆಯನ್ನು ಸಲ್ಲಿಸಲು ಹವಣಿಸುವ ಇವರಿಗೆ ವಿಶ್ರಾಂತಿಯು ಅಗತ್ಯವಿದೆಯಲ್ಲವೆ! ಟ್ರೇನಿಂಗ್ ಕಾಲೇಜಿನಲ್ಲಿ ಇವರಿಗೆ ಬೀಳ್ಕೊಡುವ ಸಮಾರಂಭವು ಬಹಳೇ ಸಡಗರದಿಂದ ಆಯಿತು. ಆ ಸಮಯದಲ್ಲಿ ಎಲ್ಲ ತರಗತಿಯವರಿಂದ ಪ್ರೇಮದ–ಮಮತೆಯ ಮಾತುಗಳೇ ಕೇಳಬರುತ್ತಿದ್ದವು. ಆಗ ಪ್ರಾಥ. ಸ್ಕೂಲಿನ ವಿದ್ಯಾರ್ಥಿಗಳು ಹಾಡಿದ ಒಂದು ಹಾಡಿನ ಕೆಲವು ಭಾಗವನ್ನೂ ಇಲ್ಲಿ ಕೊಡುವೆನು.

ವರ–ವರ್ಣ–ಧಾರ್ಮಿಕರೆ ನೀವಲ್ತೆ ಗಮಕಿ |
ಕರಿನಾಡೆ ಕರೆಯುತಿದೆ ನಿಮ್ಮನ್ನು ಇಂದು ||
ಬಂಧನದ ಊಳಿಗವು ಬಿಡುತಿಹುದು ಇಂದು |
ಬಂಧಿಸಿದ ಮಮತೆಯಿದು ತಪ್ಪುವದೆ ಎಂದು? ||

ಮನಮುಟ್ಟಿ ದುಡಿಯುವ ಸ್ವಭಾವದ ಜೀವಣ್ಣರಾಯರಿಗೆ ಬಿಡುವೇ ಇರುತ್ತಿರಲಿಲ್ಲ. ಅವರಿಗೆ ಅದೆಂಥ ಇಕ್ಕಟ್ಟು ಬಿಕ್ಕಟ್ಟುಗಳು ಬಂದರೂ ಕೂಡ ಶಾಂತತೆಯೆನ್ನು ಬಿಡದೆ ನಡೆಯುವ ಹಿಡಿತವಿದೆ. ಇವರು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಉಪಯೋಗವಾಗುವ ಭೂಗೋಲ, ಸುಲಭ ಭೂಮಿತಿ ಮೊದಲಾದ ಪುಸ್ತಕಗಳನ್ನು ಬರೆದಿದ್ದಾರೆ. ಕಾವ್ಯಗಳನ್ನು ಗಮಕ ರೀತಿಯಲ್ಲಿ ಓದಲು ಅಭ್ಯಾಸ ಮಾಡಿದ್ದಾರೆ. ಈಗಾಗಲೇ ಹಲವು ರಸಿಕರು ಇವರಿಂದ ಕುಮಾರ ವ್ಯಾಸನ ಭಾರತವನ್ನು ಓದಿಸಿ, ಕೇಳಿ, ಆನಂದಬಟ್ಟು ಇವರ ಮೇಲ್ಮೆಯನ್ನೂ ಜಾಣ್ಮೆಯನ್ನೂ ಕೊಂಡಾಡಿದ್ದಾರೆ.

ಟ್ರೇನಿಂಗ್ ಸಂಸ್ಥೆಯೆಂದರೆ ಜೀವಣ್ಣರಾಯರು, ಜೀವಣ್ಣರಾಯರೆಂದರೆ ಟ್ರೇನಿಂಗ್‌ಸಂಸ್ಥೆ. ಹೀಗನ್ನುವಷ್ಟು ಸಮರಸವಾದ ಇವರನ್ನು ದೈವವು ಟ್ರೇನಿಂಗ್ ಕಾಲೇಜದ ನೆರೆಯಲ್ಲಿಯೇ ಮನೆಕಟ್ಟಿಸಿ ಹಚ್ಚಿ ಧಾರವಾಡದ ವಾಸಿಗಳನ್ನಾಗಿಯೇ ಮಾಡಿಬಿಟ್ಟಿದೆ. ಇವರ ಒಬ್ಬ ಮಗನು ಪುಣೆಯ

ಇಂಜನೀಯರಿಂಗ್ ಕಾಲೇಜದಲ್ಲಿ ಪ್ರೊಫೆಸರನಿರುವನು. ಮತ್ತಿಬ್ಬರು ಮಕ್ಕಳು ಹೈಸ್ಕೂಲಿನ ತರಗತಿಗಳಲ್ಲಿ ಓದುತ್ತಲಿದ್ದಾರೆ. ಈ ರೀತಿಯಾಗಿ ಸಂತಾನ ಸಂಪತ್ತು—ಆರೋಗ್ಯ, ವಿದ್ಯೆ, ವಿನಯ—ಕಲೆ ಇವುಗಳಿಂದ ಕೂಡಿದ ಈ ಸೌಜನ್ಯಶಾಲಿಗಳಿಗೆ ದೇವರು ಬೇಕಾದುದೆಲ್ಲವನ್ನೂ ಈಯಲೆಂದು ಬೇಡಿ ಕೊಳ್ಳುವೆನು. ಜೀವಣ್ಣರಾಯರ ಪ್ರಗತಿಯ ಸೂತ್ರಗಳೂ ಕಾಲೇಜದ ಬೀಳ್ಕೊಡುವ ಸಮಾರಂಭದಲ್ಲಿ ಅವರೇ ತಿಳಿಯಪಡಿಸಿದುದರ ಸಾರವೂ ಆದ ಅವರ ಮೂರು ಮಾತುಗಳನ್ನು ಇಲ್ಲಿ ಕೊಟ್ಟು ಈ ಬರೆಹವನ್ನು ಮುಗಿಸುವೆನು.

(೧) ಪ್ರಾಥಮಿಕ ಶಿಕ್ಷಕರು ಮಿತವ್ಯಯಿಗಳೂ ನಿರ್ವ್ಯಸನಿಗಳೂ ಆಗಿರಬೇಕು.

(೨) ಕೈಕೊಂಡ ಕೆಲಸದಲ್ಲಿ ಪ್ರಬಲವಾದ ಆಸ್ಥೆಯಿರಬೇಕು.

(೩) ಇಂದಿನ ಬಾಲಕರೇ ಮುಂದಿನ ಮುಂದಾಳುಗಳು. ಇವರ ಪಾಲಕರೇ ನಮ್ಮ ಅನ್ನದಾತರು. ಅದುಕಾರಣ ಎಲ್ಲರನ್ನೂ ಆದರದಿಂದಲೂ ಸೌಜನ್ಯದಿಂದಲೂ ಕಾಣಬೇಕು.

H. G. KATTI

ಪುಸ್ತಕ ಪರಿಚಯ

೧. ಭಾಷಾಭ್ಯಾಸ

ಲೇಖಕರು :— ಶ್ರೀ. ನಾರಾಯಣ ಓಂಕಾರ ಪದಕಿ ಶಿಕ್ಷಕರು ಕೊಣ್ಣೂರು (ಜಿ. ಧಾರವಾಡ)

ಪ್ರಕಾಶಕರು :— ವಿದ್ಯಾವಿಲಾಸ ಬುಕ್‌ಡಿಪೋ ಗದಗ. ಮೊದಲನೆಯ ಆವೃತ್ತಿ, ೧೯೪೨

ಬೆಲೆ ೧೦ ಆಣೆಗಳು. ಆಕಾರ :— ಕ್ರೌನ್ ೧೫೦ + ೮ ಪುಟಗಳು.

ಈ ಪುಸ್ತಕದಲ್ಲಿರುವ ೪೯ ಪಾಠಗಳಲ್ಲಿ ೪೨ ಪಾಠಗಳು (೧ ರಿಂದ ೩೮ ಹಾಗು ೪೬ ಅನುಬಂಧ ೧-೨-೩) ಅಂದರೆ, ಸುಮಾರು ೧೨೦ ಪುಟಗಳು (ಪುಸ್ತಕದ ೫/೬ ಭಾಗ) ವಿದ್ಯಾರ್ಥಿಗಳಿಗೆ ಹೊಸವಲ್ಲ. ಅವು ವ್ಯಾಕರಣದ ಪದ್ಯಪುಸ್ತಕಗಳಲ್ಲಿ ಸಮಾವೇಶವಾಗಿವೆ. ಉಳಿದ ಏಳು ಪಾಠಗಳ (೩೯ ರಿಂದ ೪೫) ಲ್ಲಿ ಅಂದರೆ ೩೦ ಪುಟಗಳಲ್ಲಿ ಬರೆದ ವಿಷಯವನ್ನು ವಿದ್ಯಾರ್ಥಿಗಳು ಹೊಸ ಬಗೆಯಿಂದ ಉಪಯೋಗಿಸಿಕೊಳ್ಳಲು ತಕ್ಕವಾಗಿವೆ.

ಪುಸ್ತಕದ ಕಾಗದ, ಅಚ್ಚು ಕಟ್ಟುಗಳು ನೆಟ್ಟಗಿವೆ. ಮುದ್ರಣ ದೋಷಗಳು ತೀರ ಕಡಿಮೆ. ಕನ್ನಡ ಪಂಡಿತರಾದ ಶ್ರೀಮಾನ್ ಹುಲಿಕವಿ ಅವರೂ ಬೆಳಗಾವಿಯ ಏಡ್ಮಿನಿಸ್ಟ್ರೇಟಿವ್ವ ಆಫೀಸರರಾಗಿದ್ದ ಶ್ರೀಮಾನ್ ಪುರೋಹಿತ ಬೋಧರಾಯರೂ ಪುಸ್ತಕದ ಉಪಯುಕ್ತತೆಯ ಬಗ್ಗೆ ಸದಭಿಪ್ರಾಯ ಕೊಟ್ಟಿದ್ದಾರೆ. ಬೆಲೆಯೂ ಹೆಚ್ಚಾಗಿಲ್ಲ.

ಪ್ರಾಥಮಿಕ ಶಾಲೆಗಳಲ್ಲಿಯ ಮೇಲಿನ ವರ್ಗಗಳ ವಿದ್ಯಾರ್ಥಿಗಳ ಹಾಗು ಮಾಧ್ಯಮಿಕ ಶಾಲೆಗಳ ಕೆಳಗಿನ ಇಯತ್ತೆಗಳ ವಿದ್ಯಾರ್ಥಿಗಳು ಇದನ್ನು ತಕ್ಕಂತೆ ಉಪಯೋಗಿಸಿಕೊಳ್ಳಬಹುದು.

H. G. K.

೨–೩ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ ೪–೫ ಪುಸ್ತಕಗಳು

ಗ್ರಂಥಕರ್ತರು :— ಶ್ರೀ. ದಾಮೋದರ ಬಾಳಿಗ, ಬಿ. ಎ.
ಪ್ರಕಾಶಕರು :— ಬಾಸೆಲ್‌ಮಿಶನ್ ಬುಕ್‌ಡಿಪೋ ಮಂಗಳೂರು.
(೪) ಕ್ರೌನ್ ಅಕಾರದ ೬೦ ಪುಟಗಳು. ಮತ್ತು (೫) ೧೦೦ ಪುಟಗಳು.
ಬೆಲೆ (೪) ೫ ಆಣೆಗಳು ಮತ್ತು (೫) ೬ ಆಣೆಗಳು.

ತೋಟದ ರಚನೆ, ತೋಟದ ಕೆಲಸ, (ಅಲ್ಲಿ) ಬೆಳೆಯಿಸಬಹುದಾದ ಸಸ್ಯಗಳು, ಅವನ್ನು ಬೆಳೆಯಿಸುವ ರೀತಿ, ಗೊಬ್ಬರ, ಮಣ್ಣು, ಬೇರೆಬೇರೆ ಜಾತಿಯ ಹೂವಿನ ಗಿಡಗಳು ಹೂಗಳು ಅವುಗಳ ಪ್ರಯೋಜನ, ಬೀಜಪ್ರಸಾರ, ತೋಟದಲ್ಲಿಯ ಕೆಲವು ಕ್ರಿಮಿಕೀಟಕಗಳು ಇವು ೪ನೆಯ ಪುಸ್ತಕದ ಮುಖ್ಯ ವಿಷಯಗಳು. ಇದರಂತೆಯೇ ೫ನೆಯ ಪುಸ್ತಕದಲ್ಲಿ ಬಂದ ಪಾಠಗಳಲ್ಲಿ ಮನೆಯ ತೋಟ, ಕಸಿ ಮಾಡುವದು, ಧಾನ್ಯಗಳ ಬೆಳೆ, ಕಬ್ಬು, ಎಣ್ಣೆಯ ಕಾಳುಗಳು, ಹಾವು ಮೀನಗಳು ಇವು ಪ್ರಾಮುಖ್ಯವಾದವು.

ಈ ಎಲ್ಲ ವಿಷಯಗಳನ್ನು ಚಿಕ್ಕಮಕ್ಕಳ ಅಭ್ಯಾಸಕ್ಕೆ ತಕ್ಕ ರೀತಿಯಲ್ಲಿ ಅವರಿಗೆ ಅರ್ಥವಾಗುವ ಸರಳಭಾಷೆಯಲ್ಲಿ ವಿವರಿಸಲಾಗಿದೆ. ಆಯಾ ಸಂದರ್ಭಕ್ಕೆ ಆವಶ್ಯಕವೆನಿಸುವ ಯೋಗ್ಯ ಚಿತ್ರಗಳನ್ನು ಸೇರಿಸಿದ್ದರಿಂದ ವಿಷಯದ ಸುಗಮತೆಗೆ ಸಹಾಯವಾಗಿದೆ. ಕಾಗದ ಕಟ್ಟು ಮುದ್ರಣಾದಿಗಳು ಆಕರ್ಷಕವಾಗಿವೆ. ಗ್ರಂಥಕರ್ತರಿಗೂ ಪ್ರಕಾಶಕರಿಗೂ ತಕ್ಕ ಪ್ರೋತ್ಸಾಹನೆ ದೊರೆಯಲೆಂದು ಹಾರೈಸುವೆವು.

N. V. K.

ಪತ್ರಗಳ ಮುಖ್ಯಾಂಶಗಳು

ಬೆಳಗಾಲಪೇಟೆ (ಧಾರವಾಡ ಜಿಲ್ಲೆ)—ಇಲ್ಲಿಯ ಶಾಲೆಯಲ್ಲಿ ೩೦-೮-೪೨ ನೆಯ ದಿವಸ ಈ ಭಾಗದ ಶಾಲೆಗಳ ಶಿಕ್ಷಕರ ಸಹಕಾರ ಸಭೆಯು ಮೆ. ಅ. ಡೆ. ಅ. ಇ. ಅವರಾದ ಶ್ರೀ. ವ್ಹಿ. ಜಿ. ಪಾಟೀಲ ಸಾಹೇಬರ ಅಧ್ಯಕ್ಷತೆಯಲ್ಲಿ ಪರಿಣಾಮಕರವಾಗಿ ಸಾಗಿತು.

ತಿಳಿಸಿದವರು:— ಶ್ರೀ. ಕ. ಗು. ಮೆಣಸಿನಕಾಯಿ ಹೆ. ಮಾಸ್ತರ.

ಯಲಗಚ್ಚು (ಹಾವೇರಿ ತಾಲೂಕು)—ಇಲ್ಲಿಯ ಶಾಲೆಯಲ್ಲಿ ೧೭-೪-೪೨ ನೆಯ ದಿವಸ ಶ್ರೀ. ಬಾಳಿಕಾಯಿ ಪರಮಣ್ಣನವರ ಹಿರಿಯತನದಲ್ಲಿ ಇನಾಮಿನ ಸಮಾರಂಭವಾಯಿತು.

ತಿಳಿಸಿದವರು :— ಶ್ರೀ. ಶ. ಹ. ಹಲ್ಯಾಪುರ ಹೆ. ಮಾಸ್ತರ.

ಇಂಡಿ (ವಿಜಾಪುರ ಜಿಲ್ಲೆ)—೧೫-೪-೪೨ನೆಯ ದಿವಸ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀಮಾನ್ **ಕೆ. ವ್ಹಿ. ಕುಲಕರ್ಣಿ** ಅವರ ಹಿರಿಯತನದಲ್ಲಿ ಶಿಕ್ಷಣ ಸಮ್ಮೇಲನವು ಜರುಗಿತು. ಪಾಠ, ಸಂಭಾಷಣೆ, ಲಾವಣಿಗಳಾಗಿ ವಿದ್ಯಾರ್ಥಿಗಳಿಗೆ ಮೆಚ್ಚುಗೆಗಳನ್ನು ಕೊಡಲಾಯಿತು.

ತಿಳಿಸಿದವರು:— ಶ್ರೀ. ಬಿ. ಜಿ. ಹಿಪ್ಪರಿಗಿ ಇಂಡಿ.

ಧನ್ನೂರು (ಹುನಗುಂದ ತಾಲೂಕು) — ೧೦-೪-೪೨ ನೆಯ ದಿವಸ ಮೆ. ಇ. ಡೆ. ಎ ಇ. ಅವರಾದ ಶ್ರೀಮಾನ್ **ಗುಡಿಸಾಗರ** ಸಾಹೇಬರ ಹಿರಿಯತನದಲ್ಲಿ ಶಿ.ಶಿ. ಸಮ್ಮೇಲನವು ನೆರವೇರಿತು. ಪರಊರುಗಳಿಂದ ಬಂದ ಶಿಕ್ಷಕರೂ-ವಿದ್ಯಾರ್ಥಿಗಳೂ ಕೂಡಿ ಸುಮಾರು ೩೦೦ ಜನರಿಗೆ ಊರವರು ತಮ್ಮ ವೆಚ್ಚದಿಂದ ಊಟದ ವ್ಯವಸ್ಥೆಯನ್ನು ಮಾಡಿಸಿದರು.

ತಿಳಿಸಿದವರು :— ಶ್ರೀ. ಭಿ. ಶ್ರೀ. ಗೋವೇಕರರು.

ಮುಮದಾಪುರ (ಗೋಕಾಕ ತಾಲೂಕ)— ಇಲ್ಲಿಯ ಹಲವು ಶಿಕ್ಷಕರು ಸಾಗು ವಿದ್ಯಾರ್ಥಿಗಳು ಕೂಡಿ ಮಾತುಗಾರಿಕೆಯ ಕೂಟವೊಂದನ್ನು ಏರ್ಪಡಿಸಿಕೊಂಡಿದ್ದಾರೆ. ಊರ ಹಿರಿಯರು ಹುರುಪುಗೊಡುತ್ತಲಿದ್ದಾರೆ.

ತಿಳಿಸಿದವರು :— ಶ್ರೀ. ಕಾಡಪ್ಪ ಢೋರ ಅ. ಮಾ.

ಗದಗ ಗಜಾನನ ಪ್ರೌಢ ಶಿಕ್ಷಣಶಾಲೆ— ೬-೪-೧೯೪೨ ನೆಯ ದಿವಸ ಇಲ್ಲಿಗೆ ಮೆ| ಎ. ಇ. ಅವರಾದ ಶ್ರೀಮಾನ್ ತಾವಡೆ ಸೀತಾರಾಮರಾಯರು

ಬಂದು ಹಾಜರ ಇದ್ದ ಳಗ ವಿದ್ಯಾರ್ಥಿಗಳ ಅಭ್ಯಾಸ, ಹಾಡು, ವಿನೋದಗಳನ್ನು ಕಂಡು ಆನಂದಬಟ್ಟರು.

ತಿಳಿಸಿದವರು :— ಶ್ರೀ. ಡಿ. ಎಸ್. ಇಂಗಳಹಳ್ಳಿ ಗದಗ

ಮುತ್ತಿಗಟ್ಟಿ (ಬಂಕಾಪುರ ತಾಲೂಕು)— ಈ ತಾಲೂಕಿನ ಲೋಕಪ್ರಿಯರೂ ಅತ್ಯಂತ ಪರಿಶ್ರಮದಿಂದ ಕೆಲಸಮಾಡುವವರೂ ಆದ ಶ್ರೀಮಾನ್ ಎಚ್. ಎಮ್. ಕಾಳೆ. ಅ. ಡೆ. ಎ. ಇ. ಧಾರವಾಡ ಅವರಿಗೆ ವರ್ಗವಾದ ನಿಮಿತ್ತ ಈ ಊರವರು ಬೀಳ್ಕೊಡುವ ಸಮಾರಂಭವನ್ನು ನೆರವೇರಿಸಿದರು.

ತಿಳಿಸಿದವರು :— ಶ್ರೀ. ಬ. ದೇ. ಮೇಟಿ ಹೆ. ಮಾ. ಮುತ್ತಿಗಟ್ಟಿ

ಗದಗ— ಉರ್ದು ಹೆಣ್ಣುಮಕ್ಕಳ ಮೊದಲನೆಯ ನಂಬರ ಶಾಲೆ— ಮೆ. ಖಾಜಿ ಡಿ. ಡಿ. ಸಿ. ಅವರ ಪತ್ನಿಯವರ ಹಿರಿಯತನದಲ್ಲಿ ೧೧-೯-೪೨ನೆಯ ದಿವಸ ಜನಾನಾ ಜಲಸಾ. ನೆರವೇರಿತು. ಮುಸಲ್ಮಾನ ಪ್ರಮುಖ ಸ್ತ್ರೀಯರೂ ಶಿಕ್ಷಕಿಯರೂ ಆಗಮಿಸಿದ್ದರು. ಭಾಷಣ, ಮಾದರಿಯ ಅಡಿಗೆ, ಕೈಗಾರಿಕೆಯ ಒಡವೆ, ಗಾಯನ, ವ್ಯಾಯಾಮ ಶಿಕ್ಷಣ ಮೊದಲಾದವುಗಳಿಂದ ಆನಂದಿತರಾಗಿ ೬ ರೂ. ಹಾಗೂ ೩ ಬೆಳ್ಳಿಯ ಮೆಡಲ್ಲುಗಳನ್ನು ಮೆಚ್ಚುಗೆ ಎಂದು ಕೊಟ್ಟರು.

ತಿಳಿಸಿದವರು :— ಶ್ರೀ. ಸೈ. ಇ. ಖಾಜಿ ಹೆ. ಮಾ. ಗರ್ಲ್‌ಸ್ಕೂಲ.

ಹುಬ್ಬಳ್ಳಿ:— ಇಲ್ಲಿಯ ಎಡ್ಮಿನಿಸ್ಟ್ರೇಟಿವ್ವ ಆಫೀಸರರಾದ ಶ್ರೀಮಾನ್ ವ್ಹಿ. ಏಸ್. ನಾಡಕರ್ಣಿ ಅವರಿಗೆ ವರ್ಗವಾದ ನಿಮಿತ್ತ ಇಲ್ಲಿಯ ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಶಿಕ್ಷಕ-ಶಿಕ್ಷಕಿಯರೂ ಸ್ಕೂ. ಬೋ. ಸದಸ್ಯರೂ ಕೂಡಿ ತಾಂಬೂಲಸಮಾರಂಭವನ್ನು ಏರ್ಪಡಿಸಿದರು.

ತಿಳಿಸಿದವರು :—ಹೆ. ಮಾ. ೯ನೆಯ ನಂ. ಕ. ಗ. ಮ. ಶಾಲೆ ಹುಬ್ಬಳ್ಳಿ.

ಬೆಳಗಲಿ :— (ಮುಧೋಳ ಸಂಸ್ಥಾನ)— ಮುಧೋಳ ಅಸೆಂಬ್ಲಿಯ ಸದಸ್ಯರಾದ ಶ್ರೀಮಾನ್ ಎಸ್. ಜಿ. ಧಡೂತಿ ಅವರ ಹಿರಿಯತನದಲ್ಲಿ ಇಲ್ಲಿಯ ಶಾಲೆಯಲ್ಲಿ ಮಾತುಗಾರಿಕೆಯ ೯ನೆಯ ಕೂಟವು ನಡೆಯಿತು.

ತಿಳಿಸಿದವರು :—ಶ್ರೀ. ಕೆ. ಜಿ. ಭದ್ರಶೆಟ್ಟಿ ಅ. ಮಾ. ಬೆಳಗಲಿ.

ಗಂಜೀಹಾಳ :— (ವಿಜಾಪುರ ಜಿಲ್ಲೆ)— ಈ ಭಾಗದ ಶಿ. ಶಿ. ಸಮ್ಮೇಲನವು ಅ. ಡೆ. ಅವರಾದ ಶ್ರೀಮಾನ್ ಸಂಗನಾಳಮಠ ಅವರ ಹಿರಿಯತನದಲ್ಲಿ ೧೩-೯-೧೯೪೨ನೆಯ ದಿವಸ ಜೆನ್ನಾಗಿ ನಡೆಯಿತು.

ತಿಳಿಸಿದವರು :—ಶ್ರೀ. ನಿ. ಬ. ಪಾಟೀಲ ಅ. ಮಾ. ಗಂಜೀಹಾಳ.

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

ಸದ್ಯದ ಮಹಾಯುದ್ಧದಲ್ಲಿ ಸ್ತ್ರೀಯರ ಕಾರ್ಯಗಳು

ಚೀನದೇಶದಲ್ಲಿ—ಜಪಾನವು ಚೀನ ದೇಶವನ್ನು ಆಕ್ರಮಿಸಲು ಯತ್ನಿಸಿರುವದು. ಆ ಜಪಾನೀ ಸೈನ್ಯದ ವಿರುದ್ಧ ಚೀನೀ ಮಹಿಳೆಯರು ತುಂಬ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ಪುರುಷರು ಯುದ್ಧಕಾರ್ಯದಲ್ಲಿ ತೊಡಗಿರುವದರಿಂದ ಸ್ತ್ರೀಯರು ಶಿಕ್ಷಣದ ಕಾರ್ಯವನ್ನು ಒಪ್ಪಿಕೊಂಡಿದ್ದಾರೆ; ಕಾರಖಾನೆಗಳಲ್ಲಿ ಅವರೇ ಕೆಲಸಮಾಡುವರು. ಉತ್ತರ ಚೀನದಲ್ಲಂತೂ ಲಕ್ಷಾವಧಿ ಚೀನೀ ಯುವತಿಯರು ಒಕ್ಕಲತನದ ಕೆಲಸವನ್ನು ಕೈಕೊಂಡಿರುವರು. ಗಂಡಸರು ಮಾಡುವ ಎಷ್ಟೋ ಕೆಲಸಗಳನ್ನು ಚೀನೀತರುಣಿಯರು ಅಷ್ಟೇ ದಕ್ಷತೆಯಿಂದ ಮಾಡಲು ಸಮರ್ಥರಾಗಿದ್ದಾರೆ.

ಇಂಗ್ಲಂಡದಲ್ಲಿ ಮುಖ್ಯ ಮುಖ್ಯ ಕಚೇರಿಗಳಲ್ಲಿ ಕಾರ್ಕೂನರ ಕೆಲಸವನ್ನು ಸ್ತ್ರೀಯರೇ ಮಾಡುವರು. ಕಾರಖಾನೆಗಳಲ್ಲಿ ಕೆಲಸಮಾಡುವ ಜನರ ಕೊರತೆಯಾದದ್ದರಿಂದ ಅವುಗಳಲ್ಲಿ ಸದ್ಯಕ್ಕೆಳಂ ಲಕ್ಷಕ್ಕಿಂತ ಹೆಚ್ಚು ಸ್ತ್ರೀಯರು ಕೆಲಸಮಾಡುತ್ತಿದ್ದಾರೆ. ಯುದ್ಧಕ್ಕೆ ಉಪಯೋಗವಾಗುವ ಸಾಮಗ್ರಿಗಳನ್ನು ತಯಾರಿಸುವ ಕಾರಖಾನೆಗಳಲ್ಲಿ ಲಂ ಲಕ್ಷ ಸ್ತ್ರೀಯರು ಕೆಲಸಮಾಡುವರು. ಒಕ್ಕಲತನವಂತೂ ಸ್ತ್ರೀಯರಿಗೇ ಒಪ್ಪಿಸಲ್ಪಟ್ಟಿದೆ. ಔಷಧಾಲಯಗಳಲ್ಲಿಯೂ ಶುಶ್ರೂಷಾಪಥಕಗಳಲ್ಲಿಯೂ ಸ್ತ್ರೀಯರೇ ಮುಖ್ಯ ಕೆಲಸಗಾರ್ತಿಯರು.

ಜರ್ಮನಿಯಲ್ಲಿ ನಾಝಿಗಳ ಕಾರ್ಯಭಾರದಲ್ಲಿ ಸ್ತ್ರೀಯರಿಗೆ ಪುರುಷರೊಡನೆ ಸರಿಸಮಾನವಾದ ಹಕ್ಕುಬಾಧ್ಯತೆಗಳಿರಲಿಲ್ಲ.

ಅಡುಗೆ ಮನೆಯೇ ಅವರ ಕಾರ್ಯಕ್ಷೇತ್ರವೆಂದೂ ಮಕ್ಕಳನ್ನು ಹಡೆದು ಬೆಳಸಿದರೆ ಅವರ ಕೆಲಸವು ತೀರಿತೆಂದೂ ನಾಯಿಗಳು ಹೇಳುತ್ತಿದ್ದರು. ಆದರೆ ಈ ಯುದ್ಧಕಾಲದಲ್ಲಿ ಅವರು ಸ್ತ್ರೀಯರನ್ನು ಬೇಕಾದ ಕೆಲಸಗಳಿಗೆ ಉಪಯೋಗಿಸಿಕೊಳ್ಳತೊಡಗಿದ್ದಾರೆ

ಜಪಾನದಲ್ಲಿಯಂತು ಪುರುಷರ ಕೊರತೆಯಾದ್ದರಿಂದ ಪೊಲೀಸರ ಕೆಲಸವನ್ನು ಕೂಡ ಸ್ತ್ರೀಯರೇ ಮಾಡತೊಡಗಿರುವರು. ಇಷ್ಟೇ ಅಲ್ಲ, ಬಾಲಿಕೆಯರಿಗೂ ಸಹ ಸೈನ್ಯದ ಶಿಕ್ಷಣ ಕೊಡಹತ್ತಿರುವರು.

ರಷಿಯದಲ್ಲಿ ಮೊದಲಿನಿಂದಲೂ ಪುರುಷರೂ ಸ್ತ್ರೀಯರೂ ಸರಿಸಮಾನರೆಂದು ತಿಳಿಯಲ್ಪಡುತ್ತಾರೆ. ಆದ್ದರಿಂದ ಕಾರಖಾನೆಗಳು ಹೊಲಮನೆಯ ಕೆಲಸ ಮುಂತಾದ ಎಲ್ಲ ಕೆಲಸಗಳನ್ನು ಮಾಡಲು ಸ್ತ್ರೀಯರು ತಾವಾಗಿ ಮುಂದೆ ಬಂದಿದ್ದಾರೆ.

ನಮ್ಮ ದೇಶದ ಸುಶಿಕ್ಷಿತ ಮಹಳೆಯರು ಏನು ಮಾಡಬಹುದು ?

(೧) ಯುದ್ಧ ವಿಷಯಕ ಸುಳ್ಳು ಸುದ್ದಿಗಳನ್ನು ಜನರು ನಂಬದಂತೆ ಮಾಡುವದು.

(೨) ಸೈನಿಕರಾಗಿ ಹೋಗಲು ಬಯಸುವ ತರುಣರಿಗೆ ಪ್ರೋತ್ಸಾಹನೆ ಕೊಡುವದು.

(೩) ವಿಮಾನ ದಾಳಿಯ ಕಾಲದಲ್ಲಿ ತಕ್ಕ ಎಚ್ಚರಿಕೆಯಿಂದಿದ್ದು ಕೆಲಸಮಾಡುವದು.

(೪) ಸೈನಿಕರ ಉಪಯೋಗಕ್ಕೆ ತಕ್ಕವಾದ ವಸ್ತುಗಳನ್ನು ಸಂಗ್ರಹಿಸುವದು.

(೫) ಗಾಯಾಳುಗಳಾದ ಸೈನಿಕರ ಶುಶ್ರೂಷೆಯ ಕಾರ್ಯಕ್ಕೆ ನೆರವಾಗುವದು.

ಹೊಸ ಪದ್ಧತಿಯ ಲಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಶ್ರೀ. ರಾ. ಸಿ. ಸಜ್ಜನ ಇವರು ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಈ
ಕವನ್ನು ರಚಿಸಿರುವರು. ಸರಕಾರದವರು ಇದನ್ನು ಮೇಲಿನ ಎಲ್ಲ ಇಯತ್ತ್ರಿ-
ಟಿಕ್ಸ್ಬಬುಕ್ ಎಂದು ಮಂಜೂರು ಮಾಡಿರುವರು. ಮತ್ತು ಸ್ಕೂಲಬೋರ್ಡು
ಧಿಕಾರಿಗಳೂ ಮಾನ್ಯಮಾಡಿದ್ದಾರೆ. ಇದರಲ್ಲಿ ಇಯತ್ತ್ರಿವಾರ ಜಮಾಖರ್ಚಿನ
ಸಕ್ರಮದಂತೆ ಆರಂಭದ ಜಮಾಖರ್ಚು, ಕೀರ್ದಿ, ಖತಾವಣಿ, ಬಾಕಿಗಳ
ಉತ್ಪನ್ನ ಖರ್ಚಿನ ಖಾತೆ, ಅಛಾವೆ, ತೋಂಡಮಿಳವಣಿ ಕೀರ್ದಿ ಮತ್ತು
ಸಹಕಾರಿ ನಂಘದ ಅಂಗಡಿ (ಸೊಸಾಯಿಟಿ) ಯ ಜಮಾಖರ್ಚು ಮುಂತಾದ
ಗಳೂ, ಪ್ರಾಮಿನರಿ ನೋಟ, ಮನಿಯಾರ್ಡರ, ಇನ್ಸುರನ್ಸ, ಚೆಕ್ಕು,
ತ, ಬಡ್ಡಿಯ ಆಕರಣೆ ಮೊದಲಾದ ವ್ಯವಹಾರದೊಳಗಿನ ಮಾಹಿತಿಗಳೂ
ಗಳೂ ಅವುಗಳ ಉತ್ತರಗಳೂ ಕೊನೆಗೆ ಪರೀಕ್ಷೆಯ ಪ್ರಶ್ನಕಾಗದಗಳೂ
ವು. ಇದು ಈಗಿನ ಪರೀಕ್ಷೆಯ ಪದ್ಧತಿಯಂತೆ ಬರೆದಿರುವದರಿಂದ ಹೆಣ್ಣು-
ಳ ಮತ್ತು ಗಂಡುಮಕ್ಕಳ ಪ್ರಾ. ಶಾ. ವ್ಯ. ಪ. ಪರೀಕ್ಷೆಯ ಉಮೇದವಾರ-
ಬಹು ಉಪಯುಕ್ತವಾದುದಿರುತ್ತದೆ. ಆದಕಾರಣ ಎಲ್ಲ ಮಹನೀಯರು ಇದರ
ವನ್ನು ಪಡೆಯಬೇಕೆಂದು ಆಶಿಸುತ್ತೇವೆ. ಬೆಲೆ : ೮ ಆಣೆ

ತ್ತೆ :- ರಾ. ಸಿ. ಸಜ್ಜನ ಮಾನ್ತರ, ಜೋರಾಪುರ ಪೇಟೆ, ವಿಜಾಪುರ.

ವಿನಂತಿ

☆

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ
ನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ ಮಾಸಪತ್ರಿಕೆಯು ಪ್ರತಿತಿಂಗಳ ಕೊನೆಯವಾರದಲ್ಲಿ ಪ್ರಸಿದ್ಧ-
ವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ
ಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿ-
ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆ-
ಕಳಿಸಬಹುದು.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯು** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿತಾಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦—೫—೦

ಕವಿತಾ ಕುಸುಮ ಮಂಜರಿ ಭಾಗ ೨ .... ೦—೫—೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫—೬—೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡುಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೩೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ನವೆಂಬರ್ ೧೯೪೨ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.				ಪುಟ.
೧.	ಹಿಂದುಸ್ತಾನ ಸರಕಾರವ ಔದ್ಯೋಗಿಕ ಶಿಕ್ಷಣವ ಯೋಜನೆ	..			೧
೨.	ಹೆಣ್ಣುಮಕ್ಕಳ ಸಿ. ಎಸ್. ಸಿ. ಪರೀಕ್ಷೆಯ ಅನುಭವಗಳು	..			೯
೩.	ಕೈ. ವಾ. ವಿನಾಯಕರಾವ ಜೋಶಿಯವರು	..	..		೧೫
೪.	ಮಹಾಯುದ್ಧದೊಳಗಿನ ಮಹತ್ವದ ಸ್ಥಳಗಳು	..	..		೧೯
೫.	ಪುಸ್ತಕ ಪರಿಚಯ	..	..	..	.. ೨೪
೬.	ಪ್ರಕಟನೆಗಳು	..	..	..	.. ೨೬
೭.	ಪತ್ರಗಳ ಮುಖ್ಯಾಂಶಗಳು	..	..	..	.. ೨೮
೮.	ಹಳ್ಳಿಗಳು ಸ್ವತಂತ್ರವಾಗಬೇಕು (ಪ್ರಬುದ್ಧರಿಗಾಗಿ)			..	೩೦

ಬಿಡಿ ಸಂಚಿಕೆಗೆ ನಾಲ್ಕು ಆಣೆಗಳು. ವಾರ್ಷಿಕ ಚಂದಾ ರೂಪಾಯಿಗಳು ನಾಲ್ಕು ಮಾತ್ರ.

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men Dharwar, at his Office.

ಪುರೋಗಾಮಿ ಶಿಕ್ಷಕ

★

(ಲೇಖಕರು: ಶ್ರೀ. ಎಸ್. ಬಿ. ಗಜೇಂದ್ರಗಡ, ಬಿ.ಎ., ಬಿ.ಟಿ., ವಿಜಾಪುರ)

ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಇರುವ
ದೈನಂದಿನ ಅಭ್ಯಾಸದಲ್ಲಿ— ಕಲಿಸುವ ಕಾರ್ಯದಲ್ಲಿ ಅತ್ಯಂತ ಉಪ-
ಯುಕ್ತವಾಗುವಂತೆ, ವಿದ್ಯಾಖಾತೆಯ ಅಭ್ಯಾಸಪತ್ರಿಕೆ-
ಯನ್ನು ಸಂಪೂರ್ಣವಾಗಿ ಅನುಸರಿಸಿ ಬರೆಯಲ್ಪಟ್ಟಿದೆ.

ಪುಟಗಳು ೩೩೬ ★ ಬೆಲೆ ೨-೪-೦

ಇದು ಮೂರು ಮುಖ್ಯ ಭಾಗಗಳನ್ನೊಳಗೊಂಡಿದೆ.

(೧) ಶೈಕ್ಷಣಿಕ ಮನಃಶಾಸ್ತ್ರವನ್ನು ೧೫೫ ಪುಟಗಳಲ್ಲಿ ವಿವೇಚಿಸಿದೆ (೨) ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನೂ ಪ್ರತ್ಯಕ್ಷವಾಗಿ ಕಲಿಸುವ ಶಾಸ್ತ್ರೀಯ ಪದ್ಧತಿಯನ್ನೂ ವಿವರಿಸಿದೆ. (೩.) ಆಧುನಿಕ ಶಿಕ್ಷಣ ಕ್ರಮದ ಮಹತ್ವದ ಅಂಗಗಳಾದ ಶಾರೀರಿಕ ಶಿಕ್ಷಣ, ಶಿಸ್ತು, ಸಂಘಟನೆ ಮೊದಲಾದ ವಿಷಯಗಳನ್ನು ತಿಳಿಸಿದೆ.

ಶಿಕ್ಷಣದ ಸರ್ವಾಂಗಗಳನ್ನೂ ಸುಲಲಿತವಾದ ಭಾಷೆಯಲ್ಲಿ ಒತ್ತಟ್ಟಿಗೇ
ಸುಂದರವಾಗಿ ಮಂಡಿಸಿದ ಶಾಸ್ತ್ರೀಯ ಗ್ರಂಥವು

ಕನ್ನಡದಲ್ಲಿ ಇದೊಂದೇ!

★

ಕನ್ನಡ-ಇಂಗ್ಲಿಷ್ ಶಾಲೆ-ಕಾಲೇಜುಗಳ ಎಲ್ಲಾ ಪಠ್ಯಪುಸ್ತಕಗಳೂ ಇತರ ಪುಸ್ತಕ,
ಸ್ಕೂಲ್ ಸ್ಟೇಶನರಿ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಸ್ಟೂಡಂಟ್ಸ್ ಓನ್ ಬುಕ್ ಡಿಪೋ, ಧಾರವಾಡ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೧	ನವಂಬರ್ ೧೯೪೨	ವರ್ಷ ೧೫. ಸಂ. ೮

ಹಿಂದುಸ್ತಾನ ಸರಕಾರದ ಔದ್ಯೋಗಿಕ ಶಿಕ್ಷಣದ ಯೋಜನೆ

ಲೇ:— ಶ್ರೀ. ಸಿ. ರಾ. ತಾವಡೆ, ಎಮ್. ಏ.
ನ್ಯಾಶನಲ್ ಸರ್ವಿಸ ಲೇಬರ ಟ್ರಿಬ್ಯೂನದ ಪ್ರಸಿದ್ಧಿಖಾತೆಯ ಅಧಿಕಾರಿಗಳು

೧. ಸದ್ಯಕ್ಕೆ ಜಗತ್ತಿನಲ್ಲಿ ದೊಡ್ಡದೊಂದು ಕ್ರಾಂತಿಯು ನಡೆದಿರುವದು. ಈಗ ಸಾಗಿರುವ ಜಾಗತಿಕ ಮಹಾಯುದ್ಧದ ಜ್ವಾಲೆಯಿಂದ ಮನೆಮಾರು ದೊಡ್ಡ ದೊಡ್ಡ ಕಾರಖಾನೆಗಳು ಅದರಂತೆಯೇ ಊರು ನಗರ ಇವೆಲ್ಲ ನಿರ್ಜನವಾಗ ತೊಡಗಿವೆ; ಇಷ್ಟೇ ಅಲ್ಲ, ಅವುಗಳ ಸಂಗಡಲೇ ಹಳೆಯ ತತ್ತ್ವಗಳು ಆಚಾರ ವಿಚಾರಗಳು ಸಂಸ್ಕೃತಿಗಳು ಇವೂ ಕೂಡ ಭಸ್ಮೀಭೂತವಾಗತೊಡಗಿವೆ. ಈ ಮಹಾಯುದ್ಧದ ಮೂಲಕ ಯಾರಿಗೂ ಕನಸುಮನಸುಗಳಲ್ಲಿ ಬರದಂಥ ಸಂಗತಿ ಗಳು ಸಂಭವಿಸುವಂಥ ಚಮತ್ಕಾರಿಕ ಪರಿಸ್ಥಿತಿಯುಂಟಾಗಿದೆ. ಇಂದಿನವರೆಗೆ ಈ ರಣಕುಂಡದಲ್ಲಿ ದುಮ್ಮಿಕ್ಕಿದ ಬೇರೆ ಬೇರೆ ರಾಷ್ಟ್ರಗಳು ಅಲ್ಲಿ ನಡೆದಿರುವ ಯುದ್ಧದ ಭೀಕರ ವರ್ಣನೆಗಳು ಇವನ್ನು ಓದಿ ಇದೇನು ನಮ್ಮ ಪುರಾಣಗಳಲ್ಲಿ ಬಣ್ಣಿಸಿರುವ ದೇವದಾನಯುದ್ಧದ ಪುನರಾವೃತ್ತಿಯಾಗತೊಡಗಿರುವವೇ ಎನ್ನಿಸುತ್ತಿದೆ. ಈ ಯುದ್ಧವು ಎಂದು ಹೇಗೆ ಕೊನೆಗಂಡೀತು ಅದರಿಂದ ಯಾವ ಸಂಗತಿಗಳ ನಿಷ್ಪತ್ತಿ ಯಾದೀತು ಎಂಬುದನ್ನು ಹೇಳಲು ಸಾಧ್ಯವಿಲ್ಲ. ಆದರೂ ಈಯುದ್ಧಾಗ್ನಿಯ ತಾಪವು ಅಖಿಲ ಜಗತ್ತನ್ನೇ ವ್ಯಾಪಿಸುವದೆಂಬದರಲ್ಲಿ ಮಾತ್ರ ಯಾವ ಸಂಶಯವೂ ಇಲ್ಲ. ಈ ಯುದ್ಧಾಗ್ನಿಯಲ್ಲಿ ಪ್ರತ್ಯಕ್ಷ ಬಿದ್ದು ಜೆಂದು ಜೀಗುದಿಯಾಗುವ ದುರ್ಘಟ

ಪ್ರಸಂಗವು ಭಾರತವಾಸಿಗಳಾದ ನಮಗೆ ಇಂದಿನವರೆಗೂ ಬಂದಿಲ್ಲ. ಪ್ರತ್ಯಕ್ಷ ಯುದ್ಧದಲ್ಲಿ ತೊಡಗಿದ ಅಥವಾ ಪ್ರತ್ಯಕ್ಷ ಯುದ್ಧವು ನಡೆದಿರುವ ದೇಶಗಳಿಗಿಂತಲೂ ನಮ್ಮ ಹಿಂದುಸ್ತಾನದ ಸ್ಥಿತಿಯು ಎಷ್ಟೋ ವಾಸಿ ಎಂಬುದೇನೊ ನಿಜ.

ಹಲಕೆಲವು ಸಾಮಗ್ರಿಗಳ ಅಭಾವ ಇಲ್ಲವೆ ತುಟಾಗ್ರತೆ ಇವಿಲ್ಲದಿದ್ದರೆ ಈ ಮಹಾಯುದ್ಧವು ನಡೆದಿದೆಯೋ ಇಲ್ಲವೊ ಎಂಬದೂ ಕೂಡ ನಮ್ಮ ಅನುಭವಕ್ಕೆ ಬರುತ್ತಿರಲಿಲ್ಲ. ವರ್ತಮಾನಪತ್ರಗಳಲ್ಲಿ ಯುದ್ಧವಾರ್ತೆಗಳನ್ನು ಓದುವದರಿಂದಲೇ ನಾವು "ಯುದ್ಧಸ್ಯ ವಾರ್ತಾ ರಮ್ಯಾ" ಎಂದುಕೊಂಡು ಸಮಾಧಾನದಿಂದಿರಬಹುದಾಗಿತ್ತು. ಸುತ್ತುಮುತ್ತಲೂ ಯುದ್ಧಾಗ್ನಿಯು ಹೊತ್ತಿ ಉರಿದು ಹಿಂದುಸ್ತಾನದ ಹೊಸ್ತಿಲಿಗೇ ಅದರ ಜಳವು ಸೋಂಕಿ ಹೊಗೆಯು ಮುಸುಕಿದ್ದರೂ ನಾವು ಅದರ ಅರಿವೇ ಇಲ್ಲವೋ ಎಂಬಂತೆ ಇರುವದನ್ನು ನೋಡಿ ಎಷ್ಟೋ ಜನರು ಆಶ್ಚರ್ಯಚಕಿತರಾಗಿದ್ದಾರೆ. ಕಳೆದ ೧೫೦ ವರ್ಷಗಳಿಂದ ಹಿಂದುಸ್ತಾನವು ಸಂಪೂರ್ಣ ಶಾಂತಿ ಸುಖವನ್ನು ಅನುಭವಿಸುತ್ತ ಬಂದಿದೆ. ಯುದ್ಧವೆಂದರೇನು ಎಂಬುದನ್ನು ಇತಿಹಾಸದಲ್ಲಿ ಇಲ್ಲವೆ ವರ್ತಮಾನಪತ್ರಗಳಲ್ಲಿ ಓದಿಯೇ ಕಲ್ಪಿಸಿಕೊಳ್ಳಬೇಕಾಗಿದೆ. ಇದಕ್ಕೂ ಹೆಚ್ಚಿನ ಅನುಭವವು ನಮಗಿಲ್ಲ. ಇಷ್ಟು ದೀರ್ಘಕಾಲೀನವಾದ ಶಾಂತತೆಯಿಂದ ವೈರಿಗಳ ಪ್ರತ್ಯಕ್ಷ ಯಾಂತ್ರಿಕ ತೋಪುಗಳ ಖಡಖಡಾಟವನ್ನು ಕೇಳುವ ಇಲ್ಲವೆ ಅವರ ವಿಮಾನಗಳಿಂದ ಬಾಂಬುಗಳ ಮಳೆಗರೆಯುವವರೆಗೂ ನಮಗೆ ಯುದ್ಧದ ಸರಿಯಾದ ಕಲ್ಪನೆಯು ಬರಲಾರದಂಥ ವಿಚಿತ್ರ ಪರಿಸ್ಥಿತಿಯುಂಟಾಗಿದೆ. ಆಗಲಾದರೂ ನಾವು ಯಾವರೀತಿಯಾಗಿ ವರ್ತಿಸುವೆವೋ ನಿಶ್ಚಿತವಾಗಿ ಹೇಳಲು ಬರದು. ಇದು ದೇಶದ ದುರ್ದೈವವೇ ಸರಿ.

೨. ನೆರೆಹೊರೆಯ ಮನೆಗಳಿಗೆ ಬೆಂಕಿ ಹೊತ್ತಿರುವಾಗ ತಮ್ಮ ಮನೆಯಲ್ಲಿ ಕುಳಿತು ಆ ಅಗ್ನಿಜ್ವಾಲೆಯು ಆಕಾಶಕ್ಕೆ ತೂರುತ್ತಿರುವದನ್ನು ನೋಡುತ್ತಿರುವ ಮನೆಮುರುಕರ ಸ್ಥಿತಿಯಿದು. ಯಾವ ಸುಜ್ಞ ಗೃಹಸ್ಥನೂ ಈ ಕೃತ್ಯವು ಯೋಗ್ಯವೆಂದು ಒಪ್ಪಿಕೊಳ್ಳಲಾರನು. ಯುರೋಪಖಂಡ ರಶಿಯಾಗಳೊಳಗಿನ ಪಟ್ಟಣಗಳು–ನಗರಗಳು ಹೊತ್ತಿ ಉರಿದುಹೋಗಿ ನಿರ್ಜನವಾಗಿರುವದನ್ನು ವೃತ್ತಪತ್ರಿಕೆಗಳಲ್ಲಿ ಓದಿದ ಬಳಿಕ ನಮ್ಮ ದೇಶಕ್ಕೂ ಇಂಥ ಸ್ಥಿತಿಯು ಬರಲೆಂದು ನಮ್ಮಲ್ಲಿ ಯಾರಿಗಾದರೂ ಎನಿಸಬಹುದೇನು? ಹಾಗಾದರೆ, ಅಂಥ ಪ್ರಸಂಗಗಳು ಬರಬಾರದೆಂದಿದ್ದರೆ ನಾವು ತಕ್ಕ ಪ್ರಯತ್ನಮಾಡಕೂಡದೇನು? ಜರ್ಮನರು ಮಧ್ಯಪೂರ್ವದಿಂದ ನಮ್ಮ ದೇಶದ ಮೇಲೆ ಅಭಿಯೋಗಮಾಡದಿರುವದಕ್ಕೆ ನಾವು ತಕ್ಕ ಯೋಜನೆಗಳನ್ನು ಕೈಕೊಳ್ಳಬಾರದೇನು? ಜರ್ಮನ್ನರು ಅತ್ತಕಡೆಯಿಂದ ನಮ್ಮ ದೇಶದಲ್ಲಿ ನುಗ್ಗಲು ಹವಣಿಸುತ್ತಿದ್ದಾರೆ. ಆಸಾಮದ ಕಡೆಯಿಂದ ಜಪಾನೀ ಸೈನಿಕರು ಒಳಸೇರಲು

ಹೊಂಚುಹಾಕುತ್ತಿದ್ದಾರೆ. ಹೀಗೆ ಎರಡೂ ಬಾಗಿಲುಗಳಿಂದ ಆಕ್ರಮಣ ಮಾಡಲು ಯತ್ನಿಸುತ್ತಿರುವ ಹಗೆಗಳನ್ನು ತಡೆದು ಹಿಡಿಯುವ ಸಾಹಸವನ್ನು ನಮ್ಮ ಹಿಂದೀ ಸೈನಿಕರು ಒಳ್ಳೇ ಶೌರ್ಯಧೈರ್ಯಗಳಿಂದ ನಡೆಯಿಸಿರುವರು. ನಮ್ಮ ಹಿಂದುಸ್ತಾನದಲ್ಲಿ ಪ್ರತ್ಯಕ್ಷಯುದ್ಧವಾಗಬಾರದು ಮತ್ತು ನಮ್ಮ ಮಕ್ಕಳು ಮರಿಗಳು ಆ ಯುದ್ಧದ ಭೀಕರ ಪರಿಣಾಮವನ್ನು ಅನುಭವಿಸಬಾರದು ಎಂದು ನಮ್ಮ ಹಿಂದೀ ಸೈನಿಕರು ಹಗೆಗಳನ್ನು ಹೊರಗಿನಿಂದಲೇ ತಡೆದುಹಿಡಿದಿದ್ದಾರೆ. ಹೀಗೆ ಹೊರಗಿನಿಂದ ಹೊರಗೆಯೇ ಈ ಯುದ್ಧದ ಭೂತದ ಉಚ್ಚಾಟನೆಯಾದರೆ ನಾವು ಅದರ ಕರಾಳ ಜ್ವಾಲೆಯನ್ನು ದೂರದಿಂದಲೇ ತಣಿಸಿಕೊಂಡಂತಾಗಬಹುದು; ಅದರ ಜ್ವಾಲೆಯ ಜಳವು ಮಾತ್ರ ನಮಗೆ ಸೋಂಕಿದಂತೆನಿಸಬಹುದು. ಯುದ್ಧಮಾಡಲು ಸೈನ್ಯವು ಬೇಕು; ನಮ್ಮ ದೇಶದಲ್ಲಿ ಸಾಕಷ್ಟು ಸೇನಾಬಲವಿದೆ. ಸಾವಿರಾರು ಜನರು ಸೈನ್ಯದಲ್ಲಿ ಸೇರುತ್ತಲೂ ಇದ್ದಾರೆ. ಆದರೆ ಸಾಂಪ್ರತದ ಯುದ್ಧವು ಕೇವಲ ಮನುಷ್ಯಬಲವೊಂದನ್ನೇ ಅವಲಂಬಿಸಿಲ್ಲ. ಸೇನಾಬಲದ ಜೊತೆಗೆ ಬೇಕಾದಷ್ಟು ಯಂತ್ರಸಾಮಗ್ರಿಯೂ ಬೇಕು. ಆಗಲೇ ಆ ಸೈನ್ಯವು ಕಾರ್ಯಕಾರಿಯಾಗಬಹುದು. ಸದ್ಯದ ಯುದ್ಧವು ಮನುಷ್ಯ ಮನುಷ್ಯರ ನಡುವೆ ನಡೆಯುವದೆಂದು ಹೇಳುವದಕ್ಕಿಂತಲೂ ಯಂತ್ರ ಯಂತ್ರಗಳ ನಡುವೆ ಸಾಗುವದೆಂದು ಹೇಳುವದೇ ಯೋಗ್ಯವೆನಿಸುವದು. ಇದೇನು ಅತಿಶಯೋಕ್ತಿಯಲ್ಲ. ಯುದ್ಧದ ಹಡಗಗಳು, ಯಾಂತ್ರಿಕ ತೋಪುಗಳು, ಟ್ಯಾಂಕುಗಳು, ವಿಮಾನಗಳು, ಬಾಂಬುಗಳು ಮುಂತಾದ ನಾನಾಪ್ರಕಾರದ ಯುದ್ಧ ಸಾಮಗ್ರಿಗಳು ವಿಪುಲವಾಗಿರುವ ಪಕ್ಷವೇ ಯಶಸ್ಸು ಪಡೆಯುವ ಸಂಭವವು ಹೆಚ್ಚು. ಇದೀಗ ಇಂದಿನವರೆಗಿನ ಯುದ್ಧದ ಅನುಭವದಿಂದ ಸಿದ್ಧವಾದ ಮಾತು. ಆದ್ದರಿಂದ ಮಧ್ಯಪೂರ್ವದಲ್ಲಿ ಎಂದರೆ ಇಜಿಪ್ತದಲ್ಲಿಯೂ ಅತಿಪೂರ್ವದಲ್ಲಿಯೂ ಯುದ್ಧಮಾಡುತ್ತಿರುವ ನಮ್ಮ ಹಿಂದೀ ಸೈನಿಕರಿಗೆ ಬೇಕಾದಷ್ಟು ಯುದ್ಧ ಸಾಮಗ್ರಿಗಳನ್ನು ಒದಗಿಸಿಕೊಡುವದು ನಮ್ಮ ಆದ್ಯಕರ್ತವ್ಯವು. ಈ ಸಾಮಗ್ರಿಗಳನ್ನು ನಾವು ಆದಷ್ಟು ಬೇಗನೆ ಒದಗಿಸಿಕೊಡಬೇಕು. ಹಾಗೆ ಮಾಡುವದರಿಂದ ಯುದ್ಧವು ದೇಶದ ಹೊರಗೇ ಉಳಿದು ನಮಗೆ ಬೇಕಾಗಿರುವ ಜಯವು ಬೇಗನೆ ಲಭಿಸಬಹುದು. ಜನರು ನಂಬಲಿ ನಂಬದಿರಲಿ ಪ್ರಕೃತದ ಯುದ್ಧವು ಬ್ರಿಟಿಶರಿಗೂ ಅಮೇರಿಕನ್ನರಿಗೂ ಸಂಬಂಧಿಸುವಷ್ಟೇ ಹಿಂದೀಯರಿಗೂ ಸಂಬಂಧಿಸುವದು. ಹಿಂದೀಯರಿಗೆ ಸ್ವಾತಂತ್ರ್ಯವು ಬೇಕೆನ್ನಿಸುವದು ಸಹಜವೇ ಸರಿ. ಹಿಂದುಸ್ತಾನಕ್ಕೆ ಸ್ವಾತಂತ್ರ್ಯವು ಬೇಕೆನ್ನುವ ವಿಷಯದಲ್ಲಿ ಯಾರಮೂ ಭಿನ್ನಾಭಿಪ್ರಾಯವಿಲ್ಲ. ಆದರೆ ಜರ್ಮನ್ನರ ಅಥವಾ ಜಪಾನರ ಆಕ್ರಮಣದಿಂದ ಈ ಸ್ವಾತಂತ್ರ್ಯವು ದೂರತೋಪಾಸ್ತವೆಂಬುದು ಮಾತ್ರ ನಿಸ್ಸಂಶಯದ ಮಾತು. ಆದ್ದರಿಂದ ನಾವು

ಈ ಹಗೆಗಳನ್ನು ಹೊಡೆದೋಡಿಸಿ ನಿರ್ನಾಮಗೊಳಿಸಬೇಕು. ಮತ್ತು ಅದಕ್ಕೆ ಪ್ರತಿ ಭಾರತವಾಸಿಯೂ ವಿಶ್ವಪ್ರಯತ್ನ ಮಾಡಬೇಕಾಗಿದೆ. ಜರ್ಮನಿಯ ಇಲ್ಲವೆ ಜಪಾನದ ಆಕ್ರಮಣದಿಂದ ಭಾರತೀಯರ ಸ್ವಾತಂತ್ರ್ಯದ ಪ್ರಶ್ನೆಯು ಸುಲಭವಾಗಿ ಬಹುದು ಎಂದು ಯೋಚಿಸುವವರಿಗೆ ಬುದ್ಧಿಭ್ರಂಶವಾಗಿದೆಯೆಂದು ಹೇಳಿ ಬಹುದು.

೩. ಜಪಾನ ಜರ್ಮನಿಗಳ ಆಕ್ರಮಣವನ್ನು ಅಡ್ಡಗಟ್ಟುವದಕ್ಕೂ ಸದ್ಯದ ಯುದ್ಧವನ್ನು ಹಿಂದುಸ್ತಾನದ ಹೊರಗೆ ತಡೆದು ಹಿಡಿಯುವದಕ್ಕೂ ಯತ್ನಿಸುವ ಹಿಂದೀ ಸೈನಿಕರಿಗೆ ಯುದ್ಧಸಾಮಗ್ರಿಗಳನ್ನು ತಯಾರಿಸುವದಕ್ಕಾಗಿ ಹಿಂದುಸ್ತಾನ ಸರಕಾರದವರು ದೊಡ್ಡ ದೊಡ್ಡ ಕಾರಖಾನೆಗಳನ್ನು ಪ್ರಾರಂಭಿಸಿರುವರು ಆದಕ್ಕಾಗಿ ಪರದೇಶಗಳಿಂದ ಕೋಟ್ಯವಧಿ ರೂಪಾಯಿ ಬೆಲೆ ಬಾಳುವ ಯಂತ್ರ ಸಾಮಗ್ರಿಗಳನ್ನು ತರಿಸಿದ್ದಾರೆ. ಇಂಥ ಯಂತ್ರಸಾಮಗ್ರಿಗಳುಳ್ಳ ಕಾರಖಾನೆಗಳನ್ನು ಪ್ರಾರಂಭಿಸಿದರೂ ಅವುಗಳಲ್ಲಿ ಕೆಲಸಮಾಡುವದಕ್ಕೆ ಒಳ್ಳೆಯ ಕೆಲಸಗಾರರು ಬೇಕಾಗುವರಷ್ಟೆ! ನಮ್ಮ ಹಿಂದುಸ್ತಾನದಲ್ಲಿ ಇಂದು ಕೆಲಸಗಾರರ ತುಟಾಗ್ರತೆ ಯಿದೆ. ಹಿಂದುಸ್ತಾನದಲ್ಲಿ ಪ್ರಜಾಸಂಖ್ಯೆಯು ಹೆಚ್ಚಾಗಿರುವದರಿಂದಲೂ ಅಲ್ಲಿ ನಿರುದ್ಯೋಗಿಗಳು ಬೇಕಾದಷ್ಟು ಜನರಿರುವದರಿಂದಲೂ ಕೂಲಿಕಾರರನ್ನು ದೊರಕಿಸುವದು ಕಠಿಣವಾಗದು. ಆದರೆ ಯಂತ್ರಗಳಲ್ಲಿ ಕೆಲಸ ಮಾಡುವ ತಿಳಿವಳಿಕೆಯುಳ್ಳ ಜನರು ಸಿಗುವದು ಕಠಿಣವಾಗಿದೆ. ನಮ್ಮವರಿಗೆ ಪುಸ್ತಕೀಯ ಶಿಕ್ಷಣದ ಜೊತೆಗೆ ಔದ್ಯೋಗಿಕ ಶಿಕ್ಷಣವೂ ದೊರೆಯುತ್ತಿದ್ದರೆ ಇಂಥ ಕೆಲಸಗಾರರು ಬೇಕಾದಷ್ಟು ದೊರೆಯಬಹುದಾಗಿತ್ತು. ಆದರೆ ಈ ಹಳೆಯ ಕತೆಯನ್ನೇ ಎತ್ತಿ ವಾದಮಾಡುವದರಲ್ಲಿ ಅರ್ಥವೇನಿದೆ? ಈಗಿನ ಮಹಾಯುದ್ಧದ ನಿಮಿತ್ತದಿಂದ ಹಿಂದುಸ್ತಾನ ಸರಕಾರವು ಹಿಂದೀ ತರುಣರಿಗೆ ಔದ್ಯೋಗಿಕ ಶಿಕ್ಷಣದ ಅನುಕೂಲತೆ ಮಾಡಿಕೊಡಬೇಕಾದ ಸಂದರ್ಭವೊದಗಿದೆ. ಕಳೆದ ಎರಡು ವರ್ಷಗಳಲ್ಲಿ 'ಟೆಕ್ನಿಕಲ್ ಟ್ರೇನಿಂಗ್ ಸ್ಕೀಮ್' ಎಂದರೆ 'ಔದ್ಯೋಗಿಕ ಶಿಕ್ಷಣ ಕೊಡುವ ಯೋಜನೆ'ಯನ್ನು ಹಿಂದುಸ್ತಾನ ಸರಕಾರವು ಪ್ರಚಾರದಲ್ಲಿ ತಂದಿರುವದು. ಈ ಯೋಜನೆಯ ಮೇರೆಗೆ ಸುಶಿಕ್ಷಿತರಾದ ಹಿಂದೀ ತರುಣರಿಗೆ ಬೇರೆ ಬೇರೆ ಉದ್ಯೋಗ ವ್ಯವಸಾಯಗಳ ಶಿಕ್ಷಣವನ್ನು ಸರಕಾರವು ತನ್ನ ಖರ್ಚಿನಿಂದಲೇ ಒದಗಿಸಿಕೊಡುತ್ತಿದೆ. ಔದ್ಯೋಗಿಕ ಶಿಕ್ಷಣವು ಪೂರ್ಣವಾದ ಬಳಿಕ ಅವರಿಗೆ ಬೇರೆ ಬೇರೆ ಕಾರಖಾನೆಗಳಲ್ಲಿ ಕೆಲಸ ಕೊಡುವರು. ಹಿಂದುಸ್ತಾನದ ಹೊರಗೆ ಹೋಗಿ ರಣಭೂಮಿಯಲ್ಲಿ ತೊಡಗಿರುವ ಸೈನ್ಯದ ಸಂಗಡ ಕಳುಹಿಸಬೇಕಾಗಿರುವ ಯಂತ್ರಸಾಮಗ್ರಿಗಳ ಜೊತೆಗೆ ಅವನ್ನು ಸರಿಪಡಿಸುವ ಜನರೂ ಹೋಗಬೇಕಾಗುವದು. ಅದರಂತೆಯೇ ಹಿಂದುಸ್ತಾನದಲ್ಲಿಯೆ ನಡೆಯು

ಸುವ ಕಾರಖಾನೆಗಳಲ್ಲಿ ಕೆಲಸ ಮಾಡುವದಕ್ಕೂ ಇಂಥ ಕಲಾವಿದರಾದ ಕೆಲಸಗಾರರು ಬೇಕಾಗುವರು. ಇಷ್ಟೇ ಅಲ್ಲ, ಸೈನ್ಯದ ಖಾತೆಯ ಹೊರಗಿರುವ ರೈಲ್ವೆ ಕಂಪನಿ, ಗಿರಣಿ ಮುಂತಾದ ಕಡೆಗಳಲ್ಲಿಯೂ ಕೆಲಸ ಮಾಡುವದಕ್ಕೆ ಇಂಥ ಜನರು ಬೇಕಾಗುವರು. ಇಂಥ ಕೆಲಸಗಾರರನ್ನು ತಯಾರಿಸುವದೇ ಹಿಂದುಸ್ತಾನ ಸರಕಾರದ 'ಟೆಕ್ನಿಕಲ್ ಟ್ರೇನಿಂಗ್ ಸ್ಕೀಮಿ'ನ ಮುಖ್ಯ ಉದ್ದೇಶವು. ಈ ಸ್ಕೀಮಿಗೆ ಅನುಸಾರವಾಗಿ ನಡೆದಿರುವ ಶಿಕ್ಷಣಾಲಯಗಳಲ್ಲಿ ಸೇರುವದಕ್ಕೆ ಈ ಕೆಳಗಿನ ಯೋಗ್ಯತೆಯುಳ್ಳ ಉಮೇದುವಾರರು ತಕ್ಕವರೆನಿಸುವರು.

(ಅ) ಬ್ರಿಟಿಷ ಹಿಂದುಸ್ತಾನದ ಅಥವಾ ಹಿಂದೀ ಸಂಸ್ಥಾನದ ಪ್ರಜೆಯಾಗಿರಬೇಕು.

(ಬ) ವಯಸ್ಸು ೧೭ ವರ್ಷಕ್ಕೆ ಮಿಕ್ಕಿ ೪೦ ರ ಒಳಗೆ ಇರಬೇಕು.

(ಕ) ಶರೀರದಿಂದ ಆರೋಗ್ಯವಂತನಾಗಿರಬೇಕು.

(ಡ) ಓದು ಬರೆಹಗಳನ್ನೂ ಸುಲಭ ವ್ಯಾವಹಾರಿಕ ಗಣಿತವನ್ನೂ ಕಲಿತವನಾಗಿರಬೇಕು.

(ಇ) ಇಂಗ್ಲಿಷು ಬಲ್ಲ ಉಮೇದವಾರನನ್ನು ಮೊದಲು ಆರಿಸಿಕೊಳ್ಳಲಾಗುವದು.

ಹೀಗೆ ಆರಿಸಿಕೊಂಡ ಉಮೇದುವಾರರಿಗೆ ಮುಂದೆ ಹೇಳುವ ವಿಷಯಗಳನ್ನು ಕಲಿಸಲಾಗುವದು.

(೧) ಟರ್ನರ್ಸ (೨) ಫಿಟರ್ಸ (೩) ಮೋಲ್ಡರ್ಸ (೪) ವೆಲ್ಡರ್ಸ (೫) ಮಶಿನಿಸ್ಟ (೬) ಪ್ಯಾಟರ್ನಮೇಕರ್ಸ (೭) ಪ್ಲೇನರ್ಸ (೮) ಪೇಂಟರ್ಸ (೯) ಕಾರ್ಪೆಂಟರ್ಸ (೧೦) ಮೇಸನ್ಸ (೧೧) ಬ್ಲಾಕ್‌ಸ್ಮಿಥ್ (೧೨) ಗ್ರಾಯಿಂಡರ್ಸ (೧೩) ಟಿನ್ ಎಂಡ್ ಕಾಪರ್‌ಸ್ಮಿಥ್ಸ (೧೪) ಇಲೆಕ್ಟ್ರಿಶನ್ಸ (೧೫) ಸರ್ವೇಯರ್ಸ (೧೬) ಡ್ರ್ಯಾಫ್ಟಮೆನ್ಸ (೧೭) ವಾಯರ್‌ಲೆಸ್ ಆಪರೇಟರ್ಸ ಮುಂತಾದವರ ಉದ್ಯೋಗಗಳು.

(೪) ಸರ್ವೇಯರ್ಸ ಡ್ರಾಫ್ಟಮೆನ್ಸ ಮತ್ತು ವಾಯುರಲೆಸ್ ಆಪರೇಟರ್ಸ ಈ ಉದ್ಯೋಗಗಳ ಶಿಕ್ಷಣ ಪಡೆಯುವವರು ಮೇಟ್ರಿಕ್ ಪಾಸಾದವರು ಅಥವಾ ಅಷ್ಟು ಇಂಗ್ಲಿಷು ಶಿಕ್ಷಣ ಪಡೆದವರು ಇರಬೇಕು. ಇಲೆಕ್ಟ್ರಿಶನ್ಸ, ಟರ್ನರ್ಸ, ಮಶಿನಿಸ್ಟ್ಸ ಈ ವ್ಯವಸಾಯಗಳ ಶಿಕ್ಷಣ ಪಡೆಯಲು ಮೂರು ನಾಲ್ಕು ಇಯತ್ತೆಗಳಷ್ಟು ಇಂಗ್ಲಿಷು ಶಿಕ್ಷಣವನ್ನು ಪಡೆದವರಿರಬೇಕು. ಇತರ ಕೆಲಸಗಳನ್ನು ಕಲಿಯುವ ಕೆಲಸಗಾರರು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದವರಿರಬೇಕು. ಮೇಲಿನ

ಔದ್ಯೋಗಿಕ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಯಾವ ತರದ ಫೀಯನ್ನು ಕೊಡ ಬೇಕಾಗಿಲ್ಲ. ಇಷ್ಟೇ ಅಲ್ಲ, ಅವರಿಗೆ ಮುಂದೆ ಹೇಳುವ ಪ್ರಮಾಣದಿಂದ ಶಿಷ್ಯವೃತ್ತಿ ಅಥವಾ ವಿದ್ಯಾರ್ಥಿ ವೇತನವು ದೊರೆಯುವದು.

ಮುಂಬಯಿ ಶಹರದಲ್ಲಿ ಸಾಕ್ಷರಿಗಳಿಂದ ಮೇಟ್ರಿಕ್ ಪಾಸಾಗದವರಿಗೆ ೨೬ ರೂ.
,, ಮೆಟ್ರಿಕ್ ಪಾಸಾದವರಿಗೆ ೩೧ ರೂ.

ಅಹಮ್ಮದಾಬಾದ ಮತ್ತು ಪುಣೆ ಶಹರಗಳಲ್ಲಿ ಸಾಕ್ಷರಿಗಳಿಂದ
ಮೆಟ್ರಿಕ್ ಪಾಸಾಗದವರಿಗೆ ೨೫ ರೂ.
,, ಮೆಟ್ರಿಕ್ ಪಾಸಾದವರಿಗೆ ೨೬ ರೂ.

ಇತರ ಊರುಗಳಲ್ಲಿ ಸಾಕ್ಷರಿಗಳಿಂದ ಮೆಟ್ರಿಕ್ ಪಾಸಾಗದವರಿಗೆ ೨೪ ರೂ.
,, ಮೇಟ್ರಿಕ್ ಪಾಸಾದವರಿಗೆ ೨೯ ರೂ.

ಈ ಶಿಕ್ಷಣದ ಅವಧಿಯು ಒಂದು ವರ್ಷದ್ದಿರುವದು. ಆದರೂ ಎಷ್ಟೋ ವಿದ್ಯಾರ್ಥಿಗಳು ಐದಾರು ತಿಂಗಳುಗಳಲ್ಲಿಯೇ ಅಭ್ಯಾಸವನ್ನು ಮುಗಿಸಿಬಿಡುವಂತೆ ಕಂಡು ಬಂದಿರುವದು. ಶಿಕ್ಷಣವು ಪೂರ್ಣವಾದ ಬಳಿಕ ಪರೀಕ್ಷೆಯನ್ನು ತೆಗೆದು ಕೊಂಡು ನೌಕರಿಯನ್ನು ಕೊಡುವರು. ನೌಕರಿಯ ಮೇಲಿದ್ದಾಗ ಅವರಿಗೆ ೫೦–೬೦ ರೂ. ಗಳ ವರೆಗೆ ಸಂಬಳವು ದೊರೆಯುವದು.

ಇದೂ ಅಲ್ಲದೆ ಯುದ್ಧ ಸಾಮಗ್ರಿಗಳನ್ನು ತಯಾರಿಸುವ ಕಾರಖಾನೆಗಳಲ್ಲಿ ಕೆಲಸಮಾಡುವವರಿಗೆ ಊಟ, ತಿಂಡಿತಿನಸುಗಳು, ಬಟ್ಟೆಬರಿಗಳು, ಔಷಧೋಪಚಾರ, ವಸತಿಯ ವ್ಯವಸ್ಥೆ ಇವೆಲ್ಲ ಪುಕ್ಕಟೆ ದೊರೆಯುವವು. ಅರ್ಥಾತ್ ಅವರ ಪೂರ್ಣ ಪಗಾರವು ಶಿಲಕು ಉಳಿಯುವದೆಂದು ಹೇಳಲು ಅಡ್ಡಿಯಿಲ್ಲ.

(೫) ಎಷ್ಟೋ ಜನರಿಗೆ ಈ ಸುಯೋಗವನ್ನು ಉಪಯೋಗಿಸಿಕೊಳ್ಳಬೇಕೆ ನ್ನಿಸಿದರೂ ಕೂಡ ತುಸು ಅಂಜಿಕೆ ಬರುವದು. ಯಾಕಂದರೆ ಅವರಿಗೆ ಆತ್ಮರಕ್ಷ ಣೆಯ ಬಗ್ಗೆ ಸಂಶಯವುಂಟಾಗುವದು. ಆದರೆ ಆ ಮಾತು ನಿರಾಧಾರವಾದದ್ದು. ಹೇಗೆಂದರೆ, ಇಷ್ಟೊಂದು ಹಣವನ್ನು ವೆಚ್ಚ ಮಾಡಿ ದೇಶಸಂರಕ್ಷಣೆಯ ಕಾರ್ಯ ಕ್ಕಾಗಿ ತಯಾರಿಸಿದ ಉನ್ನೇದುವಾರರು ತಕ್ಕ ವೇಳೆಯಲ್ಲಿ ಕೆಲಸಕ್ಕೆ ನೆರವಾಗಬೇ ಕೆಂದು ಸರಕಾರದವರು ಇಂಥ ಜನರ ಸಂರಕ್ಷಣೆಯ ಬಗ್ಗೆ ಸಾಮಾನ್ಯ ಪ್ರಜೆಗಳ ರಕ್ಷಣೆಗಿಂತಲೂ ಹೆಚ್ಚು ಲಕ್ಷ ಪೂರೈಸುವದು ಸಹಜವೇ ಸರಿ. ಅವರ ಸಂರಕ್ಷಣೆ ಗಾಗಿ ಡಾಕ್ಟರರು ಇರುವರು. ಮೇಲಾಗಿ ಅವರಿಗೆ ಆತ್ಮರಕ್ಷಣೆಯ ಶಿಕ್ಷಣವನ್ನೂ ಕೊಡಲಾಗುವದು.

ಶಿಕ್ಷಣವು ಮುಗಿದ ಬಳಿಕ ರಣಭೂಮಿಗೆ ಹೋಗಬೇಕಾಗುವದೆಂದು ಕೆಲವರ ಕಲ್ಪನೆ ಇರುವದು. ಆದರೆ ಸರಕಾರದವರಿಗೆ ಇಂಥವರನ್ನು ರಣಭೂಮಿಗೆ ಕಳುಹಿಸುವ ಉದ್ದೇಶವಿಲ್ಲ. ಔದ್ಯೋಗಿಕ ಶಿಕ್ಷಣವನ್ನು ಪಡೆದ ತರುವಾಯ ಯುದ್ಧ ಸಾಮಗ್ರಿಗಳನ್ನು ತಯಾರಿಸುವದಕ್ಕೆ ನಿಯಮಿಸುವದೇ ಅವರ ಧ್ಯೇಯವಾಗಿರುವದು. ಕೆಲವು ವಿಶೇಷ ಸಂದರ್ಭಗಳಲ್ಲಿ ಯಂತ್ರಸಾಮಗ್ರಿಗಳ ಸುರಕ್ಷಿತತೆಗಾಗಿಯೂ ಅವು ಕೆಟ್ಟರೆ ಸರಿಪಡಿಸುವದಕ್ಕಾಗಿಯೂ ಇಂಥವರಲ್ಲಿ ಕೆಲವರನ್ನು ಸೈನ್ಯದ ಸಂಗಡ ಕಳುಹಿಸಬೇಕಾಗ ಬಹುದು. ಇಂಥವರು ಪ್ರತ್ಯಕ್ಷ ಯುದ್ಧ ಮಾಡಬೇಕಾಗುವದಿಲ್ಲ. ಸೈನ್ಯದ ಸಂಗಡ ಹೋಗುವ ಇಂಥ ಜನರ ಬೀಡಾರವು ಪ್ರತ್ಯಕ್ಷ ರಣಭೂಮಿಗೆ ದೂರವಾಗಿ ಸುರಕ್ಷಿತವಾದ ಸ್ಥಳದಲ್ಲಿ ಇರುವದು. ಯಾವುದೇ ಕೆಲಸಗಾರರಿಗೆ ಪ್ರತ್ಯಕ್ಷ ಯುದ್ಧದಲ್ಲಿ ತೊಡಗುವ ಸಂದರ್ಭವಿರುವದಿಲ್ಲ. ಕೆಲಸಗಾರರೆಂದು ಆರಿಸಿಕೊಂಡ ಜನರನ್ನು ಸೈನಿಕರಂತೆ ಉಪಯೋಗಿಸಿಕೊಳ್ಳಲಾಗುವದೆಂಬ ಹೇಳಿಕೆಯು ತೀರ ನಿರಾಧಾರವಾದದ್ದು. ಕಾರಖಾನೆಗಳಲ್ಲಿ ಕೆಲಸ ಮಾಡುವ ಜನರನ್ನು ಸೈನ್ಯದ ಸಂಗಡ ಕಳುಹಿಸುವಾಗ ಅವರ ಸಮ್ಮತಿಯನ್ನು ಪಡೆದುಕೊಳ್ಳುವರು. ಹೀಗೆ ಆತ್ಮಸಂತೋಷದಿಂದ ರಣಭೂಮಿಗೆ ಹೋದ ಕೆಲಸಗಾರರ ಕುಟುಂಬದವರ ಸಂರಕ್ಷಣೆಯ ಭಾರವನ್ನು ಸರಕಾರವು ವಹಿಸಿಕೊಳ್ಳುವದು.

(೬) ವೆಚ್ಚವಿಲ್ಲದೆ ಔದ್ಯೋಗಿಕ ಶಿಕ್ಷಣವನ್ನು ಪಡೆಯುವ ಸುಸಂಧಿಯನ್ನು ಜನತೆಯು ಅವಶ್ಯವಾಗಿ ಉಪಯೋಗಿಸಿಕೊಳ್ಳಬೇಕು. ನಾವು ಇಂದು ಯುದ್ಧ ಸಾಮಗ್ರಿಗಳನ್ನು ತಯಾರಿಸಿ ರಣಭೂಮಿಯಲ್ಲಿ ಕಾದಾಡುವ ನಮ್ಮ ಸೈನಿಕರಿಗೆ ಒದಗಿಸಿಕೊಟ್ಟರೆ ಯುದ್ಧವು ಹೊರಗಿಂದ ಹೊರಗೇ ಉಳಿದು ನಮ್ಮ ದೇಶವು ಯುದ್ಧದ ಇಕ್ಕಳದಿಂದ ಪಾರಾಗಬಹುದು. ಯುದ್ಧವು ಮುಗಿದ ತರುವಾಯ ಈ ಔದ್ಯೋಗಿಕ ಶಿಕ್ಷಣದ ಲಾಭವು ನಮ್ಮ ದೇಶೀಯ ಉದ್ಯೋಗಗಳಿಗೆ ದೊರೆಯಬಹುದು. ನಮ್ಮವೇ ಕಾರಖಾನೆಗಳು, ನಮ್ಮವೇ ಕೆಲಸಗಾರರು, ಹೀಗಾದರೆ ದೇಶದ ಉತ್ಕರ್ಷಕ್ಕೆ ಸಹಾಯವಾಗುವದು. ಆದ್ದರಿಂದ ಈ ಸುಸಂಧಿಯನ್ನು ಉಪಯೋಗಿಸಿಕೊಂಡು ಸ್ವಾರ್ಥವನ್ನೂ ದೇಶ ಹಿತವನ್ನೂ ಸಾಧಿಸಿಕೊಳ್ಳುವದು ಅಪೇಕ್ಷಣೀಯವಾಗಿದೆ. ಯುದ್ಧದ ಮೂಲಕ ಉಂಟಾಗಿರುವ ಸಂದರ್ಭವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ನಮ್ಮ ದೇಶದ ಬಲವನ್ನು ಹೆಚ್ಚಿಸುವದು ಪ್ರತಿಯೊಬ್ಬ ಸುವಿಚಾರೀ ಮನುಷ್ಯನ ಕರ್ತವ್ಯವಾಗಿದೆ. ಇದು ವಾದನಿವಾದ ಮಾಡುತ್ತ ಕೂಡ್ರುವ ಸಮಯವಲ್ಲ. ವಿಜಯ ಸಂಪಾದನೆಯೆಂಬ ಧ್ಯೇಯ ಮೊಂದನ್ನೇ ಮುಂದಿಟ್ಟುಕೊಂಡು ಕೆಲಸಕ್ಕೆ ತೊಡಗಬೇಕು.

(೭) ಉಮೇದವಾರರ ಸೌಕರ್ಯಕ್ಕಾಗಿ ಪ್ರತಿಜಿಲ್ಹೆಯಲ್ಲಿ ಒಂದು ಸಿಲೆಕ್ಶನ್

ಕಮೀಟಿಯನ್ನು ಸ್ಥಾಪಿಸುವವರಿದ್ದಾರೆ. ಇನ್ನು ಮುಂದೆ ಔದ್ಯೋಗಿಕ ಶಿಕ್ಷಣಕ್ಕೆ ಉಮೇದುವಾರರನ್ನು ಆರಿಸುವ ಕೆಲಸವನ್ನು ಜಿಲ್ಲೆಯೊಳಗಿನ ಶಿಕ್ಷಣಾಧಿಕಾರಿಗಳು ಮಾಡುವರು. ಪ್ರತಿಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್‌ನು ಈ ಕಮಿಟಿಯ ಅಧ್ಯಕ್ಷನಾಗುವನು. ಮಾಧ್ಯಮಿಕ ಶಾಲೆಯ ಹೆಡ್‌ಮಾಸ್ತರರು ಕಮೀಟಿಯ ಸಭಾಸದರಿರುವರು. ಇದಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನಿಂದ ದೊರಕಿಸಿಕೊಳ್ಳಬೇಕು. ಅವರ ಕಡೆಗೆ ಅರ್ಜಿಯ ಫಾರ್ಮುಗಳಿರುವವು. ಅವರೇ ಉಮೇದುವಾರರನ್ನು ಆರಿಸುವರು. ಹೆಚ್ಚಿನ ಮಾಹಿತಿ ಏನಾದರೂ ಬೇಕಾಗಿದ್ದರೆ ಮುಂದೆ ಕೊಟ್ಟಿರುವ ಪತ್ತಿಗೆ ಪತ್ರ ಬರೆದು ತಿಳಿದುಕೊಳ್ಳಬಹುದು.

ಪತ್ತೆ—ದಿ ನ್ಯಾಶನಲ್ ಸರ್ವಿಸ ಲೇಬರ ಟ್ರೈಬ್ಯೂನಲ್, ಹಸನ ಚೇಂಬರ್ಸ್,
ಪಾರ್ಸಿ ಬಝಾರ ಸ್ಟ್ರೀಟ,
ಫೋರ್ಟ್, ಮುಂಬಯಿ.

(೮) ನಮ್ಮ ಅಭ್ಯಾಸಕ್ರಮಕ್ಕೆ ಔದ್ಯೋಗಿಕ ಶಿಕ್ಷಣವನ್ನು ಜೋಡಿಸಿರಿ. ಎಂದು ನಾವು ಬಹುಕಾಲದಿಂದ ಕೇಳಿಕೊಳ್ಳುತ್ತ ಬಂದಿದ್ದೇವೆ. ಸದ್ಯಕ್ಕೆ ಯುದ್ಧದ ನಿಮಿತ್ತದಿಂದಲೇ ಆಗಲೊಲ್ಲದೇಕೆ? ನಮ್ಮ ತರುಣರಿಗೆ ಇಂದು ಔದ್ಯೋಗಿಕ ಶಿಕ್ಷಣವನ್ನು ಪಡೆಯುವ ಸುಸಂಧಿಯು ಒದಗಿ ಬಂದಿರುವದು. ನಾವು ಈ ಸಂಧಿಯನ್ನು ಸರಿಯಾಗಿ ಉಪಯೋಗಿಸಿಕೊಂಡರೆ ನಮ್ಮ ರಾಷ್ಟ್ರದ ಬಲವು ಹೆಚ್ಚುವದು. ನಮ್ಮ ರಾಷ್ಟ್ರದ ಔದ್ಯೋಗೀಕರಣಕ್ಕೆ ಈ ಶಿಕ್ಷಣದ ಪ್ರಯೋಜನವಾಗದಿರದು. ಇಂದಿನ ಈ ಕೆಲಸಗಾರರು ಮುಂದಿನ ರಾಷ್ಟ್ರದೊಳಗಿನ ಉದ್ಯೋಗ ವ್ಯವಸಾಯಗಳ ಆಧಾರಸ್ತಂಭಗಳಾಗುವರು. ಆದ್ದರಿಂದ—

ನನ್ನ ತರುಣ ಮಿತ್ರರೆ,

ಈಗ ಒದಗಿ ಬಂದಿರುವ ಸುವರ್ಣ ಸಂಧಿಯನ್ನು ಉಪಯೋಗಿಸಿಕೊಳ್ಳಿರಿ. ನಿಮ್ಮ ಸ್ವಂತದ ಮತ್ತು ರಾಷ್ಟ್ರದ ಹಿತವನ್ನು ಸಾಧಿಸಿರಿ.

ಭಗವಂತನು ನಮ್ಮ ತರುಣರಿಗೆ ಇಂಥ ಸದ್ಬುದ್ಧಿಯನ್ನು ದಯಪಾಲಿಸಲಿ.

ಹೆಣ್ಣುಮಕ್ಕಳ ಪಿ. ಎಸ್. ಸಿ. ಪರೀಕ್ಷೆಯ ಅನುಭವಗಳು

೧೯೫೨

ಹಿಂದೆ ನೋಡಿ ಮುಂದೆ ಸಾಗುವದು ಪ್ರಗತಿಗೆ ಮುಖ್ಯಸಾಧನ. ನಮ್ಮ ಕರ್ನಾಟಕದೊಳಗಿನ ಶಿಕ್ಷಕಿಯರಿಗೆ ಹೀಗೆ ಸಾಗಲು ಅನುಕೂಲವಾಗಲೆಂದು ೫೪೨೨ನೆಯ ಇಸ್ವಿಯ ಪ್ರಾಯ್ಮರಿ ಸ್ಕೂಲ್ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಉಮೇದುವಾರರು ಬರೆದ ಉತ್ತರಗಳ ಬಗ್ಗೆ ಪರೀಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯ ಗಳನ್ನು ಇಲ್ಲಿ ಸಂಕ್ಷೇಪಿಸಿ ಕೊಡಲಾಗಿದೆ.

೧. **ಭಾಷಾವಿಷಯ**— ಹಿಂದಿನ ವರ್ಷಗಳ ಅನುಭವಕ್ಕೂ ಈ ವರ್ಷದ ಅನುಭವಕ್ಕೂ ತುಲನೆಮಾಡಿ ನೋಡಿದರೆ ಈ ವರ್ಷದ ವಿದ್ಯಾರ್ಥಿನಿಯರ ಉತ್ತರ ಗಳು ಹೆಚ್ಚು ಸಮಾಧಾನಕರವಾಗಿದ್ದುವೆಂದೂ ಅವರ ಅಭ್ಯಾಸದಲ್ಲಿ ತಕ್ಕಮಟ್ಟಿಗೆ ಪ್ರಗತಿಯಾಗಿದೆಯೆಂದೂ ಸಾಮಾನ್ಯವಾಗಿ ಹೇಳಬಹುದು. ಆದರೂ ಈ ಕೆಳಗಿನ ದೋಷಗಳನ್ನು ಮುಂದಿಡುವದು ಅವಶ್ಯವೆನಿಸುವದು.

ಸಂಕ್ಷೇಪ ಬರೆಹವೆಂದರೇನೆಂಬುದನ್ನು ಉಮೇದುವಾರರು ಸರಿಯಾಗಿ ತಿಳಿದುಕೊಂಡಂತೆ ಕಾಣಲಿಲ್ಲ. 'ಒಂದು ಮೂರನೆಯ ಅಂಶದಷ್ಟಾಗುವಂತೆ ಸಂಕ್ಷೇಪಿಸಿರಿ' ಎಂದರೆ ಕೆಲವರು ಅದನ್ನು ತಮ್ಮ ಮಾತುಗಳಲ್ಲಿ ಮಾರ್ಪಡಿಸಿ ಬರೆದಿದ್ದರು; ಮತ್ತೆ ಕೆಲವರು ನಕಲು ಮಾಡಿದ್ದರು. ಗದ್ಯಪದ್ಯ ಭಾಗಗಳ ಸ್ವಾರಸ್ಯ ಗ್ರಹಣದ ಪ್ರಶ್ನೆಯನ್ನು ಬಿಡಿಸಲು ಆವಶ್ಯಕವಿರುವ ಕುಶಲತನವು ಬಹುಜನ ಉಮೇದುವಾರರಲ್ಲಿ ಕಂಡುಬರಲಿಲ್ಲ. ಪರ್ಯಾಯಪದಗಳು ಅನೇಕಾರ್ಥ ಗಳುಳ್ಳ ಪದಗಳು ಇವುಗಳಿಗೂ ಪದಗಳ ಅರ್ಥ ವ್ಯುತ್ಪತ್ತಿಗಳಿಗೂ ಸಂಬಂಧಿಸಿದ ಪ್ರಶ್ನೆಗಳನ್ನು ಬಿಡಿಸಿದ್ದರೆ, ಉಮೇದುವಾರರು ಹೆಚ್ಚು ಗುಣಗಳನ್ನು ನಿಶ್ಚಿತವಾಗಿ ಹೊರಕಿಸಬಹುದಾಗಿತ್ತು. ವ್ಯಾಕರಣದಲ್ಲಿಯೂ ಹೀಗೆಯೇ. ಈ ವಿಷಯಕ್ಕೆ ಪಾಲೆಗಳಲ್ಲಿ ಸಾಕಷ್ಟು ಮಹತ್ವಕೊಟ್ಟಂತಿಲ್ಲ; ಇಷ್ಟೇ ಅಲ್ಲ, ಅನಾದರ ತೋರಿಸಿ ದಂತಿದೆ. ತೀರ ಸುಲಭ ಪ್ರಶ್ನೆಗಳನ್ನು ಕೂಡ ಬಹುಜನ ವಿದ್ಯಾರ್ಥಿನಿಯರು ಬಿಡಿಸಲೇ ಇಲ್ಲ. ಹಿಂದಿನಂತೆ ವ್ಯಾಕರಣದ ನಿಯಮಗಳನ್ನು ಪಾಠಮಾಡಿಸುವ ವನ್ನು ಬಿಟ್ಟು ಬಿಡಬೇಕು. ವ್ಯಾಕರಣವು ವಿದ್ಯಾರ್ಥಿನಿಯರ ಮನೋಭಾವ ಗಳನ್ನು ಸರಿಯಾಗಿ ವ್ಯಕ್ತಪಡಿಸುವ ಕಲೆಗೆ ಪೋಷಕವಾಗಬೇಕು. ಗದ್ಯಪದ್ಯ ಭಾಗಗಳನ್ನು ಕಲಿಸುವಾಗ ಬರುತ್ತಿರುವ ಪದಪ್ರಯೋಗಗಳಿಂದ ವ್ಯಾಕರಣದ

ನಿಯಮಗಳ ಉಪಯೋಗವನ್ನು ಕಲಿಸುವ ಕಡೆಗೆ ಶಿಕ್ಷಕಿಯರು ಹೆಚ್ಚು ಲಕ್ಷ ಪೂರೈಸಬೇಕು.

೨. **ನಿಬಂಧ ಬರೆಹ**— ಒಟ್ಟಿನಮೇಲೆ ಈ ವರ್ಷದ ಉಮೇದುವಾರರ ಉತ್ತರಗಳು ತಕ್ಕಮಟ್ಟಿಗೆ ಸಮಾಧಾನಕರವಾಗಿವೆ. ಬಹುಜನ ವಿದ್ಯಾರ್ಥಿನಿಯರಿಗೆ ಶುದ್ಧ ಬರೆಹ, ವಿರಾಮಚಿಹ್ನಗಳ ಉಪಯೋಗ, ವಾಕ್ಯರಚನಾಪದ್ಧತಿ ಇವುಗಳ ಜ್ಞಾನವಿದ್ದಂತೆ ಕಂಡುಬರಲಿಲ್ಲ. ವಿದ್ಯಾರ್ಥಿಗಳ ಭಾಷಾ ಜ್ಞಾನವು ತೀರ ಕಡಿಮೆ ತರಗತಿಯದಾಗಿತ್ತು. ವ್ಯಾಕರಣ ದೋಷಗಳು ಹೇರಳವಾಗಿದ್ದವು. ವಿಚಾರಗಳನ್ನು ಕ್ರಮಗೊಳಿಸುವ ಜ್ಞಾನವೂ ಕಡಿಮೆ. ಏಳನೆಯ ಪ್ರಶ್ನೆಯು ಸಂಭಾಷಣೆಯ ರೂಪದ್ದಿದ್ದು ಸಂಭಾಷಣೆಯನ್ನು ಬರೆಯುವ ರೀತಿಯು ವಿದ್ಯಾರ್ಥಿನಿಯರಿಗೆ ಎಷ್ಟೂ ಸರಿಯಾಗಿ ಗೊತ್ತಿರಲಿಲ್ಲ. ರಿಪೋರ್ಟು ಬರೆಯುವದೂ ಕೂಡ ಅವರಿಗೆ ಗೊತ್ತಿರಲಿಲ್ಲ. ವಿರಾಮ ಚಿಹ್ನಗಳ ಉಪಯೋಗ ಶುದ್ಧವಾದ ಅಕ್ಷರಯೋಜನೆ ವಾಕ್ಯರಚನಾಕ್ರಮ ಇವನ್ನು ಕಲಿಸಿಯೇ ಇಲ್ಲವೊ ಏನೋ ಎಂಬಂತಿತ್ತು.

೩. **ಗಣಿತ ಭೂಮಿತಿ ಜಮಾಖರ್ಚುಗಳು**— ಬಹುಜನ ವಿದ್ಯಾರ್ಥಿನಿಯರು ಈ ವಿಷಯಗಳಲ್ಲಿ ತಕ್ಕಷ್ಟು ಪ್ರಗತಿಯನ್ನು ತೋರಿಸಿರುವರು. ನೂರರಲ್ಲಿ ೭೭ ರಷ್ಟು ಉಮೇದುವಾರರು ಈ ವಿಷಯಗಳಲ್ಲಿ ಪಾಸಾಗಿರುವರು. ಕೆಲವರಂತೂ ನೂರಕ್ಕೆ ೬೦ ರಷ್ಟು ಅಥವಾ ಹೆಚ್ಚು ಗುಣಗಳನ್ನು ದೊರಕಿಸಿರುವರು. ಗಣಿತ ಜಮಾಖರ್ಚುಗಳಲ್ಲಿ ಉಮೇದುವಾರರು ಹೋದ ವರ್ಷಕ್ಕಿಂತಲೂ ಈ ವರ್ಷ ಹೆಚ್ಚು ಪ್ರಗತಿಯನ್ನು ತೋರಿಸಿರುವರು. ಆದರೆ ಭೂಮಿತಿಯ ತೀರ ಸುಲಭ ಪ್ರಶ್ನೆಗಳಿಗೂ ಕೂಡ ಸರಿಯಾದ ಉತ್ತರವನ್ನು ಬರೆಯಲು ಬಹುಜನ ವಿದ್ಯಾರ್ಥಿನಿಯರಿಗೆ ಬರಲಿಲ್ಲ. ಶಿಕ್ಷಕಿಯರು ಇತ್ತ ಕಡೆಗೆ ಹೆಚ್ಚು ಲಕ್ಷ ಪೂರೈಸಬೇಕು.

೪. **ಇತಿಹಾಸ ಭೂಗೋಲಗಳು**— ಒಟ್ಟಿನ ಮೇಲೆ ಈ ವರ್ಷದ ಉಮೇದುವಾರರ ಕೆಲಸವು ತಕ್ಕಮಟ್ಟಿಗೆ ಸಮಾಧಾನಕರವಾಗಿರುವದೆಂದು ಹೇಳಬಹುದು. ಭೂಗೋಲದಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ತುಸುಮಟ್ಟಿಗೆ ಪ್ರಗತಿಯಾದಂತೆ ಕಂಡುಬರುವದು. ಇತಿಹಾಸದಲ್ಲಿ ಬ್ರಹ್ಮದೇಶದ ಆಕ್ರಮಣಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಬಹು ಸಂಖ್ಯೆಯ ಉಮೇದುವಾರರು ಬಿಡಿಸಲಿಲ್ಲ. ಉಮೇದುವಾರರು ಈ ವಿಷಯಗಳಲ್ಲಿ ಹಾಗೂ ಹೀಗೂ ಪಾಸಾಗಿದ್ದಾರೆ. ಹೆಚ್ಚು ಗುಣಗಳನ್ನು ದೊರಕಿಸಲು ಅವರಿಗೆ ಸಾಧ್ಯವಾಗಲಿಲ್ಲ; ಯಾಕೆಂದರೆ ಅವರ ವಿಷಯಜ್ಞಾನವು ಅಷ್ಟಕ್ಕಷ್ಟೇ ಇದ್ದಿತು. ಅಂದಾಜಿನಿಂದ ಉತ್ತರ ಬರೆಯುವವರೇ ಬಹಳ.

ಉಮೇದುವಾರರಿಗೆ ಪ್ರಶ್ನ ಪತ್ರಿಕೆಯನ್ನು ಮೊದಲು ಸರಿಯಾಗಿ ಓದಿ ಕೊಂಡು ಪ್ರಶ್ನೆ ಯಾವದು ಅದಕ್ಕೆ ಉತ್ತರವೇನು ಎಂಬದನ್ನು ತಿಳಿದುಕೊಳ್ಳುವ ರೂಢಿಯಿದ್ದಂತೆ ಕಂಡುಬರಲಿಲ್ಲ. ಹಿಂದುಸ್ತಾನದ ಇತಿಹಾಸದೊಳಗಿನ ಅತಿ ಮಹತ್ವದ ಘಟನೆಗಳ ಕಾಲವೂ ಕೂಡ ಬಹುಜನ ವಿದ್ಯಾರ್ಥಿನಿಯರಿಗೆ ಸರಿಯಾಗಿ ತಿಳಿದಿರಲಿಲ್ಲ. ಹಾಗೆ ತಿಳಿದುಕೊಂಡ ಹಲಕೆಲವರೂ ಕೂಡ ಅವನ್ನು ಕಾಲಾನು ಕ್ರಮದಿಂದ ಹೊಂದಿಸುವಾಗ ತಪ್ಪಿ ಬರೆದಿದ್ದರು. ಆದ್ದರಿಂದ ಇತಿಹಾಸವನ್ನು ಕಲಿಸುವಾಗ ಶಿಕ್ಷಕಿಯರು ಈ ವಿಭಾಗವನ್ನು ತೀರ ದುರ್ಲಕ್ಷಿಸಿರುವರೆಂದು ಹೇಳಬೇಕಾಗುವದು.

ರಾಜ್ಯದ ಆಡಳಿತೆಗೆ ಸಂಬಂಧಿಸಿದ ಪ್ರಶ್ನೆಯ ಉತ್ತರವು ಬಹುಶಃ ಸಮರ್ಪಕವಾಗಿರಲಿಲ್ಲ. ಅವರ ಜ್ಞಾನವು ತುಂಬ ಅಸ್ಪಷ್ಟವಾಗಿತ್ತು. ಸಾರ್ವಜನಿಕ ಶಾಂತಿಯೆಂದರೇನು ಅದನ್ನು ಯಾರು ಹೇಗೆ ಕಾದುಕೊಳ್ಳುವರು ಎಂಬದು ಬಹು ಜನರಿಗೆ ಗೊತ್ತಿರಲಿಲ್ಲ. ಈ ಕೆಲಸವನ್ನು ಲೋಕಲ್‌ಬೋರ್ಡು ಮ್ಯುನಿಸಿ ಪಾಲಟಿಗಳು ಮಾಡುವವೆಂದು ಉತ್ತರ ಬರೆದಿದ್ದಾರೆ. ಕರ್ನಾಟಕದ ಏಕೀಕರಣ ವೆಂದರೇನೆಂಬುದೇ ಎಷ್ಟೋ ವಿದ್ಯಾರ್ಥಿನಿಯರಿಗೆ ಗೊತ್ತಿರಲಿಲ್ಲವೆಂದು ಹೇಳಿದರೆ ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ?

ಭೂಗೋಲದೊಳಗಿನ ಪಾರಿಭಾಷಿಕಗಳನ್ನು ಮನಬಂದಂತೆ ಉಪಯೋಗಿಸಿರುವದನ್ನು ನೋಡಿದರೆ ಅವರಿಗೆ ಆ ಶಬ್ದಗಳ ಅರ್ಥವೇ ಗೊತ್ತಿಲ್ಲವೆಂದು ಸಿದ್ಧವಾಗುವದು. ಪಟ್ಟಣ-ಪ್ರಾಂತ, ದೇಶ-ಖಂಡ, ಸಮುದ್ರ-ಮಹಾಸಾಗರ, ತಪ್ಪಲು-ಪರ್ವತ, ಇಂಥ ಸಾಮಾನ್ಯ ಶಬ್ದಗಳನ್ನು ಕೂಡ ಅಸಂಬದ್ಧವಾಗಿ ಉಪಯೋಗಿಸಿದ್ದಾರೆ.

ಎಷ್ಟೋ ಉಮೇದುವಾರರು ನಕಾಶೆಯಲ್ಲಿ ನದಿಗಳನ್ನೂ ಪಟ್ಟಣಗಳನ್ನೂ ತೋರಿಸುವಾಗ ತಕ್ಕ ಗುರ್ತುಗಳಿಂದ ತೋರಿಸದೆ ಬರಿಯ ಅಕ್ಷರಗಳಿಂದ ಬರೆದಿದ್ದಾರೆ. ಇದು ಸರಿಯಲ್ಲ. ಶಿಕ್ಷಕಿಯರು ಇದನ್ನು ಗಮನಿಸಬೇಕು.

೫. **ಗೃಹವಿಜ್ಞಾನ**— ವಿಜಾಪುರ ಕೇಂದ್ರದ ಬಹುಜನ ವಿದ್ಯಾರ್ಥಿನಿಯರು ಪ್ರಶ್ನಪತ್ರಿಕೆಯ ಪ್ರಾರಂಭದಲ್ಲಿ ಕೊಟ್ಟಿದ್ದ ಸೂಚನೆಯನ್ನು ಓದಿ ತಿಳಿದುಕೊಂಡಿರಲಿಲ್ಲ. ಬೆಳಗಾಂವಿಯ ಕೇಂದ್ರದ ಎಲ್ಲ ಉಮೇದುವಾರರು ಪ್ರಾರಂಭದ ಪುಟದ ಮೇಲೆ ತಮ್ಮ ಹೆಸರನ್ನು ಬರೆದಿದ್ದಾರೆ. ವಿಷಯಜ್ಞಾನದ ದೃಷ್ಟಿಯಿಂದ ಧಾರವಾಡ, ಕಾರವಾರ, ಗದಗ ಕೇಂದ್ರಗಳ ಉಮೇದುವಾರರು ಮಿಕ್ಕ ಕೇಂದ್ರಗಳ ಉಮೇದುವಾರರಿಗಿಂತಲೂ ಹೆಚ್ಚು ಪ್ರಗತಿಯನ್ನು ತೋರಿಸಿದ್ದಾರೆ. ಒಟ್ಟಿನಮೇಲೆ ಉಮೇದುವಾರರ ಪ್ರಗತಿಯು ತಕ್ಕಮಟ್ಟಿಗೆ ಸಮಾಧಾನ ಕರವಾಗಿದೆಯೆಂದು ಹೇಳಬಹುದು.

೬. **ಪ್ರಕೃತಿವಿಮರ್ಶೆ**— ಒಟ್ಟಿಗೆ ಉಮೇದುವಾರರ ಕೆಲಸವು ಸಮಾಧಾನಕರವಾಗಿರುವದು. ನೂರರಲ್ಲಿ ೮೦ ಕ್ಕಿಂತ ಹೆಚ್ಚು ಉಮೇದುವಾರರು ಪಾಸಾಗಿರುವರು. ಆದರೆ ಅವರ ವಿಷಯಜ್ಞಾನವು ಸರ್ವಸಾಮಾನ್ಯವಾಗಿದ್ದಂತೆ ಕಂಡುಬರುವದು. ಅವರಿಗೆ ಕ್ರಮಬದ್ಧವಾದ ನಿರೀಕ್ಷಣೆ, ಕಾಲಕಾಕ್ಷೆ ಟಿಪ್ಪಣಿಗಳನ್ನು ಬರೆದಿಡುವದು, ಪ್ರಯೋಗ ಪರೀಕ್ಷೆ ಮುಂತಾದ ಸಶಾಸ್ತ್ರೀಯವಾದ ಅಭ್ಯಾಸಕ್ರಮದ ಪರಿಚಯವಿದ್ದಂತೆ ಕಂಡುಬರಲಿಲ್ಲ.

೭. **ಡ್ರಾಯಿಂಗು**— ಉಮೇದುವಾರರ ವಿಷಯಜ್ಞಾನದ ಪ್ರಗತಿಯು ತಕ್ಕಮಟ್ಟಿಗೆ ಸಮಾಧಾನಕರವಾಗಿದೆಯೆಂದು ಹೇಳಬಹುದು.

೮. **ಸಂಗೀತ**—ಈ ವಿಷಯದ ಬಗ್ಗೆ ಬೇರೆ ಬೇರೆ ಕೇಂದ್ರಗಳ ಪರೀಕ್ಷಕರ ಅನುಭವವು ಬೇರೆಬೇರೆಯಾಗಿರುವದು.

ಬೆಳಗಾಂವಿ ಕೇಂದ್ರ— ಉಮೇದುವಾರರಿಗೆ ಸಂಗೀತದಲ್ಲಿ ಕ್ರಮಬದ್ಧವಾದ ಶಿಕ್ಷಣವು ದೊರೆದಂತಿಲ್ಲ. ಮತ್ತು ಅದು ಅಭ್ಯಾಸಪತ್ರಿಕೆಗೆ ಅನುಗುಣವಾದದ್ದೂ ಇರಲಿಲ್ಲ.

ವಿಜಾಪುರ ಕೇಂದ್ರ— ಉಮೇದುವಾರರಿಗೆ ತಾಳ ರಾಗಗಳ ಜ್ಞಾನವು ತಕ್ಕಮಟ್ಟಿಗೆ ಇದ್ದಂತೆ ಕಂಡುಬಂದಿತು. ಆದರೆ ಅವರಿಗೆ ಈ ವಿಷಯದಲ್ಲಿ ಸಶಾಸ್ತ್ರೀಯವಾದ ತಿಳಿವಳಿಕೆ ಇದ್ದಂತೆ ಕಂಡುಬರಲಿಲ್ಲ. ಒಟ್ಟಿನಮೇಲೆ ಈ ವಿಷಯವನ್ನು ಐಚ್ಛಿಕವಾಗಿ ಆರಿಸಿಕೊಳ್ಳುವ ಉಮೇದುವಾರರ ಸಂಖ್ಯೆಯು ವರ್ಷ ವರ್ಷಕ್ಕೆ ಹೆಚ್ಚುತ್ತ ನಡೆದಿರುವದು ಸಮಾಧಾನಕರವಾದ ಮಾತು.

ಗದಗ ಕೇಂದ್ರ— ರಾಗಜ್ಞಾನವು ತಕ್ಕಷ್ಟು ಇರಲಿಲ್ಲ. ತಾಳಗಳ ತಿಳಿವಳಿಕೆಯೂ ಕಡಿಮೆಯೇ. ಆದರೂ ಹೆಣ್ಣುಮಕ್ಕಳು ತಮ್ಮ ಸ್ವಾಭಾವಿಕವಾದ ಮಧುರಸ್ವರದ ಮೂಲಕ ಪರೀಕ್ಷಕರಿಗೆ ತಕ್ಕಮಟ್ಟಿಗೆ ಸಮಾಧಾನಕರವಾಗುವಂತೆ ಹಾಡಿದರೆಂದು ಹೇಳಲು ಅಡ್ಡಿಯಿಲ್ಲ.

ಧಾರವಾಡ ಕೇಂದ್ರ— ಹೆಚ್ಚು ಸಂಖ್ಯೆಯ ವಿದ್ಯಾರ್ಥಿನಿಯರು ಚೆನ್ನಾಗಿ ಹಾಡಿದರು. ಆದರೆ ಅವರಿಗೆ ತಾಳ ರಾಗಗಳ ಸರಿಯಾದ ಜ್ಞಾನದ ಕೊರತೆಯಿದ್ದಂತೆ ಕಂಡುಬಂದಿತು.

ಹುಬ್ಬಳ್ಳಿ ಕೇಂದ್ರ— ಅಭ್ಯಾಸ ಪತ್ರಿಕೆಯಲ್ಲಿ ಸಮಾವಿಷ್ಟವಾದ ಭಾಗವು ಹಿಂದುಸ್ತಾನೀ ರಾಗಕ್ಕೆ ಸಂಬಂಧಿಸಿದ್ದಿರುವದು. ಅದರಲ್ಲಿ ಕರ್ನಾಟಕೀ ಪದ್ಧತಿಗೆ ಹೆಚ್ಚು ಪ್ರಾಶಸ್ತ್ಯವಿರುವದು ಅವಶ್ಯಕ. ಒಂದು ಒಂದೂವರೆ ತಾಸುಗಳಲ್ಲಿ ೭೦ ಉಮೇದುವಾರರನ್ನು ಪರೀಕ್ಷಿಸುವದು ಕಠಿಣವೆನಿಸಿತು.

ಕಾರವಾರ ಕೇಂದ್ರ— ಉಮೇದುವಾರರಿಗೆ ರಾಗ ತಾಳ ಸ್ವರ್ತ ಇವುಗಳ ಜ್ಞಾನವು ಚೆನ್ನಾಗಿದ್ದಂತೆ ಕಂಡುಬಂದಿತು.

೯. **ಹೊಲಿಗೆಯ ಕೆಲಸ— ಬೆಳಗಾಂವಿ ಕೇಂದ್ರ**— ಅರಿವೆಯನ್ನು ಏನು ತಯಾರಿಸಬೇಕಾದ ತೊಡುಗೆಗೆ ಸರಿಯಾಗಿ ವ್ಯವಸ್ಥಿತವಾಗಿ ಕತ್ತರಿಸುವ ಜ್ಞಾನವು ಉಮೇದುವಾರರಿಗೆ ಇದ್ದಂತೆ ಕಂಡುಬರಲಿಲ್ಲ. ಒಂದು ವರ್ಷದ ಮಗುವಿಗಾಗಿ ಹೊಲಿದ ಜುಬಲಾವು ಹಸುಗೂಸಿಗೂ ಕೂಡ ಸಾಲುವದೊ ಇಲ್ಲವೊ ಎನ್ನುವಷ್ಟು ಚಿಕ್ಕದಾಗಿತ್ತು.

ಧಾರವಾಡ ಕೇಂದ್ರ— ಫ್ಯಾನ್ಸಿ ಸ್ಟಿಚಿಂಗ್ ಬಟನ್ ಹೋಲ್ ಮತ್ತು ಹಿಂದೀ ಪದ್ಧತಿಯ ಕಸೂತಿ ಇವುಗಳ ಕಡೆಗೆ ವಿಶೇಷ ಲಕ್ಷಕೊಡಬೇಕು.

ಗದಗ ಕೇಂದ್ರ— ಎಷ್ಟೋ ಉಮೇದುವಾರರು ತಯಾರಿಸಿದ ಜುಬಲಾವು ಅಳತೆಗೆ ಸರಿಯಾಗಿದ್ದಿಲ್ಲ. ಮರಾಠಿ ಉಮೇದವಾರರಿಗೆ ಕೊಟ್ಟ ಪ್ರಶ್ನ ಪತ್ರಿಕೆಯು ಕನ್ನಡ ಉಮೇದುವಾರರಿಗೆ ಕೊಟ್ಟ ಪ್ರಶ್ನ ಪತ್ರಿಕೆಗಿಂತಲೂ ಸುಲಭವೂ ಸರಳವೂ ಆಗಿತ್ತು.

ಕಾರವಾರ ಕೇಂದ್ರ— ಉಮೇದವಾರರು ಒಂದು ಜುಬ್ಲಾವನ್ನು ತಯಾರಿಸಬೇಕಾಗಿತ್ತು. ಇದು ತೀರ ಸುಲಭ ಕೆಲಸವಾಗಿದ್ದರೂ ಒಬ್ಬರೂ ಸರಿಯಾಗಿ ಮಾಡಲಿಲ್ಲ. ಒಟ್ಟು ೧೨ಳ ಉಮೇದುವಾರರಲ್ಲಿ ಐದಾರು ಉಮೇದುವಾರರು ಮಾತ್ರ ಬಟನ್‌ಹೋಲುಗಳನ್ನು ಸರಿಯಾಗಿ ತಯಾರಿಸಿದ್ದರು. ಮರಾಠಿ ಉಮೇದವಾರರು ಕನ್ನಡ ಇಲ್ಲವೆ ಉರ್ದು ಉಮೇದುವಾರರಿಗಿಂತಲೂ ಹೆಚ್ಚು ಚೆನ್ನಾಗಿ ಕೆಲಸಮಾಡಿದ್ದರು. ಪ್ರಶ್ನಪತ್ರಿಕೆಯಂತೆ ಕನ್ನಡ ಉಮೇದುವಾರರು ಅಷ್ಟೇ ವೇಳೆಯಲ್ಲಿ ಮರಾಠಿ ಇಲ್ಲವೆ ಉರ್ದು ಉಮೇದವಾರರಿಗಿಂತಲೂ ಹೆಚ್ಚು ಕೆಲಸಮಾಡಬೇಕಾಗಿತ್ತು. ಆದ್ದರಿಂದ ಅವರು ತಮ್ಮ ಕೆಲಸವನ್ನು ಅರ್ಧ ಮುರ್ಧ ಮಾಡಿ ಕೊಟ್ಟುಬಿಟ್ಟಿದ್ದರು.

ಹುಬ್ಬಳ್ಳಿ ಕೇಂದ್ರ— ಉಮೇದುವಾರರು ತಯಾರಿಸಿದ ಜುಬ್ಲಾವು ಆಟದ ಗೊಂಬೆಗೂ ಸಾಲುವದೊ ಇಲ್ಲವೋ ಎನ್ನುವಷ್ಟು ಚಿಕ್ಕದಾಗಿತ್ತು. ಅವರಿಗೆ ಅಳತೆಗೆ ಸರಿಯಾಗಿ ಗುರ್ತಿಸಿಕೊಂಡು ಕತ್ತರಿಸುವ ಮತ್ತು ಅಳತೆಯ ಪಟ್ಟಿಯನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ರೂಢಿಯಿದ್ದಂತೆ ಕಂಡು ಬರಲಿಲ್ಲ. ಪ್ರಶ್ನಪತ್ರಿಕೆಯನ್ನು ಸರಿಯಾಗಿ ಓದಿ ತಿಳಿದುಕೊಂಡು ಪ್ರಶ್ನೆಯೇನು ಅದರಲ್ಲಿ ಯಾವ ಕೆಲಸವನ್ನು ಹೇಗೆ ಮಾಡಬೇಕೆಂದು ಹೇಳಿದೆ ಎಂಬುದನ್ನು ತಿಳಿದು ಕೊಂಡೇ ಕೆಲಸಮಾಡುವದು ಅವಶ್ಯ. ಮರಾಠಿ ಉಮೇದವಾರರ ಕೆಲಸವು ಮಿಕ್ಕುಳಿದ ಉಮೇದುವಾರರಿಗಿಂತಲೂ ಚೆನ್ನಾಗಿತ್ತು.

ಉರ್ದು ಮತ್ತು ಮರಾಠಿ— ಉರ್ದು ಮತ್ತು ಮರಾಠಿ ಉಮೇದು ವಾರರ ಕೆಲಸವಾದರೂ ಬಹುಶಃ ಕನ್ನಡ ಉಮೇದುವಾರರ ಕೆಲಸದಷ್ಟೇ ಗುಣ ದೋಷಗಳಿಂದ ಕೂಡಿದ್ದಿತು. ಆದ್ದರಿಂದ ಅವನ್ನೆಲ್ಲ ಇಲ್ಲಿ ಪುನಃ ವಿವರಿಸಿಲ್ಲ. ಒಂದೆರಡು ವಿಶಿಷ್ಟ ಮಾತುಗಳನ್ನಷ್ಟೇ ಹೇಳಿರುವೆವು.

ಉರ್ದು—ಜಮಾಖರ್ಚು— ಕಾರವಾರ ಕೇಂದ್ರದ ಉಮೇದುವಾರರ ಹೊರತು ಮಿಕ್ಕ ಯಾರೂ ಜಮಾಖರ್ಚಿನ ಪ್ರಶ್ನೆಯನ್ನು ಸರಿಯಾಗಿಬಿಡಿಸಲೇ ಇಲ್ಲ.

ಉರ್ದು-ಭಾಷಾವಿಷಯಗಳು— ಉಮೇದುವಾರರ ಭಾಷಾ ಜ್ಞಾನವು ತೀರ ಅಸಮಾಧಾನಕರವಾಗಿತ್ತು. ಅರ್ಥ ವಿವರಣೆಗಾಗಿಯೂ ಸ್ವಾರಸ್ಯಗ್ರಹಣಕ್ಕಾಗಿಯೂ ಕೊಟ್ಟಿದ್ದ ಗದ್ಯ ಪದ್ಯ ವಿಭಾಗಗಳ ಅರ್ಥವೇ ಬಹುಜನ ಉಮೇದುವಾರರಿಗೆ ತಿಳಿದಿರಲಿಲ್ಲ. ಉಮೇದುವಾರರು ವ್ಯಾವಹಾರಿಕ ಉರ್ದು ಭಾಷೆಯನ್ನು ಬಿಟ್ಟು ಬಿಟ್ಟು ಶುದ್ಧವಾದ ಉರ್ದುವನ್ನೇ ಬರೆಹದಲ್ಲಿ ಉಪಯೋಗಿಸುವಂತೆ ಶಿಕ್ಷಕಿಯರು ಎಚ್ಚರುಗೊಳ್ಳಬೇಕು. ಕೈಬರೆಹವು ತೀರ ಅಸಮಾಧಾನಕರವಾಗಿತ್ತು. ಸಂಭಾಷಣೆಯ ವಿಷಯದಲ್ಲಿ ಇಬ್ಬರು ಹೆಣ್ಣುಮಕ್ಕಳು ಜಗಳಾಡುವ ಅಪಶಬ್ದಗಳನ್ನು ಬರೆದಿದ್ದರು.

ಇತಿಹಾಸದ ಪ್ರಶ್ನೆಗಳಿಗೆ ಬರೆದ ಉತ್ತರಗಳು ತೀರ ಸಂಕ್ಷೇಪವಾಗಿದ್ದವು.

ಗೃಹವಿಜ್ಞಾನದಲ್ಲಿ ರಕ್ತಾಶಯ ಮಿದುಳು ಕಣ್ಣು ಮೊದಲಾದವುಗಳ ಆಕೃತಿಗಳನ್ನೂ ಅವು ಶರೀರದಲ್ಲಿರುವ ಸ್ಥಾನಗಳನ್ನೂ ಸರಿಯಾಗಿ ಚಿತ್ರಿಸಲಿಕ್ಕೆ ಕಲಿಸಬೇಕು.

ಮರಾಠಿ—ಭಾಷಾವಿಷಯಗಳು—ಉಮೇದುವಾರರಿಗೆ ಪತ್ರಬರೆಹವನ್ನು ಸರಿಯಾಗಿ ಕಲಿಸಿಲ್ಲ. ಹಲಕೆಲವು ವ್ಯಾಕರಣ ದೋಷಗಳನ್ನು ಬಿಟ್ಟರೆ ಒಟ್ಟಿನ ಮೇಲೆ ಭಾಷಾವಿಷಯದಲ್ಲಿ ಉಮೇದವಾರರು ಸಮಾಧಾನಕರವಾದ ಪ್ರಗತಿಯನ್ನು ತೋರಿಸಿರುವರೆಂದರೆ ತಪ್ಪಾಗದು.

ಇತಿಹಾಸ— ಉಮೇದುವಾರರಿಗೆ ಪಾಠ ಪುಸ್ತಕಗಳ ಹೊರಗಿನ ವಿಷಯದ ಜ್ಞಾನವು ತೀರ ಕಡಿಮೆಯಾಗಿತ್ತು.

ಗೃಹವಿಜ್ಞಾನದಲ್ಲಿ ವಿದ್ಯಾರ್ಥಿನಿಯರ ಪ್ರಗತಿಯು ಸಮಾಧಾನಕರವಾಗಿತ್ತು ಅದು ಹಿಂದಿನ ವರ್ಷಗಳಿಗಿಂತಲೂ ಈ ವರ್ಷ ಹೆಚ್ಚು ಚೆನ್ನಾಗಿದ್ದಂತೆ ಕಂಡು ಬರುವದು.

ದುಃಖವಾರ್ತೆ

ಕೈ. ವಾ. ವಿನಾಯಕರಾವ ಜೋಶಿಯವರು.

ಮೊನ್ನೆ ೧೦ ನೆಯ ತಾರೀಖಿನ ದಿನ ಮಧ್ಯಾನ ೧ ಗಂಟೆಯ ಸುಮಾರಕ್ಕೆ ನಮ್ಮ ಶಿಕ್ಷಕವೃಂದಕ್ಕೆ ಚಿರಪರಿಚಿತರೂ ಪೂಜ್ಯರೂ ಆದ ವಿನಾಯಕರಾವ ಜೋಶಿಯವರು ಕೈಲಾಸವಾಸಿಗಳಾದರೆಂಬ ವಾರ್ತೆಯನ್ನು ಬರೆಯಲು ಬಲು ವಿಷಾದವಾಗುವದು. ಮರಣಕಾಲಕ್ಕೆ ಅವರ ವಯಸ್ಸು ಎಂಬತ್ತಕ್ಕೆ ಮಿಕ್ಕಿದ್ದಿತು. ೧೯೧೮ ನೆಯ ಇಸ್ವಿಯಲ್ಲಿ ಸರಕಾರದ ಸೇವಾನಿವೃತ್ತರಾದ ಇವರು ಸಾರ್ವಜನಿಕ ಸೇವೆಯಲ್ಲಿ ನಿಮಗ್ನರಾಗಿದ್ದರು. ವೈ. ವಾ. ರೊದ್ದರಾಯರ ಅಂತಃಕರಣದ ಆಳಿಕೆಯ ತರುವಾಯ (೧೯೦೮) ಧಾರವಾಡದ ಟ್ರೇನಿಂಗ್ ಕಾಲೇಜದಲ್ಲಿ ವಿನಾಯಕರಾಯರ ಅಂತಃಕರಣದಿಂದೊಡಗೂಡಿದ ಶಿಸ್ತಿನ ಆಡಳಿತೆಯು ಪ್ರಾರಂಭವಾಗಿತ್ತೆಂಬುದು ಆ ಏಳೆಂಟು ವರ್ಷಗಳಲ್ಲಿ ಟ್ರೇನಿಂಗ್ ಕಾಲೇಜದಲ್ಲಿದ್ದ ಶಿಕ್ಷಕ ಬಂಧುಗಳಿಗೆ ತಿಳಿಯದ ಮಾತಲ್ಲ. ಇವರ ಆಳಿಕೆಯಲ್ಲಿ ಟ್ರೇನಿಂಗ್ ಕಾಲೇಜವು ತುಂಬ ಅಭಿವೃದ್ಧಿಹೊಂದಿತು. ಕಾಲೇಜದ ಮುಖ್ಯ ಕಟ್ಟಡವೂ ಹೊಸ ವಸತಿಗೃಹವೂ ಇವರ ಕಾಲದಲ್ಲಿಯೇ ನಿರ್ಮಿತವಾದುವು. ಟ್ರೇನಿಂಗ್ ಕಾಲೇಜದಿಂದ ಅವರು ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಪದವಿಗೆ ಹೋಗಿ ಕಾರ್ಯನಿವೃತ್ತರಾದರು. ಆ ಮೇಲೆ ಧಾರವಾಡದ ಮ್ಯುನಸಿಪಾಲಟಿಯ ಸ್ಕೂಲ್‌ಬೋರ್ಡಿನ ಚೆಅರಮನ್ನರಾಗಿ ಆಡಳಿತೆ ನಡೆಯಿಸಿದರು. ಟ್ರೇನಿಂಗ್ ಕಾಲೇಜಕ್ಕೆ ಬರುವ ಮೊದಲು ಬೆಳಗಾಂವ ಜಿಲ್ಲೆಯಲ್ಲಿ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿದ್ದರು. ಅದಕ್ಕೆ ಮೊದಲು ಹೈಸ್ಕೂಲುಗಳಲ್ಲಿ ಶಿಕ್ಷಕರಾಗಿಯೂ ಕೆಲಸ ಮಾಡಿದ್ದರು. ಆಂತೂ ಅವರು ವಿದ್ಯಾಖಾತೆಯಲ್ಲಿ ಬೇರೆ ಬೇರೆ ಅಧಿಕಾರದ ಸ್ಥಳಗಳಲ್ಲಿ ನೌಕರಿ ಮಾಡಿ ಪಡೆದ ಅನುಭವದೊಡನೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಯ ಶಿಕ್ಷಣಾಧಿಕಾರವನ್ನೆ ನಡೆಯಿಸಿ ಅಂದಿನಿಂದ ಇಂದಿನವರೆಗೂ ಜನಹಿತದ ಕಾರ್ಯಗಳಲ್ಲಿ ತಮ್ಮ ಆಯುಷ್ಯದ ಮುಖ್ಯ ಭಾಗವನ್ನೆಲ್ಲ ಕಳೆದು ಕರ್ನಾಟಕಕ್ಕೂ ಕನ್ನಡಿಗರಿಗೂ ಅನಂತವಾದ ಸೇವೆಯನ್ನು ಸಲ್ಲಿಸಿರುವರು.

ಇವರು ಕೈ. ವಾ. ಕರಂದೀಕರ ಸಾಹೇಬರ ಪಡಿನೆಳಲಾಗಿದ್ದರೆಂದು ಹೇಳುವದನ್ನು ನಾವು ಕೇಳಿದ್ದೇವೆ. ಆ ತ್ಯಾಗವೀರರು ತಾವು ಗಳಿಸಿದ ಲಕ್ಷಾವಧಿ ರೂಪಾಯಿಗಳನ್ನು ವಿದ್ಯಾಭಿವೃದ್ಧಿಯನ್ನೇ ಗುರಿಯಾಗಿಟ್ಟುಕೊಂಡು ವಿದ್ಯಾರ್ಥಿ ವೇತನರೂಪದಿಂದ ಕೊಡುವ ವ್ಯವಸ್ಥೆ ಮಾಡಿ 'ಪೈ ಪೈ ಕೂಡಿಸಿಟ್ಟು ಲಕ್ಷಗಟ್ಟಲೆ ದಾನ ಮಾಡು'ವಂಥ ವಿಚಿತ್ರ ವ್ಯಕ್ತಿತ್ವವನು ತೋರ್ಪಡಿಸುವಂತೆ ಮಾಡಲು

ಈ ವಿನಾಯಕರಾಯರೇ ಮುಖ್ಯ ಕಾರಣರೆಂದು ಹೇಳುವದೂ ಉಂಟು. ಆ ಕರಂದೀಕರ ಟ್ರಸ್ಟಿಯು ಮುಖಾಂತರವಾಗಿಯೂ ನಮ್ಮ ಲೋಕಪ್ರಿಯ ವಿನಾಯಕರಾಯರು ಕರ್ನಾಟಕಕ್ಕೆ ಬಹುಪರಿಯಿಂದ ನೆರವಾಗಿದ್ದಾರೆ.

ಸರಕಾರದ ನೌಕರಿಯಲ್ಲಿದ್ದಾಗಲೇ ಒಳಗೊಳಗೆ ಕುದಿಯುತ್ತಿದ್ದು ಪ್ರಸಂಗ ವಿಶೇಷಗಳಲ್ಲಿ ಮಾತ್ರ ಹೊರಹೊಮ್ಮುತ್ತಿದ್ದ ಅವರ ಸ್ವಾಭಿಮಾನ ಸ್ವಜನಾಭಿಮಾನ ಸ್ವದೇಶಾಭಿಮಾನಗಳು ಸೇವಾನಿವೃತ್ತರಾದ ಮೇಲೆ ಪರಿಬಿಟ್ಟು ಹೊರಸೂಸಿದುವು. ಅವರ ಸ್ವಭಾವವು ಯಾವಾಗಲೂ ನಿರ್ದಾಕ್ಷಿಣ್ಯದ್ದು. ಹೆರವರ ಪ್ರೀತಿಗಾಗಿ ಇಲ್ಲವೆ ಸ್ವಾರ್ಥಕ್ಕಾಗಿ ಅವರು ಎಂದೂ ಅಡ್ಡದಾರಿಯನ್ನು ತುಳಿದವರಲ್ಲ. ಅವರ ಅಚ್ಚ ಬಿಳಿಯ ಉಡುತೊಡುಗೆಗಳು ಅಂತಃಕರಣದ ನೈರ್ಮಲ್ಯದ್ಯೋತಕಗಳಾಗಿದ್ದುವು.

ವಿದ್ಯಾಖಾತೆಯಲ್ಲಿ ಎಲ್ಲ ತರಗತಿಗಳಲ್ಲಿ ಕೆಲಸಮಾಡಿ ಕೀರ್ತಿಶಾಲಿಗಳಾದ ಈ ಮಹನೀಯರು ತಮ್ಮ ನೌಕರಿಯ ಅವಧಿಯಲ್ಲಿ ಸರ್ವರಿಗೂ ಪ್ರಿಯರಾಗಿದ್ದರು. ತಾನಾಯಿತು, ತನ್ನ ಕೆಲಸವಾಯಿತು. ಒಪ್ಪಿಕೊಂಡ ಕೆಲಸವನ್ನು ತನ್ನ ಬುದ್ಧಿಮತ್ತೆಗೆ ಒಪ್ಪುವಂತೆ ಮನಃಪೂರ್ವಕವಾಗಿ ಮಾಡಿ ತೋರಿಸುವದು ಇವರ ಹುಟ್ಟುಗುಣ. ಇದರಿಂದ ಮೇಲಣ ಅಧಿಕಾರಿಗಳಿಗೂ ಪ್ರಿಯರಾಗಿದ್ದರು; ಸೌಜನ್ಯ-ಸಹಕಾರ, ಸಹಾಯ-ಪರೋಪಕಾರ, ಇತ್ಯಾದಿಗಳಿಂದ ತಮ್ಮ ವ್ಯವಸಾಯ ಬಂಧುಗಳ ಮತ್ತು ಕೆಳಗಿನವರ ಅಭಿಮಾನಕ್ಕೂ ಭಕ್ತಿವಿಶ್ವಾಸಗಳಿಗೂ ಪಾತ್ರರಾಗಿದ್ದರು. ಕಲಿಯುವ ಕಲಿಸುವ ಕಲಿತದ್ದನ್ನು ಪರೀಕ್ಷಿಸುವ ಈ ಮೂರೂ ಬಗೆಯ ಕಾರ್ಯ ಕ್ಷೇತ್ರಗಳಲ್ಲಿ ಅತ್ಯಂತ ನಿಷ್ಠೆಯಿಂದ ಕೆಲಸ ಮಾಡಿದ ಈ ಕಾರ್ಯನಿಷ್ಠ ವ್ಯಕ್ತಿಯು ಶಿಕ್ಷಣತಜ್ಞರಲ್ಲಿ ಅಗ್ರಗಣ್ಯರೆನಿಸಿದ್ದರು.

ಹುಟ್ಟು ಮರಾಟಿಗರಾದರೂ ಕನ್ನಡವೇ ಅವರ ಕಾರ್ಯಕ್ಷೇತ್ರದ ಭಾಷೆಯಾಗಿದ್ದಿತು. ಕರ್ನಾಟಕದಲ್ಲಿರುವ ಮರಾಟಿಗರು ಕನ್ನಡವನ್ನು ಯಾವ ಕನ್ನಡಕದಲ್ಲಿ ಕಾಣಬೇಕೆಂಬ ಮಾತಿಗೆ ವಿನಾಯಕರಾಯರು ಉತ್ತಮ ಉದಾಹರಣೆಯಾಗಿದ್ದರು. ಅರ್ಥಶಾಸ್ತ್ರದಂಥ ಮಹತ್ವದ ವಿಷಯದ ಮೇಲೆ ಒಳ್ಳೆಯ ಗ್ರಂಥವನ್ನು ಬರೆದಿದ್ದಾರೆ. ಅವರು ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿದ್ದಾಗ, ಕನ್ನಡ ಶಾಲಾಪತ್ರಕದ ಸಂಪಾದಕರಾಗಿ ಬರೆದ ಬರೆಯಿಸಿದ ಲೇಖನಗಳನ್ನು ಕನ್ನಡದ ಅಭ್ಯಾಸಿಗಳು ಓದಿ ಓದಿ ಮನನಮಾಡುವಂತಿವೆ. ಮುಂಬಯಿಯ ವಿಶ್ವವಿದ್ಯಾನಿಲಯದಲ್ಲಿ ಹತ್ತಿಪ್ಪತ್ತು ವರುಷಗಳವರೆಗೆ ಕನ್ನಡದ ಪ್ರತಿನಿಧಿಗಳಾಗಿ ಕೆಲಸಮಾಡಿದರು. ಆ ಕಾಲದಲ್ಲಿಯೂ ಅವರು ಮಾಡಿದ ಉಪಕಾರವನ್ನು ಕನ್ನಡದ ಅಭಿಮಾನಿಗಳು ಮರೆಯುವಂತಿಲ್ಲ ಕರ್ನಾಟಕ

ವಿದ್ಯಾವರ್ಧಕ ಸಂಘ, ಕನ್ನಡಸಾಹಿತ್ಯಪರಿಷತ್ತು ಮುಂತಾದ ಕನ್ನಡದ ಏಳ್ಗೆಯ ಸಂಸ್ಥೆ ಸಂಘಗಳಿಗೆ ಇವರು ಆಜೀವ ಸದಸ್ಯರಾಗಿದ್ದರು. ಸಾರ್ವಜನಿಕ ಹಿತದ ಕಾರ್ಯಕ್ಕೆ ನೆರವಾಗಲು ಇವರು ಸದಾ ಸಿದ್ಧರಾಗಿರುತ್ತಿದ್ದರು.

ಜೋಶಿ ವಿನಾಯಕರಾಯರಿಗೆ ಸರಕಾರದವರು ರಾವ್‌ಬಹಾದ್ದೂರ್ ಪದವಿಯನ್ನು ಕೊಟ್ಟಿದ್ದರು. ಸರಕಾರದ ಬಗಲುಗೂಸುಗಳಿಗೇ ಇಂಥ ಪದವಿಗಳು ದೊರೆಯುವವೆಂಬ ತಪ್ಪು ವಿಚಾರವನ್ನು ಒಪ್ಪಿಸಿ ತೋರಿಸುವದಕ್ಕೆ ನಮ್ಮ ವಿನಾಯಕರಾಯರದು ಜೂಕ್ಕಟವಾದ ಉದಾಹರಣೆಯು. ತಮ್ಮ ಮನಸ್ಸಿಗೆ ಸಿಚ್ಚುಗೆಯಾಗದ ಕೆಲವೊಂದು ಘಟನೆಯು ನಡೆದ ಮರುದಿನವೇ ಇವರು ಆ ತಮ್ಮ ಪದವಿಯನ್ನು ಬಿಟ್ಟುಬಿಡಲು ಎಳ್ಳಷ್ಟೂ ಹಿಂದುಮುಂದು ನೋಡಲಿಲ್ಲ.

'ಶೀಲವನ್ನು ಕಾಪಾಡಿಕೊ, ಶೀಲವು ನಿನ್ನನ್ನು ಕಾಪಾಡುವದು' ಎಂಬದು ಸುಶೀಲಸಂಪನ್ನ ವಿನಾಯಕರಾಯರ ಜೀವನದ ಗುಟ್ಟು. ಅವರು ಪೆನ್‌ಶನ್ ಪಡೆದುಕೊಂಡ ತರುವಾಯವೂ ೨೫ ವರ್ಷ ಬಾಳಿದರೆಂಬುದೊಂದೇ ಮಾತು ಸದಾಚಾರದ ಸಿದ್ಧತೆಗೆ ಸಾಕಾಗಬಹುದು.

ಸ್ವಾರ್ಥಕ್ಕಾಗಿ ಇವರು ಎಂದೂ ತಮ್ಮ ಶೀಲವನ್ನು ಕಳೆಗುಂದಿಸಲು ಬಯಸಲಿಲ್ಲ. ಸರಕಾರದ ಹಲಕೆಲವು ಕಾರ್ಯಕಲಾಪಗಳು ತಮ್ಮ ಮನಸ್ಸಿಗೆ ಸಿಚ್ಚುಗೆಯಾಗದಿರುವದನ್ನು ಇವರು ಖಂಡತುಂಡಾಗಿ ವಿವರಿಸಿದ್ದರ ಪರಿಣಾಮವಂದ ಅಪರವಯಸ್ಸಿನಲ್ಲಿ ಇವರಿಗೆ ದೊರೆಯುತ್ತಿದ್ದ ಪೆನ್‌ಶನ್ ನಿಲ್ಲಿಸಲ್ಪಟ್ಟಿತು. ೀವು 'ತಪ್ಪಾಯಿತು—ಕ್ಷಮಿಸಿರಿ' ಎಂಬ ಅಭಿಪ್ರಾಯದ ಪತ್ರವೊಂದನ್ನು ಸರಕಾರಕ್ಕೆ ಬರೆದರೆ ನಿಮ್ಮ ಪೆನ್‌ಶನ್ ತಿರುಗಿ ದೊರೆಯುವದೆಂಬ ಆಶ್ವಾಸನವು ಸೊರೆತರೂ ಕೂಡ ಈ ಮಾತುಗಳನ್ನು ಉಚ್ಚರಿಸಲಿಕ್ಕಾಗಲಿ ಬರೆದುಕೊಡಲಿಕ್ಕಾಗಲಿ ಅವರು ಕಡೆತನಕ ಸಮ್ಮತಿಸಲಿಲ್ಲ. 'ನಾನು ತಪ್ಪು ಮಾಡಿಯೇ ಇಲ್ಲ ಹಿಂದಬಳಿಕ ಆ ಮಾತು ಬಿಟ್ಟುಬಿಡಿರಿ; ನನಗೆ ಬಡತನದ ಬಾಳುವೆಯೇ ಇರಲಿ; ಾಲ್ಕು ಬೆಳ್ಳಿಯ ಚೂರುಗಳಿಗಾಗಿ ಸುಳ್ಳಾಡಿ ನಾನು ನನ್ನ ಶೀಲಕ್ಕೆ ಕಲಂಕ ತಂದುಕೊಳ್ಳಲಾರೆ.' ಎಂದು ಖಂಡಿತವಾಗಿ ನುಡಿದುಬಿಟ್ಟರಂತೆ.

ತಮ್ಮ ವಿದ್ಯಾರ್ಥಿಗಳನ್ನು ಮಕ್ಕಳಂತೆ ನೋಡುವದು ಇವರ ಮನೋ-ನರ್ಮವೇ ಆಗಿದ್ದಿತು. ೧೯೦೮ ರಲ್ಲಿ ಟ್ರೇನಿಂಗ್ ಕಾಲೇಜದ ಸ್ಪಿನ್ಸಿಪಾಲರಾಗಿ ಎಂದ ತರುವಾಯ ಅವರಿಗೆ ಪುತ್ರೋತ್ಸವವಾಯಿತು. ಆಗ ಕಾಲೇಜದ ವಿದ್ಯಾರ್ಥಿಗಳೂ ಶಿಕ್ಷಕರೂ ತಮಗಾದ ಆನಂದವನ್ನು ವ್ಯಕ್ತಪಡಿಸುವ ಸಭೆ ಕೂಡಿಸಲು ಅವರ ಅಪ್ಪಣೆ ಬೇಡಲು ಹೋಗಿದ್ದರು. ಆಗ ರಾಯರು ಆಡಿದ

ಮಾತುಗಳು ಇನ್ನೂ ನಮ್ಮ ಕಿವಿಯಲ್ಲಿ ನುರುದನಿಗೊಡುವಂತಿವೆ. "ನನ ಇನ್ನೂರಕ್ಕಿಂತ ಹೆಚ್ಚು ಪ್ರಬುದ್ಧರಾದ ಮಕ್ಕಳಿರುವಾಗ ಗಂಡುಮಕ್ಕಳಿರಲೀ ವೆಂಬ ಹಂಬಲವೇ ಇರಲಿಲ್ಲ. ಈಗ ಹುಟ್ಟಿದ ಕೂಸು—ಮಾನವಕ್ರಿಮಿ— ಬೆಳೆದು ಮುಂದೆ ನನಗೆ ಆನಂದಕೊಡುವದೊ ದುಃಖಕೊಡುವದೋ ಯಾರ ಬಲ್ಲರು? ನನ್ನ ಮಕ್ಕಳಂತಿದ್ದ ನೀವೆಲ್ಲರೂ ಸುಶೀಲರಾಗಿ ನಡೆದು ಕನ್ನಡನಾಡಿ ಉದ್ಧಾರಕ್ಕೆ ನೆರವಾದರೆ ನನಗೆ ಈ ಪುತ್ರೋತ್ಸವದ ಸಾವಿರಮುಡಿ ಆನಂ ವಾಗುವದು." ಆ ಆನಂದದ ಸಮಯದಲ್ಲಿ ವಿನಾಯಕರಾಯರ ಅಂತಃಕರಣ ದಿಂದ ಹೊರಸೂಸಿದ ಅಮೃತವಾಣಿಯಿದು. ಅತ್ಯಾನಂದ ಅತಿ ದುಃಖ ಮುಂತಾ ಮನಸ್ಸಿನ ಉದ್ವೇಗದ ಕಾಲದಲ್ಲಿ ಮನುಷ್ಯನ ಬಾಯಿಯಿಂದ ಹೊರಡು ಮಾತುಗಳು ಅಂತಃಕರಣದ ಉದ್ಗಾರಗಳೆಂಬದು ಸಹಜವೇ ಸರಿ. ಆ ಚಿಕ್ಕ ಮಗುವು ಇಂದು ರಾಯರ ಪುಣ್ಯದ ಪುತ್ಥಳಿಯಾಗಿ ಬೆಳೆದು ಧಾರವಾಡದಲ್ಲಿ ಒಳ್ಳೆಯ ವಕೀಲರಾಗಿದ್ದಾರೆ. ಸುಶೀಲರೂ ಸದಾಚಾರಿಗಳೂ ಆದ ಶಾಂತದಾಂ ಈ ಜ್ಞಾನವೃದ್ಧ ವಯೋವೃದ್ಧ ಸಂಯಮಿಗಳ ವಿಯೋಗದಿಂದ ಕರ್ನಾಟಕಕ್ಕೆ ತುಂಬಿ ಬರಲಾರದಷ್ಟು ಹಾನಿಯಾಗಿರುವದು.

ಟ್ರೇನಿಂಗ್ ಕಾಲೇಜದ ಜನರಲ್ ಹಾಲಿನಲ್ಲಿ ಮೊನ್ನೆ ಕಾಲೇಜ ಮತ್ತು ಪ್ರ್ಯಾಕ್ಟಿಸಿಂಗ್ ಸ್ಕೂಲುಗಳ ಶಿಕ್ಷಕರೂ ವಿದ್ಯಾರ್ಥಿಗಳೂ ಸಭೆ ನೆರೆಯಿ ಜೋಶಿ ವಿನಾಯಕರಾಯರ ನಿಧನದಿಂದ ತಮಗಾದ ದುಃಖ ಅನುತಾಪಗಳನ್ನು ಈ ಕೆಳಗೆ ಹೇಳುವ ಮಾತುಗಳಿಂದ ವ್ಯಕ್ತಪಡಿಸಿ, ಆ ನಿರ್ಣಯವನ್ನು ಅವರ ಮಗ ಶ್ರೀ. ಶಂಕರರಾಯರಿಗೆ ಕಳುಹಿಸಿರುವರು.

"ಜ್ಞಾನವೃದ್ಧರೂ, ವಯೋವೃದ್ಧರೂ, ಶೀಲಸಂಪನ್ನರೂ, ಸದಾಚಾರ ವ್ರತಿಗಳೂ, ಸ್ವಾಭಿಮಾನ, ಸ್ವಜನಾಭಿಮಾನ ಸ್ವದೇಶಾಭಿಮಾನಗಳ ಮೂರ್ತ ಸ್ವರೂಪರೂ ಕನ್ನಡ ನಾಡುನುಡಿಗಳ ಉತ್ಕರ್ಷಕ್ಕಾಗಿ ಸಂತತ ಪ್ರಯತ್ನಮಾಡಿ ತಮ್ಮ ಜೀವನ ಸರ್ವಸ್ವವನ್ನೆಲ್ಲ ಅರ್ಪಿಸಿದ ಮಹಾನುಭಾವರೂ ಆದ ಕೈ. ವಾ. ಜೋಶಿ ವಿನಾಯಕರಾಯರ ವಿಯೋಗದಿಂದ ಕನ್ನಡನಾಡಿಗೂ ಆ ಮಹನೀಯರ ಕುಟುಂಬಕ್ಕೂ ಆದ ಮಹಾದುಃಖದಲ್ಲಿ ನಾವೆಲ್ಲರೂ ಸಮಭಾಗಿಗಳಾಗಿರುವೆವು. ಕರುಣಾಳುವಾದ ಭಗವಂತನು ಆ ಶಾಂತದಾಂತ ಸಾಧುಚರಿತರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ನಾವೆಲ್ಲರೂ ಅಂತಃಕರಣಪೂರ್ವಕವಾಗಿ ಪ್ರಾರ್ಥಿಸುವೆವು."

ಓಂ ಶಾಂತಿಃ ಶಾಂತಿಃ ಶಾಂತಿಃ!

N. V. KURDI

ಮಹಾಯುದ್ಧದೊಳಗಿನ ಮಹತ್ವದ ಸ್ಥಳಗಳು

ಹಿಂದೆ ಅನೇಕ ಲೇಖನಗಳಲ್ಲಿ ಇಂಥ ಸ್ಥಳಗಳಿಗೆ ಸಂಬಂಧಿಸುವ ಭೌಗೋಲಿಕ ಮತ್ತು ರಾಜಕೀಯ ವಿಚಾರಗಳನ್ನು ವಿವರಿಸಿರುವದನ್ನು ನಮ್ಮ ಶಿಕ್ಷಕರು ಓದಿರುವರಷ್ಟೆ. ಪ್ರಕೃತದ ಲೇಖನದಲ್ಲಿಯೂ ಕೂಡ ಸದ್ಯಕ್ಕೆ ನಡೆದಿರುವ ಘನಘೋರ ಸಂಗ್ರಾಮದ ಆಯಕಟ್ಟಿನ ಸ್ಥಾನಗಳಾದ ಕಾಕೇಶಸ್ ಮತ್ತು ಸಾಲೋನಿಸ್ ಗಳಿಗೆ ಸಂಬಂಧಿಸಿದ ಹಲಕೆಲವು ಸಂಗತಿಗಳನ್ನು ಸಂಗ್ರಹಿಸಿ ಹೇಳಲು ಯತ್ನಿಸಲಾಗಿದೆ. ಶಿಕ್ಷಕರು ಇವನ್ನು ಓದುವಾಗ ನಕಾಶೆಯನ್ನು ಮುಂದಿಟ್ಟುಕೊಂಡರೆ ವಿಷಯವು ಸುಗಮವಾಗಿ ಮನೋರಂಜಕವೆನಿಸಬಹುದು.

೧. **ಕಾಕೇಶಸ್.** ಸಾಮಾನ್ಯವಾಗಿ ಭೂಗೋಲವನ್ನು ಓದಿದವರಿಗೆ ಇದೊಂದು ಪರ್ವತದ ಹೆಸರೆಂಬದಿಷ್ಟೇ ಗೊತ್ತು. ನಿಜವಾಗಿ ಇದು ರಶಿಯದೊಳಗಿನ ಹನ್ನೊಂದು ಬೇರೆ ಬೇರೆ ಲೋಕಸತ್ತಾತ್ಮಕ ಘಟಕಗಳಲ್ಲಿ ಒಂದಾಗಿದೆ. ಇದಕ್ಕೆ 'ಟ್ರಾನ್ಸ್ ಕಾಕೇಶಿಯನ್ ಫೆಡರೇಶನ್' ಎಂದು ಹೆಸರಿರುವದು. ರಶಿಯವು ಯುರೋಪಖಂಡದ ಬಹುಭಾಗವನ್ನು ವ್ಯಾಪಿಸಿ ಏಶಿಯಾ ಖಂಡದಲ್ಲಿಯೂ ಹಬ್ಬಿರುವ ಬಹು ವಿಸ್ತಾರವಾದ ಒಂದು ಸಾಮ್ರಾಜ್ಯ. ಇದರ ವಿಸ್ತಾರವು ಹೆಚ್ಚು ಕಡಿಮೆ ಭರತಖಂಡದ ಐದು ಮಡಿಯಷ್ಟು ಎಂದರೆ ೮೫,೪೧,೯೨೧ ಚೌರಸ ಮೈಲಿರುವದು. ಆದರೆ ಜನಸಂಖ್ಯೆಯು ೧೬,೧೦,೦೬,೨೦೦ ಮಾತ್ರ. (೧೯೩೧). ಇಷ್ಟು ವಿಸ್ತಾರವಾದ ಭೂಭಾಗವು ಸಂಪೂರ್ಣ ಪ್ರಜೆಗಳಿಂದಲೇ ಆಳಲ್ಪಡುವ 'ಯುನಿಯನ್ ಆಫ್ ಸೋವ್ಹಿಯೆಟ್ ಸೋಶಿಯಾಲಿಷ್ಟ ರಿಪಬ್ಲಿಕ್' ಎಂಬ ಸತ್ತೆಗೆ ಒಳಗಾಗಿದ್ದು ಸದ್ಯಕ್ಕೆ ಸ್ಟಾಲಿನ್ನನು ಅದರ ಅಧ್ಯಕ್ಷನಾಗಿರುವನು. ಇಂಥ ಸ್ವತಂತ್ರವೂ ಸ್ವ ಸಂಪೂರ್ಣವೂ ಆದ ಮಹಾರಾಷ್ಟ್ರದ ಸಂಪೂರ್ಣ ಪ್ರಜಾಪ್ರಾತಿನಿಧಿಕ ಸ್ವರೂಪದ ರಾಜ್ಯತಂತ್ರದ ಹೊಸ ಯೋಜನೆಯನ್ನು ಪ್ರಚಾರದಲ್ಲಿ ತಂದ ಶ್ರೇಯಸ್ಸು ಹೆಚ್ಚಾಗಿ ಸ್ಟಾಲಿನ್ನನ ಪೂರ್ವಾಧಿಕಾರಿ ಲೆನಿನ್ನನಿಗೆ ಸೇರಿದುದು. ಈ ಮಹಾರಾಜ್ಯದಲ್ಲಿ 'ಬಡವರು ಶ್ರೀಮಂತರೆಂಬ ಭೇದಭಾವವಿಲ್ಲ; ರಾಜ್ಯದ ಸಂಪತ್ತೆಲ್ಲವೂ ಸರಕಾರದ ಸೊತ್ತು; ಪ್ರಜೆಗಳ ಹಿತಕ್ಕಾಗಿಯೇ ಅದರ ವಿನಿಯೋಗವಾಗಬೇಕು.' ಎಂಬದು ಸೋಶಿಯಾಲಿಸ್ಮಮ್ ತತ್ತ್ವದ ತಿರುಳು. ೧೯೧೭ ರಲ್ಲಿ ಆರಂಭವಾದ ಮೊದಲನೆಯ ಜಾಗತಿಕ ಯುದ್ಧದ ಪರಿಣಾಮವಾಗಿ ರಶಿಯವು ಇಂತಹ ಉದಾತ್ತ ತತ್ತ್ವವನ್ನನುಸರಿಸಿ ತನ್ನ ರಾಜಕಾರಣವನ್ನು ಮಾರ್ಪಡಿಸಿಕೊಂಡಿತು. ಅಲ್ಲಿ ಸನ್ ೧೯೨೨ ರಿಂದ ಈ ಬಗೆಯ ರಾಜ್ಯವ್ಯವಸ್ಥೆಯು ಸಂಪೂರ್ಣ ಪ್ರಚಾರದಲ್ಲಿ ಬಂದಿರುವದು.

ಕಾಕೇಶಸ್ ಪ್ರಾಂತವನ್ನೊಳಗೊಂಡ ಅಖಂಡ ರಶಿಯಾ ದೇಶವು ೧೯೧೭ ರ ವರೆಗೂ ಝಾರನ ಆಳಿಕೆಗೆ ಒಳಗಾಗಿತ್ತು. ಆ ವರ್ಷ ಝಾರನ ಆಳಿಕೆಯು ಕೊನೆಗಂಡು ಪ್ರಜಾಸತ್ತಾತ್ಮಕ ರಾಜಸತ್ತೆಯು ನೆಲೆಗೊಂಡಿತು. ಹಿಂದೆ ಹೇಳಿದಂತೆ ಲೆನಿನ್ನನೇ ಈ ಚಳುವಳಿಯ ಸೂತ್ರಧಾರನು. ಬಹುಕಾಲದ ಅಂತಃಕಲಹ ಕ್ರಾಂತಿಗಳ ಪರಿಣಾಮವಾಗಿ ಹಿಂದಿನ ಮಹಾಯುದ್ಧದ ಪೆಟ್ಟಿನ ಅನುಭವದಿಂದ ರಶಿಯಾದಲ್ಲಿ ಈ ಹೊಸ ಯುಗವು ಪ್ರಾರಂಭವಾಯಿತು. ರಶಿಯನ್ ಸೈನ್ಯಕ್ಕೆ ಕೆಂಪು ಸೈನ್ಯ (Red army) ಎನ್ನುವರು.

ಯುರೋಪದೊಳಗಿನ ರಶಿಯದ ದಕ್ಷಿಣ ದಂಡೆಯ ರಕ್ಷಣೆಯ ಭಾರವನ್ನು ಹೊತ್ತಿರುವ ಕಾಕೇಶಸ್ ಪರ್ವತಾವಳಿಯ ಎಡಬಲಗಳಲ್ಲಿ ಕಪ್ಪುಸಮುದ್ರ ಕಾಸ್ಪಿಯನ್ ಸಮುದ್ರಗಳಿರುವವು. ಈ ಪರ್ವತಾವಳಿಯು ೯೦೦ ಮೈಲು ಉದ್ದವಾಗಿ ಪೂರ್ವ ಪಶ್ಚಿಮ ಹಬ್ಬಿರುವದು. ಇದರ ದಕ್ಷಿಣದ ಇಳುಕಲಿನಗುಂಟ ಮೇಲೆ ಹೇಳಿದ ಟ್ರಾನ್ಸ್ ಕಾಕೇಶಿಯನ್ ಫೆಡರೇಶನ್ನವು ಪಸರಿಸಿದೆ. ಮೊದಲು ಬಿಟಿಷ್ ಕೂಬಾನ್ ಪ್ರಾಂತಗಳನ್ನುಳಿದ ಸ್ಟಾವರೊ ಪೋಲಿಶ ಸರಕಾರಕ್ಕೆ ಸೇರಿದ ರಶಿಯ ಭಾಗಕ್ಕಷ್ಟೆ ಈ ಹೆಸರಿದ್ದಿತು. ೧೯೧೯ ರಲ್ಲಿ ಟಾರ್ಟರರು, ಆರ್ಮಿನಿಯನ್ನರು ಜಾರ್ಜಿಯನ್ನರು, ಇನ್ನಿತರ ಒಳನಿಭಾಗದವರು ಇವರ ನಡುವೆ ತುಮುಲಯುದ್ಧ ನಡೆದು ಕೊನೆಗೆ ಆರ್ಮಿನಿಯನ್ನರೂ ಅಝುರ್ ಬ್ರಿಜನ್ನರೂ ಜೋರ್ಜಿಯನ್ನರ ಸೊವ್ವಿಯೆಟ್ ರಿಪಬ್ಲಿಕ್ಕಿಗೆ ಸೇರಲು ಒಪ್ಪಿಕೊಂಡದ್ದರಿಂದ ೧೯೨೨ ರಲ್ಲಿ 'ಟ್ರಾನ್ಸ್ ಕಾಕೇಶಿಯನ್ ಸೊಸಿಯಾಲಿಸ್ಟ ಫೆಡರೇಟಿಡ್ ಸೊವ್ವಿಯಟ್ ರಿಪಬ್ಲಿಕ್' ಎಂಬ ಸಂಸ್ಥಾನವುಂಟಾಗಿ ಬಾತುಮ್ ಪ್ರದೇಶವೂ ಇದರಲ್ಲಿ ಸಾಮಾವೇಶವಾಯಿತು.

ಸೊವ್ವಿಯೆಟ್ ಎಂದರೆ ರಶಿಯನ್ ಭಾಷೆಯಲ್ಲಿ ' ಸಭೆ ' ಎಂದು ಅರ್ಥವಾಗುವದು. ಕಾರ್ಖಾನೆಗಳು ಗಿರಣಿಗಳು ಮುಂತಾದ ಸಾಮೂಹಿಕ ಕೆಲಸಗಾರ ಸಂಘಗಳಿಂದ ಇದರ ಉತ್ಪತ್ತಿಯಾಗುವದು. ಇಂಥ ಸಮಿತಿಗಳಿಂದ ಮೊದಲಾಗಿ ಕೊಂಡು ರಶಿಯದ ರಾಜ್ಯದಾಡಳಿತೆಯ ಮುಖ್ಯ ಕೇಂದ್ರಸ್ಥಾನವಾದ ಅಖಿಲ ರಶಿಯನ್ ಕಾಂಗ್ರೆಸದವರೆಗೂ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಿಬೇರೆ ಬೇರೆ ಆಡಳಿತೆಯ ಕೇಂದ್ರಗಳನ್ನು ರಚಿಸುವ ಪದ್ಧತಿಯು ಸೊವ್ವಿಯಟ್ ಸರಕಾರದಲ್ಲಿರುವದು. ೧೮ ವರ್ಷಕ್ಕೆ ಮಿಕ್ಕಿದ ವಯಸ್ಸಿನವರೆಲ್ಲರಿಗೂ ಮತಾಧಿಕಾರವಿರುವದು. ರಶಿಯದಲ್ಲಿ ೫೫ ದಿನಗಳೆಂದರೆ ೧ ವಾರ, ಆರು ವಾರಗಳೆಂದರೆ ೧ ತಿಂಗಳ, ೧೨ ತಿಂಗಳುಗಳಿಗೆ ೧ ವರ್ಷ, ಮಿಕ್ಕುಳಿದ ೫ ದಿನಗಳನ್ನು ರಾಜ್ಯಕ್ರಾಂತಿಯ ಸಮಾರಂಭದ ದಿನಗಳೆಂದು ಎಣಿಸುವರು.

ಕಾಕೇಶಸ್ ಪರ್ವತಾವಳಿಯು ಕಪ್ಪುಸಮುದ್ರದ ದಕ್ಷಿಣಕ್ಕಿರುವ ಕ್ರಿಮಿಯ ದ್ವೀಪಕಲ್ಪದ ಪೂರ್ವದ ಕೊನೆಗಿರುವ ಕರ್ಚ ಸಾಮುದ್ರಧುನಿಯಿಂದ ಕಾಸ್ಪಿಯನ್ ಸಮುದ್ರದವರೆಗೆ ಹಬ್ಬಿರುವದು. ಈ ಪರ್ವತದಲ್ಲಿ ಪಶ್ಚಿಮಭಾಗ ಮಧ್ಯಭಾಗ ಪೂರ್ವಭಾಗ ಎಂದು ಮೂರು ಭಾಗಗಳನ್ನು ಕಲ್ಪಿಸುವದುಂಟು.

ಕರ್ಚದಿಂದ ಎಲ್ಬುರ್ಜದವರೆಗಿನ ಸುಮಾರು ೪೫೦ ಮೈಲು ಭಾಗವನ್ನು ಪಶ್ಚಿಮ ವಿಭಾಗವೆಂದು ಹೇಳುವರು. ೧೨,೦೦೦ ಫೂಟುಗಳವರೆಗೂ ಎತ್ತರವಾಗಿರುವ ಹಲವು ಶಿಖರಗಳು ಈ ಭಾಗದಲ್ಲಿವೆ. ಈ ಪ್ರದೇಶದಲ್ಲಿ ಹಾಯುವ ಘಟ್ಟದ ಮಾರ್ಗಗಳು ಕೂಡ ೫ ಸಾವಿರ ಫೂಟಿಗಿಂತಲೂ ಹೆಚ್ಚು ಎತ್ತರದಲ್ಲಿರುವವು. ಪರ್ವತ ಪ್ರದೇಶವೆಲ್ಲ ಕಾರಡವಿಯಿಂದ ಮುಚ್ಚಿಹೋಗಿದೆ. ಇದು ನಾನಾ ಬಗೆಯ ವೃಕ್ಷಗಳಿಂದ ತುಂಬಿರುವದು.

ಎಲ್ಬುರ್ಜದಿಂದ ಪೂರ್ವದಿಕ್ಕಿಗಿರುವ ೩೦೦ ಮೈಲು ಪ್ರದೇಶವು ಎರಡನೆಯ ವಿಭಾಗದಲ್ಲಿ ಬರುವದು. ಎಲ್ಬುರ್ಜ ಶಿಖರವು ೧೮ ಸಾವಿರ ಫೂಟು ಎತ್ತರವಾಗಿರುವದು. ಈ ಪರ್ವತದೊಳಗಿನ ಎಲ್ಲಕ್ಕೂ ಹೆಚ್ಚು ಎತ್ತರವಾದ ಪ್ರದೇಶವು ಈ ಭಾಗದಲ್ಲಿ ಸಮಾವೇಶವಾಗುವದು. ೧೬–೧೭ ಸಾವಿರ ಫೂಟು ಎತ್ತರವಾದ ಹಲವು ಶಿಖರಗಳು ಈ ಪ್ರದೇಶದಲ್ಲಿರುವವು. ಇಲ್ಲಿಯ ಆಳವಾದ ಕಂದರಗಳಲ್ಲಿ ಹಲವು ಹಿಮನದಿಗಳು ಹರಿದಿರುವವು. ಏಶಿಯಾ ನೈನರ ಆರ್ಮಿನಿಯಾಗಳವರೆಗೂ ಹೋಗಿರುವ ಸೈನ್ಯದ ಮಾರ್ಗಗಳು ಈ ಭಾಗದಲ್ಲಿ ಹಾಯ್ದಿರುವವು.

ಪೂರ್ವದ ಕಡೆಯ, ಸರಾಸರಿ ೯ ಸಾವಿರ ಫೂಟು ಎತ್ತರವಾಗಿರುವ, ಸುಮಾರು ೨೫೦ ಮೈಲು ಉದ್ದವಾಗಿರುವ, ಪರ್ವತ ಪ್ರದೇಶವು ಮೂರನೆಯ ಭಾಗವೆಂದು ಎಣಿಸಲ್ಪಡುವದು. ಇಲ್ಲಿ ಹಾಯ್ದಿರುವ ಘಟ್ಟದ ಮಾರ್ಗಗಳು ನಾಲ್ಕು ಸಾವಿರಫೂಟು ಎತ್ತರದಲ್ಲಿವೆ. ಈ ಭಾಗವು ಕಾಸ್ಪಿಯನ್ ಸಮುದ್ರದ ಕಡೆಗೆ ಇಳುಕಲಾಗಿದೆ.

ಕಾಕೇಶಸ್ ಪ್ರಾಂತವು ಕೆಲವು ವಿಶಿಷ್ಟ ಕಾರಣಗಳಿಗಾಗಿ ರಶಿಯದ ಸಾಮ್ರಾಜ್ಯಕ್ಕೆ ಅತಿ ಮಹತ್ವವುಳ್ಳದಾಗಿದೆ. ಅಲ್ಲಿ ದೊರೆಯುವ ಕಲ್ಲೆಣ್ಣೆಯು ಈ ಕಾರಣಗಳಲ್ಲೆಲ್ಲ ಹೆಚ್ಚಿನದು. ಕಾಕೇಶಸ್ ಪರ್ವತದ ಕಾಸ್ಪಿಯನ್ ಸಮುದ್ರದ ಕಡೆಗಿರುವ ೭೦ ಸಾವಿರ ಚೌರಸ ಮೈಲು ಪ್ರದೇಶದಲ್ಲಿ ಕಬ್ಬಿಣ ಕಲ್ಲಿದ್ದಲಿಗಳು ವಿಪುಲವಾಗಿ ದೊರೆಯುವವು. ಕಲ್ಲೆಣ್ಣೆಯಂತೂ ಇಲ್ಲಿ ಬಹು ದೊಡ್ಡ ಪ್ರಮಾಣದಿಂದ ಉಪಲಬ್ಧವಾಗಿದೆ. ಇಲ್ಲಿಯ ಕಣಿಗಳನ್ನು ರಶಿಯನ್ ರಿಪಬ್ಲಿಕದವರು ಸುಧಾರಿಸಿದ ಪದ್ಧತಿಯಿಂದ ನಡೆಯಿಸಿರುವರು. ಇಲ್ಲಿ ಇನ್ನೊಂದು ಮಾತನ್ನು ಹೇಳಬಹುದು. ರಶಿಯದ ಮುಖ್ಯ ಜೀವನೋದ್ಯೋಗವು ಒಕ್ಕಲುತನ. ಇದನ್ನು ಕೂಡ

ಸರಕಾರದಿಂದ ಸಾಗಿಸುವದು. ಸಾಗಾದ ಭೂಮಿಯನ್ನು ದೊಡ್ಡದೊಡ್ಡ ಕ್ಷೇತ್ರಗಳಾಗಿ ವಿಭಾಗಿಸಿ ಸರಕಾರದ ಕೆಲಸಗಾರರು ಯಂತ್ರಸಾಮಗ್ರಿಗಳು ಇವುಗಳ ಸಹಾಯದಿಂದ ಅವನ್ನು ಬಿತ್ತಿ ಬೆಳೆಯುವರು. ಇದರಂತೆ ಗಿರಣಿ ಕಾರಖಾನೆಗಳನ್ನೂ ಖನಿಜಗಳ ಕಣಿಗಳನ್ನೂ ಸರಕಾರವೇ ನಡೆಯಿಸುವದು. ಪರದೇಶದ ವ್ಯಾಪಾರವೆಲ್ಲ ಸರಕಾರದ ಆಧೀನದಲ್ಲಿದೆ. ತಮ್ಮ ದೇಶದ ಜನರ ಜೀವನಕ್ಕೂ ಉದ್ಯೋಗ ವ್ಯವಸಾಯಗಳಿಗೂ ಸಾಕಾಗುವಷ್ಟು ಸಾಧನಸಾಮಗ್ರಿಗಳನ್ನು ಉಳಿಸಿಕೊಂಡ ತರುವಾಯವೇ ಸರಕಾರದವರು ಪರದೇಶಕ್ಕೆ ತಮ್ಮ ಸರಕನ್ನು ಕಳುಹಿಸುವರು. ಕಾಕೇಶಸ್ ಪ್ರದೇಶದಲ್ಲಿ ದೊರೆಯುವ ಎಣ್ಣೆಯನ್ನು ರಶಿಯದ ಸಾಮ್ರಾಜ್ಯದೊಳಗಿನ ಮುಖ್ಯ ಮುಖ್ಯ ಕೇಂದ್ರಗಳಿಗೆ ಮುಟ್ಟಿಸುವದಕ್ಕೆ ದೊಡ್ಡ ದೊಡ್ಡ ನಳಗಳನ್ನು ಹಾಕಿರುವರು. ಈ ಎಣ್ಣೆಯ ಕಣಿಗಳ ಕೇಂದ್ರಗಳಲ್ಲಿ ಬಾಕು ಗ್ರೋಝ್ನಿ ಮತ್ತು ಮಾಯಕೋಪ ಎಂಬ ಮೂರು ಮುಖ್ಯವಾಗಿವೆ.

ಜಗತ್ತಿನಲ್ಲಿ ಹುಟ್ಟುವ ಒಟ್ಟು ಕಲ್ಲೆಣ್ಣೆಯಲ್ಲಿ ಬಹು ದೊಡ್ಡ ಭಾಗವು ಅಮೇರಿಕೆಯಲ್ಲಿ ಹುಟ್ಟುವದು. ಈ ದೃಷ್ಟಿಯಿಂದ ನೋಡಿದರೆ ಅದರ ತರುವಾಯವೇ ಕಾಕೇಶಸ್ ಪ್ರಾಂತದ ಸ್ಥಾನವು ಬರುವದು. ಈ ಪ್ರದೇಶದಲ್ಲಿ ಮೂರು ಕೋಟಿ ಟನ್ನಿನಷ್ಟು ಕಲ್ಲೆಣ್ಣೆಯು ಹೊರಡುವದು. ಅಖಂಡ ರಶಿಯಕ್ಕೆ ಈ ಭಾಗದಿಂದಲೇ ಕಲ್ಲೆಣ್ಣೆಯ ಪೂರೈಕೆಯಾಗುವದು. ಇತ್ತೀಚಿಗೆ ಉರಾಲ ಪರ್ವತದ ಪ್ರದೇಶದಲ್ಲಿಯೂ ಕಲ್ಲೆಣ್ಣೆಯ ಕಣಿಗಳು ಪ್ರಾರಂಭವಾಗಿವೆ. ಈ ಎಣ್ಣೆಯ ಸಲುವಾಗಿಯೇ ಜರ್ಮನಿಯು ಕಾಕೇಶಸದ ಕಡೆಗೆ ಧಾವಿಸಿ ಬಂದಿದೆ. ರಶಿಯವೂ ಕೂಡ ಜೀವದ ಹಂಗುದೊರೆದು ಕಾದಾಡಿ ಅದನ್ನು ರಕ್ಷಿಸಿಕೊಳ್ಳಲು ಹವಣಿಸುತ್ತಿದೆ.

ಜರ್ಮನಿಯಲ್ಲಿಯೂ ಅದರ ಆಧೀನ ದೇಶಗಳಲ್ಲಿಯೂ ಅದಕ್ಕೆ ಬೇಕಾಗುವಷ್ಟು ಕಲ್ಲೆಣ್ಣೆಯು ಉಪಲಬ್ಧವಾಗಿಲ್ಲ. ಜರ್ಮನಿಯು ಆರಂಭಿಸಿರುವ ರಾಕ್ಷಸೀಯ ಮಹತ್ವಾಕಾಂಕ್ಷೆಯ ರಣಕುಂಡಕ್ಕೆ ಪ್ರತಿತಿಂಗಳಿಗೆ ೨೫ ಲಕ್ಷ ಟನ್ ಎಣ್ಣೆಯು ಬೇಕಾಗುವದು. ಅದರ ಆಧೀನ ದೇಶಗಳಾದ ರೋಮಾನಿಯಾ, ಪೋಲಂಡ ಮೊದಲಾದ ಪ್ರದೇಶಗಳಲ್ಲಿ ದೊರೆಯುವ ಎಲ್ಲ ಎಣ್ಣೆಯೂ ಕೂಡಿದರೆ ೧೦ ಲಕ್ಷ ಟನ್ನಿನಷ್ಟು ಮಾತ್ರ ಆಗಬಹುದು. ಇನ್ನುಳಿದ ೧೫ ಲಕ್ಷ ಟನ್ನಿನಷ್ಟು ಎಣ್ಣೆಯನ್ನು ದೊರಕಿಸಿಕೊಂಡ ಹೊರತು ಅದು ಯುದ್ಧವನ್ನು ಮುಂದುವರಿಸುವದು ಸುಲಭವಲ್ಲ. ಹಿಂದೆ ಸಂಗ್ರಹಿಸಿಕೊಂಡ ಎಣ್ಣೆಯ ಸಹಾಯದಿಂದ ಸದ್ಯದ ಕೊರತೆಯು ಪೂರೈಸಿದರೂ ಮುಂದಿನ ಮಾರ್ಗಯೋಜನೆಗಾಗಿ ಅದು ಕಾಕೇಶಸ್ ಪ್ರಾಂತದತ್ತ ಕಾತರಭಾವದೊಡನೆ ಧಾವಿಸುತ್ತಿದೆ.

ರಶಿಯಕ್ಕೂ ಈ ಮಾತು ಗೊತ್ತಿದೆ. ಅದು ಕಾಕೇಶಸ್ ಪ್ರದೇಶದಲ್ಲಿ ೪೦೦ ಮೈಲುಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿ ಘನಘೋರ ಸಂಗ್ರಾಮದ ಸಿದ್ಧತೆ ಮಾಡಿಕೊಂಡು ಭದ್ರವಾದ ಕಾವಲಿಟ್ಟು ಕೂತಿದೆ. ದುರ್ಗಮವಾದ ದಾರಿಗಳಲ್ಲಿ ಸಿಮೆಂಟು ಕಾಂಕ್ರೆಟುಗಳ ದುರ್ಗಗಳನ್ನು ಅಲ್ಲಲ್ಲಿಗೆ ನಿರ್ಮಿಸಿ ಕಂದಕಗಳಿಂದ ಒಂದರಿಂದೊಂದಕ್ಕೆ ಮಾರ್ಗವನ್ನು ರಚಿಸಲಾಗಿದೆ. ಉನ್ನತ ಪರ್ವತಶ್ರೇಣಿಗಳು, ಅಗಾಧ ಕಂದರಗಳು, ಕಾಲಿಡಲಾಗದ ಕಾಡುದಾರಿಗಳು, ನಡುನಡುವೆ ಅಡ್ಡಗಟ್ಟಿರುವ ಮಹಾನದಿಗಳು ಇವು ರಶಿಯನ್ ಕಂಪು ಸೈನ್ಯಕ್ಕೆ ಬೆಂಬಲವಾಗಿ ನಿಂತಿವೆ.

ಈ ಪ್ರದೇಶದಲ್ಲಿ ಹಾಯುವ ರೈಲುದಾರಿಯು ಕೂಡ ತುಂಬ ದುರ್ಗಮವಾಗಿದೆ. ಅದು ಹಲವು ಕಡೆಗಳಲ್ಲಿ ಗುಡ್ಡದೊಳಗೆ ಕೊರೆದ ಗವಿಗಳಲ್ಲಿ ಸಾಗಿದೆ. 'ಜಾರ್ಜಿಯನ್ ಮಿಲಿಟರಿ ಹಾಯ್ ವೇ' ಎಂಬದು ಈ ಪ್ರದೇಶದೊಳಗಿನ ದೊಡ್ಡ ಮಾರ್ಗ. ಇದು ನಡುವೆ ಹಲವು ಮೈಲುಗಳ ವರೆಗೆ ಎರಡೂ ಕಡೆಗೆ ಕಂದರಗಳಿರುವ ಪರ್ವತಶ್ರೇಣಿಯ ತುದಿಯಲ್ಲಿ ಸಾಗಿದೆ. ಪ್ರಸಂಗ ವಿಶೇಷದಲ್ಲಿ ರಶಿಯನ್ನರು ಈ ಬಗೆಯ ದುರ್ಗಮವಾದ ಮಾರ್ಗಗಳನ್ನು ಕೆಡವಿಬಿಟ್ಟು ಹೆಗೆಗಳನ್ನು ಹಿಂದು-ಮುಂದಿಲ್ಲದ ಆಪತ್ತಿಗೆ ಗುರಿಮಾಡುವದು ಸುಲಭಸಾಧ್ಯವಾಗಿದೆ.

ಈ ಪ್ರದೇಶವು ಶತ್ರುಗಳಿಗೆ ದುರ್ಗಮವಾಗಿರುವಂತೆಯೇ ಪ್ರಾಕೃತಿಕ ಸೌಂದರ್ಯದ ಆಗರವೂ ಆಗಿದೆ. ಹಿಮಾಚ್ಛಾದಿತವಾಗಿ ರಜತಗಿರಿಗಳಂತೆ ಕಂಗೊಳಿಸುವ ಗಿರಿಶಿಖರಗಳು, ಹಸುರು ಹಾಸುಗೆಯಂತೆ ಮನೋಹರವಾಗಿರುವ ಅರಣ್ಯ, ಇವುಗಳ ನಡುವೆ ಹಾಯ್ದಿರುವ ಜಾರ್ಜಿಯನ್ ಮಿಲಿಟರಿ ಹಾಯ್‌ವೇಯಲ್ಲಿ ಮೋಟಾರಿನಿಂದ ಪ್ರವಾಸ ಮಾಡುವ ಆನಂದವನ್ನು ಅನುಭವಿಸಿಯೇ ತಿಳಿಯಬೇಕೆಂದು ಹೇಳುವರು. ಪರ್ವತದ ಇಳುಕಲಿನ ತಪ್ಪಲಿನಲ್ಲಿಯಂತೂ ಅಲ್ಲಲ್ಲಿಗೆ ಸೃಷ್ಟಿಯು ನಿರ್ಮಿಸಿಟ್ಟ ಉಪವನಗಳಂತೆ ವಿರಾಜಿಸುವ ಮೈಲುಮೈಲು ವಿಸ್ತಾರವಾದ ದ್ರಾಕ್ಷೆಯ ತೋಟಗಳು, ಕಿತ್ತಳೆ, ಲಿಂಬೆ, ಪಿಚೆನ್, ಆಪ್ರಿಕಾಟ್ಸ್, ಅಕ್ರೋಡ, ಖರಬೂಜ ಮುಂತಾದ ಫಲವೃಕ್ಷಗಳ ಬನಗಳು ಇವು ಅತ್ಯಂತ ರಮ್ಯವಾಗಿವೆ. ಯುರೋಪದ ಇನ್ನಾವ ದೇಶದಲ್ಲಿಯೂ ಇಲ್ಲದಷ್ಟು ವಿಶಾಲವಾದ ಚಹಾದ ತೋಟಗಳು ಈ ಪ್ರದೇಶದಲ್ಲಿವೆ.

ಈ ಪ್ರದೇಶದಲ್ಲಿ ಜಾರ್ಜಿಯನ್, ತುರ್ಕ, ಪರ್ಶಿಯನ್, ತಾರ್ತರ, ಆರ್ಮಿನಿಯನ್, ಜ್ಯೂ, ಗ್ರೀಕ, ಕೊಸೋಕ, ರಶಿಯನ್, ರೆಷೀಕ್, ಕಲಮುಕ್, ಮೊಲ್ಟಾವ್ಹಿಯನ್ ಮುಂತಾದ ಭಿನ್ನ ಭಿನ್ನ ಕುಲಗಳ ಜನರು ವಾಸವಾಗಿದ್ದಾರೆ. ರಶಿಯದ ಇಂದಿನ ಮುಖ್ಯಾಧಿಕಾರಿ ಸ್ಟಾಲಿನ್ ನು ಜಾರ್ಜಿಯನ್ ವಂಶದವನು. ಇವನಲ್ಲಿ ತನ್ನ ಕುಲಾಭಿಮಾನವು ಅತಿ ತೀಕ್ಷ್ಣವಾಗಿರುವದು. ಈ ಎಲ್ಲ ಕಾರಣಗಳಿಂದ

ರಶಿಯನ್ನರು ಜರ್ಮನ್ನರಿಗೆ ಅವರು ಎಣಿಸಿದಷ್ಟು ಸುಲಭವಾಗಿ ಕಾಕೇಶಸ್ ಪ್ರಾಂತವನ್ನು ಬಿಟ್ಟುಕೊಡಲಾರರೆಂಬದು ಸಹಜವೇ ಸರಿ.

ಈ ಕಾಕೇಶಸ್ ಪ್ರಾಂತದ ಜನರು ಶೂರರೂ ಅಭಿಮಾನಿಗಳೂ ರಣಭೂಮಿಯಲ್ಲಿ ಕಡುಗಲಿಗಳೂ ಆಗಿರುವರು. ಹಿಂದೊಂದು ಕಾಲದಲ್ಲಿ ಸೈನಿಕರ ಸಂಗ್ರಹಕ್ಕಾಗಿ ಹಗೆಗಳು ಈ ಪ್ರಾಂತವನ್ನು ಮುತ್ತಿದ್ದರಂತೆ. ಇಂದು ಕಲ್ಲೆಣ್ಣೆಗಾಗಿ ಜರ್ಮನರು ಈ ಪ್ರಾಂತದ ಮೇಲೆ ದಾಳಿ ಹೊರಟಿದ್ದಾರೆ. ದೈವದುರ್ವಿಪಾಕದಿಂದ ಈ ಪ್ರಾಂತದಲ್ಲಿ ಶತ್ರುಗಳು ಮುಂದಡಿಯಿಟ್ಟು ಬಂದರೆಂದರೆ ರಶಿಯನ್ನರು ಇತರ ಪ್ರದೇಶಗಳಲ್ಲಿಯಂತೆ ಎಲ್ಲ ಎಣ್ಣೆಯ ಕಣಿಗಳನ್ನು ನಾಶಗೊಳಿಸಿ ಒಂದು ಹನಿ ಎಣ್ಣೆಯೂ ಕೂಡ ಹಗೆಗಳ ವಶವಾಗದಂತೆ ನೋಡಿಕೊಳ್ಳುವರೆಂದು ಹೇಳಿದರೆ ತಪ್ಪಾಗದು.

(ಮುಂದೆ ಸಾಗುವದು.)

ಪುಸ್ತಕ ಪರಿಚಯ

೧. ವಿಶ್ವಾಮಿತ್ರನ ಸಾಹಸ

ಕ್ರೌನ್ ಆಕಾರದ ೨೪ ಪುಟಗಳು ಬೆಲೆ : ೨ ಆಣೆ

ಲೇಖಕರು ಮತ್ತು ಪ್ರಕಾಶಕರು— ಶ್ರೀ. ಸಿಂಪಿ ಲಿಂಗಣ್ಣ-ಶಿಕ್ಷಕರು ಇಂಡಿ

ಇದು ಕಿರಿಯರ ಓದಿನ ಮೊದಲನೆಯ ಪುಸ್ತಕ. ಪ್ರಾಥಮಿಕ ಶಾಲೆಗಳಲ್ಲಿ ೪-೫ ಇಯತ್ತೆಗಳನ್ನು ಮಾತ್ರ ಕಲಿತುಬಿಟ್ಟಿರುವ ಬಾಲ-ಬಾಲಿಕೆಯರಿಗಾಗಿಯೂ ಸಾಕ್ಷರಿಗಳಾದ ಪ್ರಬುದ್ಧರಿಗಾಗಿಯೂ ತಾವೇ ಓದಿಕೊಳ್ಳಲು ಅನುಕೂಲವಾಗುವಂತೆ ಇದನ್ನು ಬರೆಯಲಾಗಿದೆ. ಲೇಖಕರು, "ಚಿಕ್ಕ ಮಕ್ಕಳೂ ಪ್ರಬುದ್ಧರೂ ಪಡೆದ ಶಿಕ್ಷಣವು ಈ ತರದ ಸಾಹಿತ್ಯದಿಂದ ಸಾರ್ಥಕಗೊಂಡು ಉದಾತ್ತ ಧ್ಯೇಯವು ನೆಲೆಗೊಳ್ಳಲಿ" ಹೀಗೆ ಆಶಿಸುತ್ತಾರೆ.

ವಿಶ್ವಾಮಿತ್ರ ರಾಜನು ದಿಗ್ವಿಜಯಕ್ಕೆ ಹೊರಟ ಸಂದರ್ಭದಿಂದ ಕತೆಯು ಆರಂಭವಾಗಿದೆ. ಹರಿಶ್ಚಂದ್ರನನ್ನು ಕಾಡಿದ ಭಾಗವು ತೀರ ಕಿರಿದಾಗಿದೆ. ಭಾಷೆಯು ಸರಳವಾಗಿದೆ. ಕತೆಹೇಳುವ ರೀತಿಯು ಯೋಗ್ಯವಾಗಿದೆ. ಕಾಗದವು ಹೊಳಪುಳ್ಳದ್ದಿದ್ದು ದಪ್ಪ ಅಕ್ಷರಗಳಲ್ಲಿ ಮುದ್ರಿಸಿರುವುದರಿಂದ ಮಕ್ಕಳಿಗೆ ಮೆಚ್ಚು ಎಂದು ಕೊಡಲು ಇದೊಂದು ತಕ್ಕ ಪುಸ್ತಕವೆನಿಸಿದೆ.

ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಪರಿಚಿತರಾದ ಶ್ರೀ. ಲಿಂಗಣ್ಣನವರು ಈಗ ಬಾಲಸಾಹಿತ್ಯಸೃಷ್ಟಿಯ ಸಾಹಸಮಾಡುತ್ತಲಿದ್ದಾರೆ. ತಮ್ಮ ಸಾಹಸದ ಮೊದಲನೆಯ ಹೆಜ್ಜೆಯಲ್ಲಿಯೇ ವಿಶ್ವಾಮಿತ್ರನ ಸಾಹಸವನ್ನು ಪರಿಚಯಮಾಡಿ ಕೊಡಲು ಹವಣಿಸಿದ್ದಾರೆ. ಇದಕ್ಕೆ ಶಿಕ್ಷಕರೂ ವಿದ್ಯಾಸಂಸ್ಥೆಯವರೂ ಉದಾರಾಶ್ರಯವನ್ನು ಕೊಡುವರೆಂದು ಕೋರಲಾಗಿದೆ.

H. G. K.

೨. ಶಿಕ್ಷಕ ಸನ್ಮಿತ್ರ

ಮರಾಠಿಭಾಷೆಯ ಪುಸ್ತಕವಿದು. ಕ್ರೌನ್ ಆಕಾರದ ೪೨ ಪುಟಗಳು, ಬೆಲೆ: ೪ ಆಣೆ. ಲೇಖಕರು ಮತ್ತು ಪ್ರಕಾಶಕರು— ಶ್ರೀ. ಎಮ್. ಆರ್. ಕೋಪರ್ಡೆ, ಬೆಳಗಾವಿ.

ಬೆಳಗಾವಿ ಜಿಲ್ಲೆಯ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳು 'ಬೇಟರ ಫ್ಹಿಲೇಜಿಸ್' ಎಂಬ ಅಕ್ಸಫರ್ಡ್ ಯುನಿವ್ಹರ್ಸಿಟಿ ಪ್ರೆಸ್ಸಿನವರು ಪ್ರಸಿದ್ಧಮಾಡಿದ ಪುಸ್ತಕದ ಆಧಾರದಿಂದ ಹಾಗು ಮಹಾತ್ಮಾಗಾಂಧಿಯವರ ವಿಚಾರಗಳನ್ನೂ ವೃತ್ತಪತ್ರಿಕೆಗಳಲ್ಲಿಯ ಅವತರಣಿಕೆಗಳನ್ನೂ ಸಂಗ್ರಹಿಸಿ ಇದನ್ನು ಬರೆದಿದ್ದಾರೆ.

ಶಿಕ್ಷಕರಿಗೆ ಬೇಕಾಗುವ ವಿಷಯಗಳೆಲ್ಲವೂ ಇದರಲ್ಲಿ ಇಲ್ಲದಿದ್ದರೂ, ಸಾಕ್ಷರತೆ, ಸ್ವಚ್ಛತೆ, ಸಂಸ್ಕಾರ, ಪಾಲಕರ ಕೆಲಸಗಳು, ವಿಶ್ವ ವೈಚಿತ್ರ, ಪ್ರಥಮೋಪಚಾರ, ಅನುಭವಿಕ ಔಷಧಗಳು, ಹೊಸ–ಹಳೆ–ಶಿಕ್ಷಕರು ಮೊದಲಾದ ಸಂಗತಿಗಳನ್ನು ಇದರಲ್ಲಿ ಸಂಕ್ಷೇಪವಾಗಿ ವಿವರಿಸಿದ್ದಾಗಿದೆ.

"ಈ ಪುಸ್ತಕವನ್ನು ಕೇವಲ ಶಿಕ್ಷಕರಷ್ಟೇ ಅಲ್ಲ, ಉಳಿದವರೂ ಕೂಡ ವಾಚನ, ಹಾಗು ಮನನ ಮಾಡಬೇಕೆಂದು ನನ್ನ ಬಲವತ್ತರಾದ ಶಿಫಾರಸು ವಿರುತ್ತದೆ," ಹೀಗೆ ಬೆಳಗಾವಿ ಜಿಲ್ಲೆಯ ಎಡ್ಮಿನಿಸ್ಟ್ರೆಟಿವ್ಹ ಆಫೀಸರರಾದ ಶ್ರೀಮಾನ್ ಪಿ. ಎಚ್. ವಾಳವೇಕರ ಅವರು; "ಶಿಕ್ಷಕರು ವಿದ್ಯಾರ್ಥಿಗಳ ವಿಷಯದಲ್ಲಿ ಯಾವ ಯಾವ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು ಮೊದಲಾದ ಸಂಗತಿಗಳನ್ನು ಸವಿಕಟ್ಟಾಗಿ ತಿಳಿಸುವ ಉಪಯುಕ್ತ ಪುಸ್ತಕವನ್ನು ಬರೆದುದಕ್ಕಾಗಿ ಮನಃಪೂರ್ವಕವಾಗಿ ನಿಮ್ಮ ಅಭಿನಂದನವನ್ನು ಮಾಡುತ್ತೇನೆ." ಹೀಗೆ ಔಂಧ ಸಂಸ್ಥಾನದ ಅಧಿಪತಿಗಳಾದ ಶ್ರೀ. ಭವಾನರಾವ ರಾಜರು ಅಭಿಪ್ರಾಯ ಕೊಟ್ಟಿದ್ದಾರೆ.

ಪುಸ್ತಕದ ಕಾಗದ ಮುದ್ರಣಗಳ ಮಾನದಿಂದ ಬೆಲೆಯು ಹೆಚ್ಚಿಲ್ಲ. ಮರಾಠಿಯನ್ನು ಕಲಿತು ಕಲಿಸುವ ಶಿಕ್ಷಕರು ಅವಶ್ಯವಾಗಿ ಇದನ್ನು ಓದಬಹುದು.

H. G. K.

ಪ್ರಕಟನೆಗಳು

೧. ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಪ್ರಾಥಮಿಕಶಾಲಾ ಪ್ರಮಾಣ ಪತ್ರ ಪರೀಕ್ಷೆ

ಕೆಲವು ವರ್ಷಗಳಿಂದ ಈಚೆಗೆ ಮಿಡಲ್‌ಸ್ಕೂಲು ಮತ್ತು ಹೈಸ್ಕೂಲುಗಳ ಸ್ಕಾಲರಶಿಪ್ ಪರೀಕ್ಷೆಗಳ ಪ್ರಶ್ನಪತ್ರಿಕೆಗಳಲ್ಲಿ ವಿಶೇಷತರದ ಬದಲಾವಣೆ ಯಾಗಿರುವದಷ್ಟೇ? ಸಣ್ಣವೂ ಬುದ್ಧಿಪರೀಕ್ಷೆಯೇ ಮುಖ್ಯ ಗುರಿಯಾಗಿರು ವಂಥವೂ ಕೇವಲ ಪುಸ್ತಕೀಯ ಪಾಠಶಕ್ತಿಯನ್ನು ಅವಲಂಬಿಸದಂಥವೂ ಆದ ಪ್ರಶ್ನೆಗಳನ್ನು ಆರಿಸಿಕೊಟ್ಟು ಪ್ರಶ್ನಪತ್ರಿಕೆಯಲ್ಲಿಯೇ ಉತ್ತರವನ್ನು ಬರೆದು ಕೊಡುವಂತೆ ಯೋಜನೆಮಾಡಿರುವದೇ ಈ ಬದಲಾವಣೆಯ ಮುಖ್ಯ ಲಕ್ಷಣ ಗಳು. ಸ್ಕಾಲರಶಿಪ್ ಪರೀಕ್ಷೆಗಳಲ್ಲಿ ಪ್ರಯೋಗಮಾಡಿ ನೋಡಿದ್ದರಿಂದ ಇದು ಉತ್ತಮ ಫಲಕಾರಿಯಾಗಿರುವದೆಂದು ಸರಕಾರದ ಅನುಭವಕ್ಕೆ ಬಂದಿರು ವದು. ಆದ್ದರಿಂದ ಈ ಬಗೆಯ ಪ್ರಶ್ನಪತ್ರಿಕೆಗಳನ್ನು ಕೊಡುವ ಪದ್ಧತಿಯನ್ನು ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಪ್ರಾಥಮಿಕಶಾಲಾ ಪ್ರಮಾಣಪತ್ರಿಕೆಯ ಪರೀಕ್ಷೆಗಳಲ್ಲಿಯೂ ಪ್ರಚಾರದಲ್ಲಿ ತರಬೇಕೆಂದು ಸರಕಾರದವರು ನಿರ್ಣಯಿಸಿ ದ್ದಾರೆ. ೧೯೪೩ನೇ ಇಸ್ವಿಯ ಪರೀಕ್ಷೆಗಳಿಂದಲೇ ಈ ಹೊಸ ಪದ್ಧತಿಯು ಪ್ರಾರಂಭವಾಗುವದೆಂದು ಈ ಮೊದಲೇ ಎಲ್ಲ ಸ್ಕೂಲ್‌ಬೋರ್ಡುಗಳ ಎಜ್ಯುಕೇ-ಷನಲ್ ಆಫೀಸರರಿಗೂ ತಿಳಿಸಲಾಗಿದೆ. ಮತ್ತು ತಮ್ಮ ತಮ್ಮ ಆಡಳಿತಕ್ಕೆ ಒಳಗಾದ ಶಾಲೆಗಳ ಶಿಕ್ಷಕರಿಗೆ ತಿಳಿಸಬೇಕೆಂದೂ ಕೇಳಿಕೊಂಡಿದೆ. (ಹೆಣ್ಣು ಮಕ್ಕಳ ಮತ್ತು ಗಂಡುಮಕ್ಕಳ ಟ್ರೇನಿಂಗ್ ಕಾಲೇಜುಗಳ ಪರೀಕ್ಷೆಗಳಲ್ಲಿಯೂ ಇದೇ ಕ್ರಮವನ್ನೇ ಪ್ರಚಾರದಲ್ಲಿ ತರಬೇಕೆಂಬ ವಿಚಾರವೂ ನಡೆದಿದೆ. ಅದೂ ಕೂಡ ೧೯೪೩ನೇ ಇಸ್ವಿಯ ಪರೀಕ್ಷೆಯಿಂದಲೇ ಪ್ರಾರಂಭವಾಗುವ ಸಂಭವ ವುಂಟು) ಈ ಬಗೆಯ ಪ್ರಶ್ನಪತ್ರಿಕೆಗಳಿಂದ ಪರೀಕ್ಷೆಯ ಸರ್ವಸಾಮಾನ್ಯ ತರಗತಿಯು ಸುಧಾರಿಸಬಹುದೆಂದು ಆಶಿಸಲಾಗಿದೆ. ಕಳೆದ ನಾಲ್ಕೈದು ವರ್ಷಗಳ ಮಿಡಲ್‌ಸ್ಕೂಲು ಸ್ಕಾಲರ್‌ಶಿಪ್ ಪರೀಕ್ಷೆಯ ಪ್ರಶ್ನಪತ್ರಿಕೆಗಳನ್ನು ನೋಡುವದರಿಂದ ಶಿಕ್ಷಕರಿಗೂ ಉಮೇದವಾರರಿಗೂ ಪ್ರಶ್ನೆಗಳ ಹೊಸ ಮಾದರಿಯ ತಿಳುವಳಿಕೆಯಾಗಬಹುದು.

ಸಾರಾಂಶ:— (೧) ೧೯೪೩ನೇ ಇಸ್ವಿಯಿಂದ ಮೊದಲುಗೊಂಡು ಮುಂದಿನ ವರ್ಷಗಳಲ್ಲಿ ಗಂಡುಮಕ್ಕಳ ಮತ್ತು ಹೆಣ್ಣು ಮಕ್ಕಳ ಪ್ರಾಥಮಿಕ ಶಾಲಾಪ್ರಮಾಣ ಪತ್ರ ಪರೀಕ್ಷೆಯ ಪ್ರಶ್ನ ಪತ್ರಿಕೆಗಳು ಮಿಡಲ್‌ಸ್ಕಾಲರ್‌ಶಿಪ್ ಪರೀಕ್ಷೆಯ ಪ್ರಶ್ನ ಪತ್ರಿಕೆಯ ಮಾದರಿಯವೇ ಇರುವವು.

(೨) ಉಮೇದುವಾರರು ಅವರವರಿಗೆ ಕೊಡುವ ಪ್ರಶ್ನ ಪತ್ರಿಕೆಯ ಪುಸ್ತಕ ಗಳಲ್ಲಿಯೇ ಅಲ್ಲಲ್ಲಿ ಬಿಟ್ಟಿರುವ ಸ್ಥಳಗಳಲ್ಲಿ ಉತ್ತರಗಳನ್ನು ಬರೆದು ಕೊಡಬೇಕಾ ಗುವದು.

(೩) ಉಮೇದುವಾರರು ಪೆನ್ಸಿಲಿನಿಂದಲೇ ಉತ್ತರ ಬರೆಯಬೇಕಾಗುವದು. ಆದ್ದರಿಂದ ಎರಡು ಸೀಸಪೆನ್ಸಿಲುಗಳು ಅವನ್ನು ಕೆತ್ತುವ ಚಾಕು ಇಲ್ಲವೆ ಪೆನ್ಸಿಲ್ ಶಾರ್ಪನರ ಇವನ್ನು ಸಂಗಡ ತರಬೇಕಾಗುವದು.

ಸಹಿ. **ಜೆ. ಆರ್. ಭಂಡಿವಾಡ,**
ದ. ಭಾ. ದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಪರವಾಗಿ

ವಿ. ಸೂ. ಮಿಡಲ್‌ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯ ಹೊಸಮಾದರಿಯ ಪ್ರಶ್ನ-ಪತ್ರಿಕೆಗಳನ್ನು ಪ್ರಾಥಮಿಕ ಶಿಕ್ಷಣದಲ್ಲಿ ಕಾಲಕಾಲಕ್ಕೆ ಪ್ರಕಟಿಸಿರುವೆವು. [ಸಂ.]

---

೨. ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ೧೯೪೩

ವಿಜಾಪುರ ಕೇಂದ್ರದ ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾಪ್ರಮಾಣಪತ್ರ ಪರೀಕ್ಷೆಯ ಅಧ್ಯಕ್ಷರು ಈ ವರೆಗೆ ವಿಜಾಪುರದ ಗಂಡುಮಕ್ಕಳ ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರು ಇರುತ್ತಿದ್ದರಷ್ಟೆ? ಇನ್ನು ಮುಂದೆ ೧೯೪೩ನೇ ಇಸ್ವಿಯ ಪರೀಕ್ಷೆ ಯನ್ನು ಮೊದಲುಗೊಂಡು ಈ ಕಮೀಟಿಯ ಅಧ್ಯಕ್ಷರು ವಿಜಾಪುರದ ಹೆಣ್ಣುಮಕ್ಕಳ ಆಂಗ್ಲೊ ಕನ್ನಡ ಹೈಸ್ಕೂಲಿನ ಹೆಡ್ ಮಿಸ್ಟ್ರೆಸರೆಂದೂ ಅವರು ಈ ಪರೀಕ್ಷೆಯ ಸಂಬಂಧದ ಎಲ್ಲ ಕಾರ್ಯಗಳನ್ನು ನಡೆಯಿಸುವರೆಂದೂ ಮೆ|| ಡಾಯರೆಕ್ಟರ ಸಾಹೇಬರವರು ತಮ್ಮ S. 62 (g)—20-1-D. ತಾ. ೨೮-೧೦-೧೯೪೨ ನೆಯ ಹುಕುಮಿನಿಂದ ತಿಳಿಸಿರುತ್ತಾರೆ.

ಧಾರವಾಡ.
೩೧-೧೦-೧೯೪೨

ಸಹಿ. **ಜೆ. ಆರ್. ಭಂಡಿವಾಡ,**
ದ. ಭಾ. ದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಪರವಾಗಿ

ಪತ್ರಗಳ ಮುಖ್ಯಾಂಶಗಳು

ಕುಡುಪಲಿ (ಹಿರಿಯಕೆರೂರ ತಾಲೂಕು)— ಶಾಲೆಯ ೬೦ ವಿದ್ಯಾರ್ಥಿಗಳು ತಮ್ಮ ಶಿಕ್ಷಕರೊಂದಿಗೆ ಕಡೂರ ಗುಡ್ಡದ ಪ್ರವಾಸವನ್ನು ಮಾಡಿದರು. ವನಭೋಜನವು ಪ್ರೇಕ್ಷಣೀಯವಾಗಿತ್ತು.

ತಿಳಿಸಿದವರು :— ಶ್ರೀ. ಕುಪ್ಪೇಲೂರ ದೊಡ್ಡ ಗೌಡರು.

ಕರಿಯುಕಟ್ಟೆ (ಸವದತ್ತಿ ತಾಲೂಕು)—ಕನ್ನಡ ಗಂಡುಮಕ್ಕಳ ಶಾಲೆಯ ವಿದ್ಯಾರ್ಥಿಗಳು ಈ ವರ್ಷ ಗಣಪತಿಯ ಸಮಾರಂಭವನ್ನು ಸಡಗರದಿಂದ ಏರ್ಪಡಿಸಿದ್ದರು. ಕಥೆ, ಕವನ, ಸಂಭಾಷಣೆ, ಆಟ, ವಿನೋದಗಳು ನಡೆದುವು.

ತಿಳಿಸಿದವರು :— ಶ್ರೀ. ಭ. ಈ. ದಡ್ಡೀಕರ ಅ. ಮಾಸ್ತರರು.

ಹಾಲಿಗಿ (ಹಾವೇರಿ ತಾಲೂಕು)—ಕನ್ನಡ ಶಾಲೆಯ ಹೆಡ್‌ಮಾಸ್ತರರಾದ ಶ್ರೀ. ಎಮ್ ಎಮ್. ಜೋಶಿ ಅವರ ಮುಂದಾಳುತನದಲ್ಲಿ ಈ ವರ್ಷ ಸಾರ್ವಜನಿಕ ಗಣಪತಿಯ ಹಬ್ಬವು ಸಡಗರದಿಂದ ಸಾಗಿತು. ಸುತ್ತಲಿನ ಹಳ್ಳಿಯ ಜನರೂ ಸಹಕರಿಸಿದರು. ಈ ಕಾರ್ಯದಲ್ಲಿ ಶಿಕ್ಷಕರ ಆಸ್ಥೆ, ನಿಸ್ವಾರ್ಥಬುದ್ಧಿಗಳು ಚೆನ್ನಾಗಿ ಕಂಡುಬಂದವು.

ತಿಳಿಸಿದವರು :— ಶ್ರೀ. ಪಾಟೀಲ ನಾಗನಗೌಡರು ಹಾಲಿಗಿ.

ಕುಪ್ಪೇಲೂರು (ರಾಣೇಬೆನ್ನೂರು ತಾಲೂಕು)— ಶಾಲೆಯ ವಿದ್ಯಾರ್ಥಿಗಳು ನೆರವೇರಿಸಿದ ಗಣಪತಿಯ ಸಮಾರಂಭದಲ್ಲಿ ಇಲ್ಲಿಯ ಸ್ಕೂಲ್ ಕಮೀಟಿಯ ಜೇಅರಮನ್ನರು ಭಾಗವಹಿಸಿ ಶಾಲೆಗಾಗಿ ಗಡಿಯಾರ ಜಾಗಟಿಗಳನ್ನು ದಯಪಾಲಿಸಿದರು.

ತಿಳಿಸಿದವರು :— ಶ್ರೀ. ಪೋಟಗಿ ವಿರುಪಾಕ್ಷಪ್ಪನವರು, ಕುಪ್ಪೇಲೂರು.

ಆಲದಗೇರಿ (ಹಿರಿಯಕೆರೂರ ತಾಲೂಕು)— ಶ್ರೀಮಾನ್ ಪಾಟೀಲ ಚೆನ್ನಬಸಪ್ಪಗೌಡರು ಮತ್ತು ಶ್ರೀಮಾನ್ ಪೆಡಿಯಾಲ ಬಸನಗೌಡರು ಕೂಡಿ ಮುಂದಾಳುಗಳಾಗಿ ವಾಚನಾಲಯಕ್ಕಾಗಿ ೨೦ ರೂಪಾಯಿಗಳನ್ನೂ ಶಾರೀರಿಕ ಶಿಕ್ಷಣವನ್ನು ಪಡೆಯುವ ೨೦ ವಿದ್ಯಾರ್ಥಿಗಳಿಗಾಗಿ ಸಮವಸ್ತ್ರಗಳನ್ನೂ ಕೊಡಿಸಿದರು. ಇದು ಸ್ತುತ್ಯವಾದದ್ದು.

ತಿಳಿಸಿದವರು :— ಶ್ರೀ. ಹ. ಗು. ಜೋಶಿ, ಹೆ. ಮಾ. ಆಲದಗೇರಿ.

ಬೀಳಗಿ (ಸಿದ್ದಾಪುರ ತಾಲೂಕು)—ಶಾಲೆಯಲ್ಲಿ ೧೬-೧೦-೧೯೪೨ನೆಯ ದಿವಸ ವಿದ್ಯಾರ್ಥಿಗಳು ನಾಟಕ, ಆಟ, ಲೇರಿಝೀಮು ಮೊದಲಾದವುಗಳನ್ನು ಬಹು

ವಿಜೃಂಭಣೆಯಿಂದ ಮಾಡಿದರು. ಮಾನ್ಯ ಸದ್ಗೃಹಸ್ಥರು ಅದನ್ನು ಕಂಡು ಸಂತೋಷವನ್ನು ವ್ಯಕ್ತಪಡಿಸಿದರು.

ತಿಳಿಸಿದವರು :— ಶ್ರೀ. ಅನಂತದಾಸ ಭಟ್ಟ, ಬೀಳಗಿ.

ಚೆಂಡಿಯೆ (ಕಾರವಾರ ಜಿಲ್ಲೆ)— ಒಕ್ಕಲುತನದ ಒಲವಿನ ಶಾಲೆಯಲ್ಲಿ ಡೆ. ಎ. ಇ. ಅವರಾದ ಶ್ರೀಮಾನ್ ಕರ್ಜಗಿಯವರು ೧೪–೧೦–೧೯೪೨ ನೆಯ ದಿವಸ ಮಾಯಾ ದೀಪದ ಸಹಾಯದಿಂದ ಸದ್ಯದ ಯುದ್ಧವನ್ನು ವಿವರಿಸಿ ತಿಳಿಸಿದರು.

ತಿಳಿಸಿದವರು :— ಶ್ರೀ. ನಾ. ಮೂ. ಧಾರೇಶ್ವರ, ಅ. ಮಾಸ್ತರರು.

ಯಕ್ಕುಂಡಿ (ಸವದತ್ತಿ ತಾಲೂಕು)— ಕನ್ನಡ ಗಂಡುಮಕ್ಕಳ ಶಾಲೆಯಲ್ಲಿ ೨೫–೧೦–೧೯೪೨ ನೆಯ ದಿವಸ ಬೆಳಗಾವಿ ಜಿಲ್ಲೆಯ ಪ್ರಾಥಮಿಕ ಶಿಕ್ಷಣ ಸಮಿತಿಯವರು ಕುಶಲಾಪುರದಲ್ಲಿ ಆರಂಭಿಸಿದ ಶಾರೀರಿಕ ಶಿಕ್ಷಣವರ್ಗದ ಮುಕ್ತಾಯ ಸಮಾರಂಭವಾಯಿತು. ಇದರಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಮಾನ್ಯಗೃಹಸ್ಥರು ಮತ್ತು ಸ್ವಾಮಿಗಳು ಭಾಗವಹಿಸಿದ್ದರು. ಈ ಸಮಾರಂಭದ ಸೂತ್ರಧಾರಿಗಳಾದ ಶ್ರೀ. ಕೋಪರ್ಡೆ ಅವರ ಹಾಗೂ ಎಲ್ಲ ವೆಚ್ಚವನ್ನು ಪ್ರೇಮದಿಂದ ಸಹಿಸಿದ ಶ್ರೀ. ಲಮಾಣಿ ಶಿವಪ್ಪನವರ ಆಭಾರವನ್ನು ಮನ್ನಿಸಲಾಯಿತು.

ತಿಳಿಸಿದವರು :— ಶ್ರೀ. ಜೆ. ಜಿ. ಮೊಗಬ, ಕುಶಲಾಪುರದ ಶಾಲಾಮಾಸ್ತರರು.

ನಿಡುಗುಂದಿ (ವಿಜಾಪುರ ಜಿಲ್ಲೆ)—ಶಾಲೆಯಲ್ಲಿ ೨೨–೧೦–೧೯೪೨ನೆಯ ದಿವಸ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀಮಾನ್ ಕೇ. ವ್ಹಿ. ಕುಲಕರ್ಣಿ ಅವರ ಹಿರಿಯತನದಲ್ಲಿ ಈ ಭಾಗದ ಶಿಕ್ಷಕ–ಶಿಕ್ಷಕಿಯರ ಸಮ್ಮೇಲನವು ಕೂಡಿತ್ತು. ಆಗ ಹಳ್ಳಿಗಳಿಂದ ಬಂದಿರುವ ವಿದ್ಯಾರ್ಥಿಗಳ ಹಾಗು ಶಿಕ್ಷಕರ ಊಟದ ವೆಚ್ಚಕ್ಕೆಂದು ಶ್ರೀಮಾನ್ ನಾಗಠಾಣ ಮಲ್ಲಿಕಾರ್ಜುನಪ್ಪನವರು ೧೬ ರೂ. ಗಳನ್ನು, ಶ್ರೀ. ಶಟ್ಟರ ವಿರೂಪಾಕ್ಷಪ್ಪನವರು ಹಾಗು ಶ್ರೀ. ಪಾಟೀಲ ವೆಂಕನಗೌಡರು ಕೂಡಿ ಗಡಿಯಾರಕ್ಕಾಗಿ ೩೦ ರೂಪಾಯಿಗಳನ್ನು, ಶ್ರೀ. ಪಟ್ಟಣಶೆಟ್ಟಿ ವೀರಭದ್ರಪ್ಪನವರು ಬಡಹುಡುಗರಿಗಾಗಿ ೧೫ ರೂ. ಬೆಲೆಯ ಪಾಟಿಪುಸ್ತಕಗಳನ್ನು, ಶ್ರೀ. ಕಾಜಗಾರ ಮಹಾದೇವಪ್ಪನವರು ಹೆಣ್ಣುಮಕ್ಕಳ ಶಾಲೆಯ ಗಡಿಯಾರಕ್ಕಾಗಿ ೧೦ ರೂಪಾಯಿಗಳನ್ನು, ಶ್ರೀ. ಹುಂಡೇಕಾರ ಮಲ್ಲಿಕಾರ್ಜುನಪ್ಪನವರು ೭ ರೂ. ಬೆಲೆಯ ಕನ್ನಡಿಯನ್ನು, ಶ್ರೀ. ರುದ್ರಸ್ವಾಮಿಗಳು ೫ ರೂಪಾಯಿಗಳನ್ನು, ಆಶೀರ್ವಾದ ಪೂರ್ವಕ ಕೊಟ್ಟರು. ಇವರಲ್ಲದೆ ಉಳಿದ ಊರ ಹಿರಿಯರೂ ತುಂಬ ಸಹಾಯಮಾಡಿದರು.

ತಿಳಿಸಿದವರು :— ಶ್ರೀ. ಭಗವತಿ ಅವರು ಹೆ. ಮಾ. ನಿಡಗುಂದಿ.

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

ಹಳ್ಳಿಗಳು ಸ್ವತಂತ್ರವಾಗಬೇಕು

ಹಳ್ಳಿಗಳು ಸ್ವತಂತ್ರವಾಗಬೇಕು. ಹಾಗೆಂದರೇನು? ಹಳ್ಳಿಯ ಜನರ ಜೀವನವು ಸ್ವತಂತ್ರವಾಗಿ ಸಾಗಬೇಕು. ಅವರು ಹಾಗೆ ಸ್ವತಂತ್ರವಾಗಿ ಜೀವಿಸಲು ಏನೇನುಬೇಕು?

೧. **ಆಹಾರ**— ಅಕ್ಕಿ ಜೋಳಗಳೇ ನಮ್ಮ ಕರ್ನಾಟಕದ ಜನರ ಆಹಾರದ ಮುಖ್ಯ ಧಾನ್ಯಗಳು. ಬಡಬಗ್ಗರು ರಾಗಿಯನ್ನೂ ಉಪಯೋಗಿಸುವರು. ಮಲೆನಾಡಿನಲ್ಲಿ ಅಕ್ಕಿ, ಬೆಳವಲದಲ್ಲಿ ಜೋಳ, ಗಡಿನಾಡಿನಲ್ಲಿ ಇವೆರಡರ ಜೊತೆಗೆ ರಾಗಿ ಇವನ್ನು ಆಹಾರದ ಧಾನ್ಯಗಳಾಗಿ ಉಪಯೋಗಿಸುವರು. ಉದ್ದು, ಹೆಸರು, ಕಡಲೆ, ತೊಗರಿ ಮುಂತಾದ ಅಕ್ಕಡಿಯ ಕಾಳುಗಳೂ ಎಳ್ಳು ಕುಸಿಬೆ ಮುಂತಾದ ಎಣ್ಣೆಯ ಕಾಳುಗಳೂ ನಮಗೆ ಬೇಕು. ಗೋದಿಯು ಶ್ರೀಮಂತರಿಗೂ ಹಬ್ಬ ಹುಣ್ಣಿವೆಗಳ ಶ್ರೀಮಂತಿಕೆಯ ಊಟಗಳಿಗೂ ಬೇಕು. ಒಕ್ಕಲುತನದಿಂದ ನಾವು ಇವನ್ನೆಲ್ಲ ದೊರಕಿಸಬಹುದಾಗಿದೆ. ಉಪ್ಪು, ಹುಳಿ, ಕಾರ, ಬೆಲ್ಲ, ತೆಂಗು ಇವೂ ಕೂಡ ನಮಗೆ ಸ್ವಾಲುವಷ್ಟರ ಮಟ್ಟಿಗೆ ನಮ್ಮಲ್ಲಿಯೇ ಹುಟ್ಟುವವು. ಒಟ್ಟಿಗೆ ಹೇಳುವದಾದರೆ ನಮ್ಮ ಆಹಾರದ ಜೀನಸುಗಳು ಪರದೇಶದಿಂದ ಬರಬೇಕಾಗಿಲ್ಲ. ನಮ್ಮ ನಾಡಿನ ಬೇರೆ ಬೇರೆ ಹಳ್ಳಿಗಳಲ್ಲಿ ಬೆಳೆಯುವ ಈ ಜೀನಸುಗಳನ್ನು ಅಲ್ಲಲ್ಲಿಗೆ ಸಾಗಿಸಿಕೊಂಡರೆ ನಮಗೆ ಆಹಾರದ ಕೊರತೆಯಾಗದು. ಇವನ್ನು ನಮ್ಮ ರೈತರು ಹಣದ ಆಶೆಯಿಂದ ಪರನಾಡುಗಳಿಗೆ ಮಾರಿಕೊಳ್ಳದಂತೆಯೂ ವ್ಯಾಪಾರಸ್ಥರು ಇವನ್ನು ಕೊಂಡು ಸಂಗ್ರಹಿಸಿಟ್ಟು ಹೆಚ್ಚಿನ ಬೆಲೆಗೆ ಮಾರದಂತೆಯೂ

ನೋಡಿಕೊಳ್ಳುವ ವ್ಯವಸ್ಥೆಯಾಗುವದೊಂದು ಹೆಚ್ಚಿನ ಕೆಲಸ. ದೇವರ ದಯೆಯಿಂದ ಮಳೆಯಾಗಿ ಮೇವು ಮಿಡಿತೆಗಳು ದೊರೆಯುತ್ತಿದ್ದರೆ ನಮ್ಮ ದನಕರುಗಳು ನಮಗೆ ಬೇಕಾದ ಹೈನವನ್ನು ಒದಗಿಸಬಹುದು. ಅಡವಿಯಿಂದ ನಮಗೆ ಬೇಕಾಗುವ ಉರುವಲವು ದೊರೆಯುವದು. ಚಹಾ, ಕಾಫಿ, ಕೋಕೊ, ಸಕ್ಕರೆ ಇವು ಜೀವನಕ್ಕೆ ಆವಶ್ಯಕವಾದ ಜೀನಸುಗಳಲ್ಲ. ಹಳ್ಳಿ ಹಳ್ಳಿಗಳ ಮೂಲೆ ಮೂಲೆಗಳಲ್ಲಿಯೂ ಸೇರಿರುವ ಚಹಾ ಕಾಫಿಗಳ ವ್ಯವಸನವು ನಮ್ಮಿಂದ ಎಷ್ಟು ಬೇಗ ತೊಲಗಿದಷ್ಟು ಉತ್ತಮ. ಚಹಾ ಸಕ್ಕರೆಗಳ ಅಭಾವದಿಂದಲಾದರೂ ಇವುಗಳ ವ್ಯಸನವು ಕುಗ್ಗಿ ನಿರ್ನಾಮವಾದರೆ ಸಂತೋಷವೇ ಸರಿ.

೨. **ದೀಪ**— ಮಹಾಯುದ್ಧದ ಬೇಗೆಯಿಂದ ಸುಟ್ಟು ಹೋಗುತ್ತಿರುವ ಹಲವು ಜೀನಸುಗಳಲ್ಲಿ ಕಲ್ಲೆಣ್ಣೆಯು ಮುಖ್ಯವಾದದ್ದು. ಕಲ್ಲೆಣ್ಣೆಯು ನಮ್ಮ ದೇಶದ ಹುಟ್ಟುವಳಿಯಲ್ಲ. ಇದಕ್ಕಾಗಿ ನಾವು ಪರದೇಶದ ಮೇಲೆ ಅವಲಂಬಿಸಿಯೇ ತೀರಬೇಕು. ಕಲ್ಲೆಣ್ಣೆಯು ಬಂದು ನಮ್ಮ ದೇಶದ ಗಾಣಿಗರು ಕುಲ ಕಸಬನ್ನು ಬಿಟ್ಟು ಅಡ್ಡದಾರಿಗೆ ಹತ್ತಿದ್ದು ಕಳೆದ ಶತಮಾನದಲ್ಲಿಯೇ ಎಂದು ಹಿರಿಯರು ಹೇಳುವರು. ಹರಳೆಣ್ಣೆ, ಬೇವಿನ ಎಣ್ಣೆ, ಹುಲುಗಲಎಣ್ಣೆ, ಹೊನ್ನೆಎಣ್ಣೆ ಮುಂತಾದ ಆಹಾರಕ್ಕೆ ತಕ್ಕವಲ್ಲದ ಎಣ್ಣೆಗಳನ್ನು ನಮ್ಮ ಪೂರ್ವಜರು ದೀಪಕ್ಕಾಗಿ ಉಪಯೋಗಿಸುತ್ತಿದ್ದರು. ಅಂಬಿಗರು ಮೀನಿನ ಎಣ್ಣೆಯ ದೀಪವನ್ನು ಹಚ್ಚುತ್ತಿದ್ದುದನ್ನು ನೋಡಿದ್ದು ನಮಗೆ ಇನ್ನೂ ನೆನಪುಂಟು. ಹಳ್ಳಿಯ ವ್ಯವಸಾಯಗಾರರು ಈ ನಮ್ಮ ಹಿಂದಿನ ಪರಂಪರೆಯನ್ನು ಪುನುರುಜ್ಜೀವನಗೊಳಿಸಿಕೊಳ್ಳುವ ಕಾಲವು ಸಮೀಪಿಸಿದೆ.

ನಮ್ಮ ಕಮ್ಮಾರ-ಕುಂಬಾರರೂ ಈಗ ಎಚ್ಚರುಗೊಳ್ಳು
ಕಾಲ ಬಂದಿದೆ. ಕತ್ತಿ, ಕೊಡಲಿ, ಚಾಕು, ಕತ್ತರಿಗಳನ್ನು ನಮ
ಕಮ್ಮಾರರು ಮಾಡುವರು. ಮನೆಗೆ ಹಾಕುವ ಕೀಲಿಗಳನ್ನು
ಬಹು ಭದ್ರವಾಗಿ ಮಾಡುವ ಕಲೆಯು ನಮ್ಮ ಕಮ್ಮಾರರಿ
ಗೊತ್ತಿದೆ. ಕೆಲಸಿಗರಿಗೆ ಬೇಕಾಗುವ ಆಯುಧಗಳನ್ನೂ ಅವರ
ಒದಗಿಸಿಕೊಡಬಲ್ಲರು. ಕೃಷ್ಣರೇಖೆಗಳ ಸೇಫ್ಟಿರೇಖೆಗಳ
ಬಂದು ಉಕ್ಕು ಕಬ್ಬಿಣಗಳಿಗೆ ಹದಕೊಡುವ ಅವರ ಕಲೆಯು
ಮಲಿನವಾಗಿದೆ. ಈಗ ಅದರ ಉದ್ಧಾರಾಗಬೇಕು.

೩. ಬಟ್ಟೆಗಳ ಮಟ್ಟಿಗೆ ನಾವು ಇಂದೇ ಸ್ವತಂತ್ರರಾಗುವದ
ಸುಲಭವಲ್ಲ. ನಯವಾದ ಬಟ್ಟೆಗಳು ಜೀವನಕ್ಕೆ ಆವಶ್ಯ
ವಾದುವಲ್ಲ. ಗುಡಾರ, ಜಮಖಾನಿ, ಕಂಬಳಿ, ಪಂಜೆ, ಧೋತರ
ಕೊಡೆಯರಿವೆ, ಸೀರೆ, ಖಣ ಇವು ನಮ್ಮಲ್ಲಿ ಹುಟ್ಟುತ್ತಿದ್ದುವು
ಈಗಲೂ ಹುಟ್ಟಿಸಬಹುದು. ಗಿರಿಣಿಯ ನೂಲು, ಪರದೇಶದ
ಬಣ್ಣಗಳು, ಇವುಗಳನ್ನು ಅವಲಂಬಿಸಿದ ನಮ್ಮ ಬಟ್ಟೆಗಳ
ನೇಕಾರರು ಇಂದು ಬಟ್ಟೆಗೇಡಾಗಿದ್ದಾರೆ. ಅರಳೆಕಾಯಿ ನೀಲ
ಮುಂತಾದ ವನಸ್ಪತಿಗಳಿಂದ ಬಣ್ಣವನ್ನು ತಯಾರಿಸಿಕೊಳ್ಳುವ
ಮತ್ತು ನಯವಾದ ನೂಲುತೆಗೆಯುವ ಕಲೆಯನ್ನು ನಮ್ಮವರು
ಕಲಿತುಕೊಳ್ಳಬೇಕು. ಅಲ್ಲಿಯ ವರೆಗೆ ಇದ್ದ ಬಟ್ಟೆಗಳನ್ನೆ
ಹೆಚ್ಚು ಆಸ್ಥೆಯಿಂದ ಬಳಿಸಿಕೊಳ್ಳಬೇಕು.

ಮುಖ್ಯ ಮಾತೆಂದರೆ—ನಮ್ಮ ಜೀವನದ ಬೇಡಿಕೆಗಳನ್ನು
ಪೂರೈಕೆಯು ಮಾನಕ್ಕೆ ಅನುಗೊಳಿಸಿ ಜೀವಿಸಲು ಹವಣಿಸಿದರೆ
ನಮ್ಮ ಮುಂದಿರುವ ಭೀಕರ ದೃಶ್ಯವು ಸೌಮ್ಯವೆನಿಸಬಹುದು.
ನಮ್ಮ ಹಳ್ಳಿಗಳು ಅಷ್ಟರಮಟ್ಟಿಗೆ ಸ್ವತಂತ್ರವಾಗಬಹುದು.

ವಿನಂತಿ

★

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ ಮಾಸಪತ್ರಿಕೆಯು ಪ್ರತಿತಿಂಗಳ ಕೊನೆಯವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳಿಸಬಹುದು.

ಜಾಹಿರಾತಿಗಾಗಿ

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿಾಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ-ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ-ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು-ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಡಿಸೆಂಬರ ೧೯೪೨ . Reg. No B. 3691

(ಇದರಲ್ಲಿ ಕನ್ನಡ ಬಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಟ್ರೇನಿಂಗ್ ಕಾಲೇಜದ ಚಟುವಟಿಕೆಗಳು	೧
೨.	ವಿದ್ಯಾರ್ಥಿ ಶಿಕ್ಷಕರ ಕೆಲಸಗಳ ಪ್ರದರ್ಶನ	೨
೩.	ಮಹಾಯುದ್ಧದೊಳಗಿನ ಮಹತ್ವದ ಸ್ಥಳಗಳು	೫
೪.	ಶಾರೀರಿಕ ಶಿಕ್ಷಣದ ಮೂಲ ತತ್ವಗಳು	೧೦
೫.	ಸುವರ್ಣ ನಮಯ	೧೬
೬.	ಶ್ರೀಕೈಲಾಸಯಾತ್ರೆ ಆಥವಾ ಶಿವಸಾಮ್ರಾಜ್ಯ ವರ್ಜನೆ ..	೨೦
೭.	ಪ್ರಕಟನೆಗಳು	೩೪
೮.	ಮಿಡಲ್ ಸ್ಕೂಲ್ ಸ್ಕಾಲರಶಿಪ್ಪ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆ	೩೭
೯.	ಪತ್ರಗಳ ಮುಖ್ಯಾಂಶಗಳು	೩೯
೧೦.	ಪಳಿಗಳ ಉದ್ಧಾರ (ಪ್ರಬುದ್ಧರಿಗಾಗಿ)	೪೧

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men Dharwar, at his Office.

ಜಿ ಸಂಚಿಕೆಗೆ ನಾಲ್ಕು ಅಣೆಗಳು. ವಾರ್ಷಿಕ ಚಂದಾ ಸಹಿತ ಒಂದು ರೂಪಾಯಿಗಳು ಮಾತ್ರ.

ಪುರೋಗಾಮಿ ಶಿಕ್ಷಕ

★

(ಲೇಖಕರು: ಶ್ರೀ. ಎಸ್. ಬಿ. ಗಜೇಂದ್ರಗಡ, ಬಿ.ಎ., ಬಿ.ಟಿ., ವಿಜಾಪುರ)

ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಇರುವ
ದೈನಂದಿನ ಅಭ್ಯಾಸದಲ್ಲಿ— ಕಲಿಸುವ ಕಾರ್ಯದಲ್ಲಿ ಅತ್ಯಂತ ಉಪ-
ಯುಕ್ತವಾಗುವಂತೆ, ವಿದ್ಯಾಖಾತೆಯ ಅಭ್ಯಾಸಪತ್ರಿಕೆ-
ಯನ್ನು ಸಂಪೂರ್ಣವಾಗಿ ಅನುಸರಿಸಿ ಬರೆಯಲ್ಪಟ್ಟಿದೆ.

ಪುಟಗಳು ೩೩೬ ★ **ಬೆಲೆ ೨-೪-೦**

ಇದು ಮೂರು ಮುಖ್ಯ ಭಾಗಗಳನ್ನೊಳಗೊಂಡಿದೆ.

(೧) ಶೈಕ್ಷಣಿಕ ಮನಃಶಾಸ್ತ್ರವನ್ನು ೧೫೫ ಪುಟಗಳಲ್ಲಿ ವಿವೇಚಿಸಿದೆ (೨) ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನೂ ಪ್ರತ್ಯಕ್ಷವಾಗಿ ಕಲಿಸುವ ಶಾಸ್ತ್ರೀಯ ಪದ್ಧತಿಯನ್ನೂ ವಿವರಿಸಿದೆ. (೩) ಆಧುನಿಕ ಶಿಕ್ಷಣ ಕ್ರಮದ ಮಹತ್ವ, ಅಂಗಗಳಾದ ಶಾರೀರಿಕ ಶಿಕ್ಷಣ, ಶಿಸ್ತು, ಸಂಘಟನೆ ಮೊದಲಾದ ವಿಷಯಗಳನ್ನು ತಿಳಿಸಿದೆ.

ಶಿಕ್ಷಣದ ಸರ್ವಾಂಗಗಳನ್ನೂ ಸುಲಲಿತವಾದ ಭಾಷೆಯಲ್ಲಿ ಒತ್ತಟ್ಟಿಗೇ ಸುಂದರವಾಗಿ ಮಂಡಿಸಿದ ಶಾಸ್ತ್ರೀಯ ಗ್ರಂಥವು

ಕನ್ನಡದಲ್ಲಿ ಇದೊಂದೇ!

★

ಕನ್ನಡ-ಇಂಗ್ಲಿಷ್ ಶಾಲೆ-ಕಾಲೇಜುಗಳ ಎಲ್ಲಾ ಪಠ್ಯಪುಸ್ತಕಗಳೂ ಇತರ ಪುಸ್ತಕ, ಸ್ಕೂಲ್ ಸ್ಟೇಶನರಿ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಸ್ಟೂಡೆಂಟ್ಸ್ ಓನ್ ಬುಕ್ ಡಿಪೋ, ಧಾರವಾಡ.

★

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೧	ಡಿಸೆಂಬರ್ ೧೯೪೨	ವರ್ಷ ೧೫. ಸಂ. ೯

ಟ್ರೇನಿಂಗ್ ಕಾಲೇಜಿನ ಚಟುವಟಿಕೆಗಳು

೧. **ಮಾನ್ಯ ಅತಿಥಿಗಳ ಆಗಮನ**— ಮ. ಗಾಂಧೀಜಿಯವರೂ ಪೂಜ್ಯ ರುಕ್ಮಿಣೀದೇವಿ ಅರುಂಡೇಲರೇ ಮೊದಲಾದ ಅವರ ಅನುಯಾಯಿಗಳೂ ಸೇರಿ ನಮ್ಮ ದೇಶದ ಶಿಕ್ಷಣದ ದಿಶೆಯನ್ನು ಬದಲಿಸಲು ಹವಣಿಸಿ 'ವರ್ಧಾ ಶಿಕ್ಷಣದ ಯೋಜನೆ' ಎಂಬ ಹೊಸದೊಂದು ಶಿಕ್ಷಣಕ್ರಮವನ್ನು ಪ್ರಚಾರದಲ್ಲಿ ತಂದಿರುವರಷ್ಟೆ? ಈ ಯೋಜನೆಯನ್ನು ಸಿದ್ಧಪಡಿಸುವದರಲ್ಲಿ ಅಬಂಡ ಭರತ ಬಂಡದ ಉತ್ತಮೋತ್ತಮ ಬುದ್ಧಿಶಕ್ತಿಯೆಲ್ಲವೂ ಕಾರ್ಯಮಾಡಿದೆಯೆಂದು ಹೇಳುವದುಂಟು. ಈ ಶಿಕ್ಷಣಕ್ರಮವನ್ನು ದೇಶದತುಂಬ ಹರಡುವದಕ್ಕಿಂತ ಮೊದಲು ಕೆಲಕೆಲವು ನಿಯಮಿತ ಕ್ಷೇತ್ರಗಳಲ್ಲಿ ಪ್ರಯೋಗ ನಡೆಯಿಸಿ ಅದರ ಫಲಿತವನ್ನು ಕಂಡುಕೊಂಡು ಮುಂದೆಸಾಗಬೇಕೆಂದು ಸರಕಾರವು ಕಾರ್ಯಾರಂಭಮಾಡಿತು. ಶಿಕ್ಷಕರನ್ನು ತಯಾರಿಸುವ ಕೇಂದ್ರಗಳನ್ನೂ ಆ ಶಿಕ್ಷಕರು ಕಾರ್ಯ ಮಾಡುವ ನಿಯಮಿತ ಕ್ಷೇತ್ರಗಳನ್ನೂ ಮೊದಲು ಗೊತ್ತುಪಡಿಸಲಾಯಿತು. ಅಪರಂತೆ ನಮ್ಮ ಇಲಾಖೆಯಲ್ಲಿಯೂ ಅನೇಕ ಕೇಂದ್ರಗಳು ಸ್ಥಾಪಿತವಾಗಿದ್ದು ಧಾರವಾಡ ಕೇಂದ್ರವು ಕರ್ನಾಟಕದ ಶಿಕ್ಷಕರ ಸಲುವಾಗಿ ಪ್ರಾರಂಭಿಸಲ್ಪಟ್ಟಿದೆ. ಮತ್ತು ಪ್ರತಿಜಿಲ್ಲೆಯಲ್ಲಿ ಕೆಲವೊಂದು ಪ್ರದೇಶದೊಳಗಿನ ಶಾಲೆಗಳಲ್ಲಿ ಈ ಶಿಕ್ಷಣಕ್ರಮವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ.

ಈಜಿಗೆ ಈ ಶಿಕ್ಷಕರನ್ನು ತಯಾರಿಸುವ ಕೇಂದ್ರಗಳಲ್ಲಿಯೂ ಅವರು ಕಾರ್ಯನಡೆಯಿಸಿರುವ ನಿಯಮಿತ ಕ್ಷೇತ್ರದಲ್ಲಿಯೂ ಯಾವ ರೀತಿಯಿಂದ ಕಾರ್ಯನಡೆದಿದೆಯೆಂಬುದನ್ನು ಪ್ರತ್ಯಕ್ಷ ನೋಡಿ ಈ ಯೋಜನೆಯ ಮುಂದಿನ ಕಾರ್ಯವಿಸ್ತಾರದ ವಿಷಯಕ್ಕೆ ತಕ್ಕ ಸಲಹೆಯನ್ನು ಕೊಡುವದಕ್ಕೆಂದು ಹಿಂದುಸ್ತಾನ ಸರಕಾರದ ಶಿಕ್ಷಣಖಾತೆಯ ಕಮಿಶನರರೂ ಮತ್ತೆ ಕೆಲವು ಸದಸ್ಯರೂ ಇರುವ ಒಂದು ಸಮಿತಿಯನ್ನು ಸರಕಾರದವರು ನಿಯಮಿಸಿರುವರು. ಅವರು ನಮ್ಮ ಇಲಾಖೆಯಲ್ಲಿಯ ಬೇರೆಬೇರೆ ಶಿಕ್ಷಕರ ಶಿಕ್ಷಣದ ಕೇಂದ್ರಗಳನ್ನೂ ಅವರ ಕಾರ್ಯಕ್ಷೇತ್ರದೊಳಗಿನ ಶಾಲೆಗಳನ್ನೂ ಸಂದರ್ಶಿಸಿ ಅಲ್ಲಿಯ ಕಾರ್ಯಕಲಾಪಗಳನ್ನು ನಿರೀಕ್ಷಿಸುವ ಮತ್ತು ಪ್ರಜಾಪ್ರಮುಖರ ಅಭಿಪ್ರಾಯಗಳನ್ನು ಅರಿತುಕೊಳ್ಳುವ ಕಾರ್ಯಕ್ರಮವನ್ನು ಕೈಕೊಂಡು ಕಳೆದ ೨೭ನೆಯ ತಾರೀಖಿನ ದಿನ ಧಾರವಾಡಕ್ಕೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ಅವರು ನಮ್ಮ ಟ್ರೇನಿಂಗ್ ಕಾಲೇಜವನ್ನೂ ಪ್ರಾಕ್ಟಿಸಿಂಗ್ ಸ್ಕೂಲನ್ನೂ ಸಂದರ್ಶಿಸಿ ಅಲ್ಲಿ ನಡೆದಿರುವ ಕಾರ್ಯಕಲಾಪಗಳನ್ನೆಲ್ಲ ಕೂಲಂಕಷವಾಗಿ ನೋಡಿ ಆನಂದ ಪ್ರದರ್ಶನಮಾಡಿದರು.

---

೨. ವಿದ್ಯಾರ್ಥಿ ಶಿಕ್ಷಕರ ಕೆಲಸಗಳ ಪ್ರದರ್ಶನ

ಲೇಖಕರು:— ಬ. ವಿ. ಕುರಬೆಟ್ಟ, ಟ್ರೇ. ಕಾ. ದ ೨ನೆಯ ವರ್ಷದ ವಿದ್ಯಾರ್ಥಿ

ಟ್ರೇನಿಂಗ್ ಕಾಲೇಜದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ವಿದ್ಯಾರ್ಥಿ ಶಿಕ್ಷಕರು ಮಾಡಿದ ನಕಾಶ, ಮಾಡೆಲ್ಲು, ಕೈಕೆಲಸ, ಶಿಕ್ಷಣೋಪಕರಣಗಳು ಮುಂತಾದ ಕೆಲಸಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಪ್ರಾಕ್ಟಿಸಿಂಗ್ ಸ್ಕೂಲಿನ ಶಿಕ್ಷಕರೂ ವಿದ್ಯಾರ್ಥಿಗಳೂ ಮಾಡಿದ ಕೆಲಸಗಳನ್ನು ಪ್ರಾಕ್ಟಿಸಿಂಗ್ ಸ್ಕೂಲಿನ ಮುಖ್ಯ ಕಟ್ಟಡದಲ್ಲಿ ಇಟ್ಟಿದ್ದರು. ಧಾರವಾಡ ಊರೊಳಗಿನ ಎಲ್ಲ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳೂ ಇನ್ನನೇಕರೂ ಇದನ್ನು ನೋಡಿ ಆನಂದ ಪಟ್ಟರು. ಪ್ರೇಕ್ಷಕರಿಗಾಗಿ ಅನುಗೊಳಿಸಿದ ಈ ಶಿಕ್ಷಣೋಪಕರಣಗಳೇ ಮೊದಲಾದವುಗಳ ವಿವರಣೆಯನ್ನು ಮುಂದೆ ಹೇಳಲಾಗಿದೆ.

ಟ್ರೇನಿಂಗ್ ಕಾಲೇಜದ ಜನರಲ್‌ಹಾಲಿನ ಹಿಮ್ಮಗ್ಗಲಿಗಿರುವ ತೋಟವನ್ನು ಎಡಪಾರ್ಶ್ವದಿಂದ ಒಳಸೇರಲು ಕ್ರಮವಾಗಿ ರಚಿಸಿದ ಹಲವು ನಕಾಶೆಗಳ

ಸಾಲುಗಳು ಕಂಗೊಳಿಸುತ್ತಿದ್ದವು. ಬ್ರಿಟಿಷ ಸಾಮ್ರಾಜ್ಯದ ಬೆಳವಣಿಗೆಯ ನಕಾಶೆಯಲ್ಲಿ— ಬ್ರಿಟಿಷರು ಯಾವ ಕಾಲಕ್ಕೆ ಎಷ್ಟುಭಾಗ ಭಾರತವನ್ನು ವಶಪಡಿಸಿಕೊಂಡರೆಂಬುವದು ಸ್ಪಷ್ಟವಾಗಿ ಕಾಣುತ್ತಿತ್ತು. ಮೊಗಲ ಸಾಮ್ರಾಜ್ಯದ ಬೆಳವಣಿಗೆಯ ನಕಾಶೆಯು ಮುಸಲ್ಮಾನರ ಆಕ್ರಮಣವನ್ನು ತೋರಿಸುತ್ತಿತ್ತು. ಹಿಂದುಸ್ತಾನದ ಭಾಷೆಗಳ ನಕಾಶೆಯಲ್ಲಿ— ಕಾಶ್ಮೀರಿ, ಪಂಜಾಬಿ, ಸಿಂಧೀ, ಲಹಾಂಡಾ, ಬಲೂಚಿ, ರಾಜಸ್ತಾನಿ, ಗುಜರಾಥಿ, ಪಹಾಲಿ, ಹಿಂದುಸ್ತಾನಿ, ಬಂಗಾಲಿ, ಆಸಾಮಿ, ಮರಾಠಿ, ತೆಲಗು, ಕನ್ನಡ, ತಮಿಳು, ಮಲಯಾಳ, ತುಳು, ಉರಿಯ ಭಾಷೆಗಳು ಹಿಂದುಸ್ತಾನದ ಯಾವ ಯಾವ ಭಾಗಗಳಲ್ಲಿ ನಡೆಯುತ್ತವೆಂಬುವದನ್ನು ಬೇರೆ ಬೇರೆ ಗುರುತುಗಳಿಂದ ತೋರಿಸಲಾಗಿತ್ತು. ರಾಜಕೀಯ ದೃಷ್ಟಿಯಿಂದ ೧೫ ಭಾಗಗಳನ್ನು ತೋರಿಸಿದ ನಕಾಶೆ, ಹಿಂದುಸ್ತಾನದಲ್ಲಿಯ ರೇಲ್ವೆ, ವಿಮಾನಮಾರ್ಗಗಳನ್ನು ತೋರಿಸುವ ನಕಾಶೆ, ಭಾರತದ ನಾನಾತರ ಬೆಳೆಗಳನ್ನು ತೋರಿಸುವ ನಕಾಶೆ, ಬೆಳೆಗಳು ಬರಲು ಕಾರಣವಾದ ಮಳೆಯಮಾನವನ್ನೂ ಸೃಷ್ಟಿದೇವತೆಯ ನಿಜಸ್ವರೂಪವನ್ನು ರೂಪಾಂತರಿಸುವ ಪ್ರಾಕೃತಿಕಸ್ವರೂಪವನ್ನೂ ತೋರಿಸುವ ನಕಾಶೆ ಇವೆಲ್ಲ ಹಿಂದುಸ್ತಾನದ ವೈಖರಿಯನ್ನು ವಿಶಾಲರೂಪದಿಂದ ಪ್ರಕಟಿಸುತ್ತಿದ್ದವು.

ತರತರದ ಬಣ್ಣದ ಮಟ್ಟಿಗಳನ್ನು ಉಪಯೋಗಿಸಿ ತಯಾರಿಸಿದ ಹಲವು ವಿಷಯ ವಿವೇಚನೆಯುಳ್ಳ ಹಿಂದುಸ್ತಾನದ ನಕಾಶೆಗಳನ್ನು ನೋಡಿಕೊಂಡು ಮುಂದೆ ಸಾಗಲು ಜಾಗತಿಕ ಯುದ್ಧದ ಭೀಕರತೆಯನ್ನು ಕಣ್ಣೆದುರಿಗೆ ತಂದು ಕೊಡುವ ಜಗತ್ತಿನಲ್ಲಿಯ ಮಿತ್ರರಾಷ್ಟ್ರಪಾಗೂ ಅಚ್ಚಿನರಾಷ್ಟ್ರಗಳ ನಕಾಶೆಯು ಎದುರಿಗೆ ಬರುತ್ತಿತ್ತು. ಅದು ರಶಿಯಾ, ಉತ್ತರ-ಅಮೇರಿಕಾ, ದಕ್ಷಿಣಅಮೇರಿಕಾ, ಬ್ರಾಝಿಲ್, ಗ್ರೀನಲ್ಯಾಂಡ, ಆಫ್ರಿಕಾ, ಆಸ್ಟ್ರೇಲಿಯಾ, ಏಶಿಯಾ, ನ್ಯೂಝಿಲ್ಯಾಂಡ ಮುಂತಾದ ರಾಷ್ಟ್ರಗಳನ್ನು ಕೂಡಿಕೊಂಡು ಮಿತ್ರರಾಷ್ಟ್ರವು ಯುರೋಪ, ಜಪಾನ, ಈಸ್ಟ ಇಂಡೀಜ ದೇಶಗಳನ್ನು ಕೂಡಿಕೊಂಡಿರುವ ಅಚ್ಚಿನ ರಾಷ್ಟ್ರದೊಂದಿಗೆ ಯುದ್ಧಮಾಡುತ್ತಿರುವ ಜಗತ್ತಿನ ದೃಶ್ಯವು ಏಕಕಾಲಕ್ಕೆ ದೃಷ್ಟಿಪಥದಲ್ಲಿ ನಿಲ್ಲಿಸುತ್ತಿತ್ತು. ಇಡೀ ಭೂಮಂಡಲದ ಸ್ವಾಭಾವಿಕ ವಿಭಾಗಗಳುಳ್ಳ ನಕಾಶೆ, ಆಫ್ರಿಕೆಯಲ್ಲಿ ಕಾಂಗೊ ನದಿಯ ಕೊಳ್ಳದಲ್ಲಿರುವ ಆನೆಗಳ ಹಿಂಡು, ಹುಲ್ಲುಗಾವಲಿನಲ್ಲಿಯ ಕುರಿಗಳ ಹಿಂಡು, ಸಹರಾದಲ್ಲಿಯ ಒಂಟೆಗಳು, ಉದ್ದ ಗೋಣುಳ್ಳ ಶಹಾಮೃಗಗಳು ಇವನ್ನೆಲ್ಲ ತೋರಿಸುವ ನಕಾಶೆ ಇವು, ನಯನ ಮನೋಹರವಾಗಿದ್ದವು. ಸಹರಾದಲ್ಲಿಯ ಓಯಾಸಿಸಗಳು, ಕಿಂಬರ್ಲೆಯಲ್ಲಿಯ ವಜ್ರದ ಖಣಿಗಳು, ಬಂಗಾರದ ಖಣಿಗಳು ಇವನ್ನು ಆಫ್ರಿಕೆಯ ನಕಾಶೆಯಲ್ಲಿ

ಸೇರಿಸಲಾಗಿತ್ತು. ನಾಯಿಲ ನದಿಯ ಮುಖದ ಹತ್ತರವಿರುವ ಅಲೇಕ್ಷಾಂಡ್ರಿಯಾದಿಂದ ಹೊರಟು ಆಫ್ರಿಕೆಯನ್ನು ಸುತ್ತುಹಾಕಿ ಡಾಕರ ಮೇಲೆ ಹಾಯ್ದು ತೀರ ದಕ್ಷಿಣಕ್ಕಿರುವ ಕೇಪಟಾವುನದ ವರೆಗೆ ಹೋಗುವ ಅಲ್ಲಿಂದ ಆಸ್ಟ್ರೇಲಿಯಾಕ್ಕೆ ಹೋಗುವ ವಿಮಾನಮಾರ್ಗವೂ ಅದರಲ್ಲಿತ್ತು. ಆಸ್ಟ್ರೇಯಾದ ನಕಾಶೆಯಲ್ಲಿ ಜಗತ್ತಿನೊಳಗೆ ಪ್ರಖ್ಯಾತಿಹೊಂದಿದ ಕುರಿಗಳ ದಡ್ಡಿ ಮತ್ತು ಬಂಗಾರ, ಕಲ್ಲಿದ್ದಲಿ, ಕಬ್ಬಿಣ, ಇವುಗಳ ಖಣಿಗಳು ಹಣ್ಣು ಹಂಪಲಗಳ ಬೆಳೆಯುವ ಸ್ಥಳ ಇವನ್ನು ತೋರಿಸಿದ್ದರು. ಪರ್ಥ, ಎಡಿಲೇಡ, ಲಿಸ್ಬನ್ ಮತ್ತು ಡಾರ್ವಿನ ವಿಮಾನ ನಿಲ್ದಾಣಗಳು ಜಾವಾ ಸುಮಾತ್ರಾ ದ್ವೀಪಗಳೊಳಗಿಂದ ಹಾಯ್ದು ಸಿಂಗಾಪುರ ಬಂದರಕ್ಕೆ ಹೋಗುವ ದಾರಿ ಇವನ್ನೂ ಆ ನಕಾಶೆಗಳಲ್ಲಿ ನೋಡಬಹುದಾಗಿತ್ತು. ಮಾದರಿಯ ಹಳ್ಳಿಯ ರಚನೆ ಕನ್ನಡನಾಡಿನ ಗತವೈಭವವನ್ನು ಜ್ಞಾಪಕಕ್ಕೆ ತಂದು ಕೊಡುವ ವಿಶಾಲಕರ್ನಾಟಕದ ಮಾಡೆಲ್ಲು ಧಾರವಾಡ ಸ್ಟೇಶನದ ದೃಶ್ಯ ಇವೂ ಕೂಡ ಮನೋಹರವಾಗಿದ್ದವು.

ಟ್ರೇನಿಂಗ್ ಕಾಲೇಜದ ವಸ್ತುಸಂಗ್ರಹಾಲಯದಲ್ಲಿ ಒಂದೆಡೆಗೆ ಸಾಲಾಗಿಟ್ಟ ನಾರಿನಿಂದ ಮಾಡಿದ ಒಕ್ಕಲತನ ಸಾಹಿತ್ಯಗಳು, ಕಟ್ಟಿಗೆಯಿಂದ ಮಾಡಿದ ಸಿಂಹ, ಶಾರ್ದೂಲ, ಆನೆ, ಕುದುರೆ, ಪಕ್ಷಿಗಳ ಸಮೂಹವು, ಈಗ ತಾನೇ ಪಕ್ವವಾಗಿ ಗಿಡಗಳಿಂದ ಉದುರಿ ಬಿದ್ದಿರುವವೋ ಅನ್ನುವಂತೆ ಕಂಗೊಳಿಸುವ ಬಾಳೆ, ಕಿತ್ತಳೆ, ದ್ರಾಕ್ಷಿ, ಅಂಜೀರು, ಡಾಳಿಂಬ, ಅನಾನಸ ಮುಂತಾದ ಬಣ್ಣಕೊಟ್ಟ ಕಟ್ಟಿಗೆಯ ಹಣ್ಣುಗಳು ಇವು ಒಡೆದು ಕಾಣುತ್ತಿದ್ದವು. ಬಲಗಡೆಗೆ ಕವಾಟಿನಲ್ಲಿಟ್ಟ ಕಾಗದ ಮತ್ತು ನೂಲಿನಿಂದ ಮಾಡಿದ ಹೂಮಾಲೆಗಳೂ, ಚಿತ್ರವಿಚಿತ್ರ ಅರಿವೆಗಳಿಂದ ರಚಿಸಿದ ಗುಚ್ಛಗಳೂ ಪ್ರೇಕ್ಷಕರ ಮನವನ್ನು ಸೆಳೆಯುತ್ತಿದ್ದವು. ಮುಂದಕ್ಕೆ ಸಾಗಲು ಬಾಲಕರ ಆಟಿಗೆಯ ಸಾಮಾನುಗಳ ಗುಂಪು, ಅವಕ್ಕೆ ಹೊಂದಿ ಹಸ್ತ-ಕೌಶಲ್ಯವನ್ನು ಪ್ರಕಟಿಸುವ ಪುರಾತನರ ಶಿಲಾಮೂರ್ತಿಗಳು ಕಂಡುಬರುತ್ತಿದ್ದವು. ಮುಂದೆ ಸಾಗಲು ಭೌಗೋಲಿಕ ನಕಾಶ ಚಿತ್ರಪಟಗಳಿಂದೊಪ್ಪುವ ಕೋಣೆಯಲ್ಲಿ ವಸ್ತುಸಂಗ್ರಹವೂ ನೈಸರ್ಗಿಕ ದೃಶ್ಯಗಳೂ ಒಂದೇ ಸ್ಥಳದಲ್ಲಿ ನೆಲಸಿವೆಯೋ ಎನ್ನುವಂತೆ ಅಂದವಾಗಿ ಒಪ್ಪುತ್ತಿದ್ದವು. ಈ ಬೆಡಗಿನ ತಾಣವನ್ನು ನೋಡಿಕೊಂಡು ಹಾಗೆಯೇ ಸಾಗಲು ಐತಿಹಾಸಿಕ ಚಿತ್ರಪಟ ನಕಾಶಗಳ ಕೋಣೆಯು ಕಂಗೊಳಿಸುವದು. ಅನಾರ್ಯರು ಆರ್ಯರು ಇವರನ್ನು ಮೊದಲುಗೊಂಡು ಇಲ್ಲಿಯ ವರೆಗೆ ಹಿಂದುಸ್ತಾನದಲ್ಲಿ ಆಳಿದ ವೀರರ ಚಿತ್ರಗಳು ಬುದ್ಧ ವಿದ್ಯಾರಣ್ಯರ ಚಿತ್ರಗಳು, ಮೊಗಲರಾಜರು, ಮರಾಠರು ಮತ್ತು ಪೇಶವೆಯರು ಯಾವತ್ತು ಗವ್ಹರ್ನರ ಜನರಲ್‌ರು ಇವರೆಲ್ಲರ ಚಿತ್ರಗಳು ಮತ್ತು ನಕಾಶೆಗಳು

ಹೀಗೆ ಪ್ರಾಚೀನ ಕಾಲದಿಂದ ಅರ್ವಾಚೀನ ಕಾಲದ ವರೆಗಿನ ಮುಖ್ಯ ಮುಖ್ಯ ಚಿತ್ರಗಳು ಗೋಡೆಯ ಮೇಲೆ ತೂಗಾಡುತ್ತಿರುವವು. ಅನೇಕ ತರದ ಶಿಲೆಗಳ ಸಂಗ್ರಹವೂ ಬೇರೆ ಬೇರೆ ತರದ ಹಳೆ ಹೊಸ ನಾಣ್ಯಗಳ ಸಂಗ್ರಹವೂ ಸರಿಯಾಗಿ ಇಡಲ್ಪಟ್ಟಿರುವವು. ಐತಿಹಾಸಿಕ ಚಿತ್ರಪಟಗಳನ್ನು ನೋಡಿಕೊಂಡು ಮುಂದೆ ಸಾಗಲು ಭಾಷೆಯನ್ನು ಕಲಿಸುವದಕ್ಕೆ ಶಿಕ್ಷಕ ವಿದ್ಯಾರ್ಥಿಗಳು ತಯಾರಿಸಿದ ಬಗೆಬಗೆಯ ಕಥೆಗಳ ಚಿತ್ರ ಹಾಗೂ ವಾಚನಪಟಗಳು, ಗಣಿತದ ಪಟಗಳು, ಹಿಂದುಸ್ತಾನಿ ಭಾಷೆಯ ಬಗ್ಗೆ ತಯಾರಿಸಿದ ಪಟಗಳು, ಪದಾರ್ಥವಿಜ್ಞಾನ-ಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ ಪಟಗಳು ಇವೆಲ್ಲ ಈ ವಸ್ತುಸಂಗ್ರಹಾಲಯದಲ್ಲಿ ಒಡೆದುಕಾಣುತ್ತಿದ್ದವು.

ಪ್ರದರ್ಶನ ಮಂದಿರದ ಚಂದವನ್ನು ನೋಡಿ ಚಕಿತರಾದ ಪ್ರೇಕ್ಷಕರು ಪೈಂಟಿಂಗ್ ಹಾಲಿಗೆ ಬರಲು, ನಾನಾಬಗೆಯ ಮಣ್ಣಿನಿಂದ ತಯಾರಿಸಿದ ಎರಡು ರತ್ನಗಂಬಳಿಗಳು ಅಂದವಾಗಿ ತೋರುತ್ತಿದ್ದವು. ಒಂದು ರತ್ನಗಂಬಳಿಯ ಮೇಲೆ ಗೋಪಾಲಕೃಷ್ಣನ ಅರ್ಧ ಚಿತ್ರವೂ ಮತ್ತೊಂದರ ಮೇಲೆ ಭಾರತಮಾತೆಯ ಚಿತ್ರವೂ ಕಂಗೊಳಿಸುತ್ತಿದ್ದವು. ಈ ರತ್ನಗಂಬಳಿಗಳನ್ನು ನೋಡಿದ ಎಷ್ಟೋ ಪ್ರೇಕ್ಷಕರು ಇವು ನಿಜವಾದ ರೇಶಿಮೆಯ ರತ್ನಗಂಬಳಿಗಳೇ ಎಂದು ಭಾವಿಸುತ್ತಿದ್ದರು. ರತ್ನಗಂಬಳಿಗಳ ಹಸ್ತಕೌಶಲ್ಯವನ್ನು ನೋಡಿ ಬೆರಗಾಗಿ ಮುಂದೆ ಪ್ರಾಕ್ಟಿಸಿಂಗ್ ಸ್ಕೂಲಿನ ಕಟ್ಟಡಕ್ಕೆ ಹೋಗಲು, ಪ್ರಾಕ್ಟಿಸಿಂಗ್ ಸ್ಕೂಲಿನ ವಿದ್ಯಾರ್ಥಿಗಳು ತಯಾರಿಸಿದ ಕೈಕೆಲಸಗಳು, ಚಿತ್ರಪಟಗಳು, ನಕಾಶೆಗಳು ಇವೆಲ್ಲ ಪ್ರೇಕ್ಷಕರ ಮನವನ್ನಾಕರ್ಷಿಸುತ್ತಿದ್ದವು. ಮುದ್ದುಮಕ್ಕಳ ಹಸ್ತಕೌಶಲ್ಯವನ್ನು ನೆರೆ ಹಸನ್ಮುಖಿಗಳಾಗಿ ನೋಡುತ್ತಿದ್ದರು.

ಮಹಾಯುದ್ಧದೊಳಗಿನ ಮಹತ್ವದ ಸ್ಥಳಗಳು

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಉರಾಲ್ ಪ್ರದೇಶ— ರಶಿಯದ ಸಾಮ್ರಾಜ್ಯವು ಬಹು ವಿಸ್ತಾರವಾದುದೆಂದು ಹಿಂದೆ ಹೇಳಿದೆಯಷ್ಟೆ ? ಬಹು ವಿಶಾಲವಾದ ಆ ಸಾಮ್ರಾಜ್ಯದಲ್ಲಿ ಕಾಕೇಶಸ್ ಪ್ರದೇಶ ಯುಕ್ರೇನ ವಿಭಾಗ ಇವಷ್ಟೇ ಮಹತ್ವದ ವಿಭಾಗಗಳಲ್ಲ; ಉರಾಲ್ ಪ್ರದೇಶವೂ ಕೂಡ ಅದಕ್ಕೆ ಅತ್ಯುಪಯುಕ್ತವಾದ ಸ್ಥಾನವಿಭಾಗಗಳಲ್ಲಿ ಒಂದಾಗಿರುವದು.

ಜರ್ಮನಿಯು ಯುಕ್ರೇನ ಪ್ರದೇಶವನ್ನು ವಶಪಡಿಸಿಕೊಂಡು ಕಾಕೇಶ
ದತ್ತ ಧಾವಿಸಿರುವದನ್ನು ನಮ್ಮ ಪಾಚಕರು ಬಲ್ಲರು. ಈ ಪ್ರದೇಶಗಳ
ಮೇಲ್ತರದ ಗೋದಿ, ಎಣ್ಣೆಯ ಸಂಗ್ರಹ ಇವು ಇರುವದು ಸರ್ವವಿಶ್ರುತವಾ
ಸಂಗತಿ. ಅದರಂತೆಯೆ ಈ ವಿಭಾಗಗಳಲ್ಲಿ ಹಲವು ಯಾಂತ್ರಿಕ ಸಾಧನಗಳನ್
ತಯಾರಿಸುವ ಕಾರಖಾನೆಗಳು ಇದ್ದವು. ರಶಿಯಾದ ಕುಶಲ ಸಂಚಾಲಕನಾ
ಸ್ಟಾಲಿನ್ನನು ಯುದ್ಧಾರಂಭಕ್ಕಿಂತ ಎಷ್ಟೋ ವರ್ಷಗಳ ಮೊದಲೇ ಯುದ್ಧ
ಸಾಮಗ್ರಿಗಳೇ ಮೊದಲಾದವುಗಳನ್ನು ತಯಾರಿಸುವ ಮಹತ್ವದ ಕಾರಖಾನೆಗಳನ್
ಪ್ರಕೃತದ ರಣಭೂಮಿಯಿಂದ ೮೦೦ ಮೈಲು ದೂರದಲ್ಲಿರುವ ಉರಾಲ್ ಪರ್ವ
ಪ್ರದೇಶಕ್ಕೆ ಸಾಗಿಸಿಬಿಟ್ಟಿದ್ದನು. ೧೯೩೦ರಿಂದ ೪೦ ರ ವರೆಗಿನ ಹತ್ತು ವರ್ಷಗ
ಅವಧಿಯಲ್ಲಿ ರಶಿಯವು ಇಲ್ಲಿ ಹಲವು ಪ್ರಚಂಡವಾದ ಕಾರಖಾನೆಗಳನ್ನು ಸ್ಥಾಪ
ತಕ್ಕ ಪೂರ್ವಸಿದ್ಧತೆಯನ್ನು ಮಾಡಿಕೊಂಡಿತ್ತು. ಮತ್ತು ಯುದ್ಧಾರಂಭವಾ
ಒಳಿಕ ಪಶ್ಚಿಮ ಭಾಗದ ಮಹತ್ವದ ಕಾರಖಾನೆಗಳನ್ನೆಲ್ಲ ಪೂರ್ವಕ್ಕೆ ಸಾಗಿ
ಬಿಟ್ಟಿರುವದು. ಆದುದರಿಂದಲೇ ಈ ವರ್ಷದ ಚಳಿಗಾಲದಲ್ಲಿ ಜರ್ಮನಿಯ
ತಾನು ಈ ಮೊದಲೇ ಆಕ್ರಮಿಸಿಕೊಂಡಿದ್ದ ಹಲವು ಮಹತ್ವದ ಠಾಣ್ಯಗಳನ್
ಕಳೆದುಕೊಂಡು ಹಣ್ಣುಗಾಯಿ ನೀರುಗಾಯಿಯಾಗಹತ್ತಿರುವದು.

ರಶಿಯನ್ನರು ಉರಾಲ ಪರ್ವತದ ಸುಮಾರು ೫೦೦ ಚೌರಸ ಮೈಲ
ಪ್ರದೇಶದಲ್ಲಿ ಈ ಕಾರಖಾನೆಗಳನ್ನು ನಡೆಯಿಸಿರುವರು. ಕಬ್ಬಿಣ, ತಾಮ್ರ, ಸೀಸ
ಮ್ಯಾಂಗೆನೀಜ, ಪ್ಲಾಟಿನಮ್, ಸತುವು, ಪೆಟ್ರೋಲ ಮುಂತಾದ ಖನಿಜಗಳು
ಪ್ರದೇಶದಲ್ಲಿ ವಿಪುಲವಾಗಿ ಉಪಲಬ್ಧವಾಗಿರುವವು. ಆದರೆ ಇಲ್ಲಿ ಕಲ್ಲಿದ್ದಲಿಯ
ಮಾತ್ರ ತುಸು ಕಡಿಮೆ. ಆದರೆ ದೂರದರ್ಶಿಯಾದ ಸ್ಟಾಲಿನ್ನನ ವಿಶ್ವಕರ್ಮ
ಸೃಷ್ಟಿಯ ಜಾಣ್ಮೆಯಿಂದಲೂ ಕಾರ್ಯಕುಶಲರೂ ಶ್ರಮಸಹಿಷ್ಣುಗಳೂ ಆ
ರಶಿಯನ್ ಕೂಲಿಕಾರರ ಪರಿಶ್ರಮದಿಂದಲೂ ಇಲ್ಲಿಯ ಕಬ್ಬಿಣದ ಕಾರಖಾ
ಗಳಿಗೂ ಹೊರಗಿನ ಕಲ್ಲಿದ್ದಲಿಯ ಕಣಿಗಳಿಗೂ ತಕ್ಕ ಸಂಬಂಧಗಳನ್ನು ಕಲ್ಪಿ
ಕೊಂಡರು. ಆದುದರಿಂದ ಈ ಉರಾಲ್ ಪ್ರದೇಶದಲ್ಲಿ ಪ್ರತಿದಿವಸ ಆರೇಳ
ಸಾವಿರ ಟನ್ನುಗಳಷ್ಟು ಉಕ್ಕು ತಯಾರಾಗುವಂಥ ಪ್ರಚಂಡ ಕಾರಖಾನೆಗಳ
ಸಿದ್ಧವಾಗಿವೆ. ಈ ಪ್ರದೇಶದ ಸುತ್ತಲು ಉಕ್ಕು ಕಬ್ಬಿಣಗಳಿಂದ ಸಿದ್ಧವಾಗುವಂ
ಯುದ್ಧಸಾಮಗ್ರಿಗಳನ್ನು ಸಿದ್ಧಪಡಿಸುವ ಚಿಕ್ಕ ದೊಡ್ಡ ಕಾರಖಾನೆಗಳ ಜಾಲ
ಪಸರಿಸಿರುವದು.

ಉರಾಲ್ ಪ್ರದೇಶದ ಸುತ್ತಲೂ ಸಾವಿರಾರು ಚೌರಸ ಮೈಲು ಪ್ರದೇಶದಲ್ಲಿ
ಉತ್ತಮವೂ ಫಲದ್ರೂಪವೂ ಆದ ಭೂಮಿಯಿರುವದು. ಅಲ್ಲಿ ಗೋದಿಯ

ಸಮೃದ್ಧಿಯಾಗಿ ಬೆಳೆಯುವದು. ಈ ಪ್ರದೇಶವನ್ನು ಹಲವು ಉದ್ಯೋಗಗಳ ಕೇಂದ್ರವಾಗಿ ಮಾರ್ಪಡಿಸುವದಕ್ಕಾಗಿ ಸ್ಟಾಲಿನ್ನನು ವಿಶ್ವಪ್ರಯತ್ನವನ್ನು ಮಾಡ ಬೇಕಾಯಿತು. ೧೯೩೨ನೇ ಇಸ್ವಿಯಲ್ಲಿ ರಶಿಯನ್ ರಾಷ್ಟ್ರದ ಉತ್ಪನ್ನದ ಅರ್ಧ ಕ್ಕಿಂತ ಹೆಚ್ಚು ಭಾಗವನ್ನು ಈ ಪ್ರದೇಶದಲ್ಲಿ ಹಲವು ಔದ್ಯೋಗಿಕ ಕೇಂದ್ರಗಳನ್ನು ಸ್ಥಾಪಿಸುವದರಲ್ಲಿಯೇ ವೆಚ್ಚ ಮಾಡಿದನಂತೆ! ಭಾರವಾದ ಟ್ಯಾಂಕುಗಳು, ಹಡಗುಗಳ ಬೇರೆ ಬೇರೆ ಭಾಗಗಳು, ಜಲಾಂತರ್ಗಾಮಿ ನಾವೆಗಳು, ನಾನಾತರದ ತೋಪುಗಳು ಇವನ್ನು ತಯಾರಿಸುವ ಭವ್ಯ ಕಾರಖಾನೆಗಳು ಈ ಭಾಗದಲ್ಲಿವೆ.

ಈ ಉರಾಲ್ ಪ್ರದೇಶದಲ್ಲಿ ಬಹು ವಿಸ್ತಾರವಾದ ಭಾಗದಲ್ಲಿ ಕಲ್ಲೆಣ್ಣೆಯ ಕಣಿಗಳನ್ನು ಪ್ರಾರಂಭಿಸಿದ್ದಾರೆ. ಉಫಾ ಎಂಬಲ್ಲಿ ೧೯೪೦ನೇ ಇಸ್ವಿಯಲ್ಲಿ ಗ್ಯಾಸೋಲೀನವನ್ನು ತಯಾರಿಸುವ ಕಾರಖಾನೆಯನ್ನು ಪ್ರಾರಂಭಿಸಿರುವರು. ಅಲ್ಲಿ ೫ ಲಕ್ಷ ಟನ್ನು ಅತ್ಯುತ್ತಮ ಪ್ರಕಾರದ ಗ್ಯಾಸೋಲೀನವು ಹುಟ್ಟಬಹುದು. ಓಲ್ಗಾ ನದಿಯ ದಂಡೆಯ ಮೇಲಿರುವ ಸಾರಾಟೋವ್ಹ ಎಂಬಲ್ಲಿ ಇನ್ನೊಂದು ಗ್ಯಾಸೋಲೀನ್ ತಯಾರಿಸುವ ಭವ್ಯ ಕಾರಖಾನೆಯುಂಟು. ಉಫಾ ಎಂಬಲ್ಲಿ ರಶಿಯನ್ನರು ಬಹು ದೊಡ್ಡ ಮೋಟಾರಿನ ಕಾರಖಾನೆಯನ್ನು ನಡೆಯಿಸಿರುವರು.

೩. **ಸೈಬೀರಿಯಾ**:— ರಶಿಯದ ಸಾಮ್ರಾಜ್ಯದಲ್ಲಿ ಏಶಿಯಾಖಂಡ-ದೊಳಗಿನ ಸೈಬೀರಿಯಾವು ಇನ್ನೊಂದು ಮಹತ್ವದ ಪ್ರದೇಶವು. ಇಲ್ಲಿ ನಾನಾ ಬಗೆಯ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಕಾರಖಾನೆಗಳಿವೆ. ವಿಮಾನದ ಎಂಜಿನುಗಳು, ಅಗ್ನಿಜನಕ ಬಾಂಬುಗಳು, ಪ್ರಕಾಶಮಯ ತೋಪಿನ ಗುಂಡು-ಗಳು ಇವನ್ನು ತಯಾರಿಸುವದಕ್ಕೆ ಮ್ಯಾಗ್ನೇಸಿಯಮ್‌ವು ಬಹು ದೊಡ್ಡ ಪ್ರಮಾಣ ದಲ್ಲಿ ಬೇಕಾಗುವದು ಅದನ್ನು ತಯಾರಿಸುವದಕ್ಕೆ ಪೋಟ್ಯಾಶವು ಬೇಕಾಗುವದು. ಸೈಬೀರಿಯಾದಲ್ಲಿ ಪೋಟ್ಯಾಶವು ಅತಿ ದೊಡ್ಡ ಪ್ರಮಾಣದಲ್ಲಿ ದೊರೆಯುವದು. ಸಮೀಪದಲ್ಲಿಯೇ ತಾಮ್ರದ ಕಣಿಗಳೂ ಇರುವವು. ಈ ಪ್ರದೇಶದಲ್ಲಿ ಸತುವೂ ದೊರೆಯುವದು. ಆದುದರಿಂದ ಪೊಟ್ಯಾಶ ಮ್ಯಾಗ್ನೇಶಿಯಮ್ ತಾಮ್ರ ಮತ್ತು ಸತುವು ಇವುಗಳಿಗಾಗಿ ರಶಿಯವು ಪರದೇಶದ ಮೇಲೆ ಅವಲಂಬಿಸುವ ಕಾರಣ ವುಳಿದಿಲ್ಲ.

ರಣಭೂಮಿಯಿಂದ ಸಾವಿರ ಮೈಲು ದೂರದಲ್ಲಿರುವ **ಬರ್ನ** ಎಂಬಲ್ಲಿ ರಶಿಯನ್ನರ ವಿಮಾನ ಕಾರಖಾನೆಯು ಹಗಲಿರುಳು ದುಡಿಯಹತ್ತಿದೆ. ಇಲ್ಲಿ ವಿಮಾನಗಳನ್ನು ತಯಾರಿಸುವ ಕಾರಖಾನೆಯಿರುವದೆಂಬದು ಪರದೇಶೀಯರಿಗೆ ಗೊತ್ತಿರಲಿಲ್ಲ. ಪರಕೀಯರಿಗೆ ಈ ಜಿಲ್ಲೆಯಲ್ಲಿ ಪ್ರದೇಶವೇ ಇರಲಿಲ್ಲ. ಟ್ರಾನ್ಸ

ಸೈಬೀರಿಯನ್ ರೇಲ್ವೆಯು ಹಾಯ್ದಿರುವ ಪ್ರದೇಶದೊಳಗಿರುವ ಹಲವು ನಗರ ಗಳಲ್ಲಿ ರಶಿಯನ್ನರು ಯುದ್ಧಸಾಮಗ್ರಿಗಳನ್ನು ತಯಾರಿಸುವ ಕೇಂದ್ರಗಳನ್ನು ನಡೆಯಿಸಿದ್ದಾರೆ. ವ್ಲಾಡಿವೋಸ್ತೋಕ, ಗಾರ್ಕಿ, ಕೂರೂ, ಟೋಮ್‌ಸ್ಕ್, ಇರ್ಕುಟಸ್ಕ್ ಮೊದಲಾದ ಕಡೆಗಳಲ್ಲಿ ರಶಿಯನ್ನರು ವಿಮಾನಗಳನ್ನು ತಯಾರಿಸುವ ಕಾರಖಾನೆ ಗಳನ್ನು ನಡೆಯಿಸಿರುವರು. ಆದುದರಿಂದ ಜರ್ಮನ್ನರು ಕಣ್ಣಿಟ್ಟಿರುವ ಪ್ರದೇಶ ಗಳನ್ನು ವಶಪಡಿಸಿಕೊಳ್ಳುವದು ಅವರಿಗೆ ಅತಿ ಕಷ್ಟಸಾಧ್ಯವೆನಿಸದಿರದು.

೪. **ಸಾಲೋಮನ್ ದ್ವೀಪಗಳು :—** ಪಶ್ಚಿಮದಲ್ಲಿ ಜರ್ಮನಿಯು ಇಟಲಿಯ ಬಾಲಾಗಸಿಯನ್ನು ಹಚ್ಚಿಕೊಂಡು ಆಕಾಶದಲ್ಲಿ ಹಾರಾಡಿ ಯುರೋಪ ಆಫ್ರಿಕಾ ಖಂಡಗಳಲ್ಲಿ ತನ್ನ ಉಗ್ರ ಸ್ವರೂಪವನ್ನು ಪ್ರಕಟಗೊಳಿಸುತ್ತಿದ್ದರೆ, ಪೂರ್ವದಲ್ಲಿ ಜಪಾನವು ತನ್ನ ವಾನರ ಬಲವನ್ನು ಅವಲಂಬಿಸಿ ಏಶಿಯಾ ಆಸ್ಟ್ರೇಲಿಯಾ ಖಂಡಗಳಲ್ಲಿ ಅಮಾನುಷವಾದ ಕ್ರೂರಾಚರಣೆಯನ್ನು ನಡೆಯಿಸಿರುವದೆಂದು ಹೇಳುವದುಂಟು. ಅತಿ ಪೂರ್ವದಲ್ಲಿರುವ ಸಾಲೋಮನ್ ದ್ವೀಪಸಮುದಾಯವು ಇಂದಿನವರೆಗೆ ಯಾರ ದೃಷ್ಟಿಗೂ ಹೆಚ್ಚಾಗಿ ಬೀಳದಿದ್ದರೂ ಮೊನ್ನಿನ ಯುದ್ಧದಲ್ಲಿ ಅದು ಒಂದು ಕೂಟಸ್ಥಾನವಾಗಿ ಪರಿಣಮಿಸಿದೆ.

ಈಸ್ಟ ಇಂಡೀಜ ದ್ವೀಪಗಳಲ್ಲಿ ಸಮಾವೇಶವಾಗುವ ಹಲಕೆಲವು ಚಿಕ್ಕ ದ್ವೀಪಗಳ ಗುಂಪಿಗೆ ಸಾಲೋಮನ್ ದ್ವೀಪಗಳೆಂದು ಹೆಸರಿರುವದು. ಪ್ಯಾಸಿಫಿಕ್ ಮಹಾಸಾಗರದ ಆಗ್ನೇಯ ಭಾಗವಲ್ಲಿ ಈ ದ್ವೀಪಗಳಿರುವವು. ಸುಮಾರು ೩೫೦ ವರ್ಷಗಳ ಹಿಂದೆ ಅಡ್ಮಿರಲ್ ಮೆಂಡೊರ್ಯಾ ಎಂಬವನು ಇವನ್ನು ಕಂಡುಹಿಡಿದನು. ಆಸ್ಟ್ರೇಲಿಯಾದ ಈಶಾನ್ಯಕ್ಕೆ ನ್ಯೂಗಿನಿಯ ಪೂರ್ವದಿಕ್ಕಿನಲ್ಲಿ ಹೆಬ್ರೈಡೀಸ್ ನ್ಯೂಗಿನಿಗಳ ನಡುವೆ ಇವು ನೆಲಸಿರುವವು. ಭೂಕಂಪಗಳ ಮೂಲಕ ಸಮುದ್ರದ ತಳವು ಮೇಲಕ್ಕೇರಿ ಈ ದ್ವೀಪಸಮುದಾಯವುಂಟಾಗಿದೆಯೆಂದು ಹೇಳುವರು. ಕೆಲವು ದ್ವೀಪಗಳು ನಾಲ್ಕಾರು ಮೈಲು ವಿಸ್ತಾರವಾಗಿದ್ದರೆ ಕೆಲವು ಒಂದೊಂದೇ ಮೈಲು ಪ್ರದೇಶವುಳ್ಳವಾಗಿವೆ. ನಟ್ಟನಡುವೆ ಪ್ರಾಣಿಗಳ ಬೆನ್ನು ಹುರಿಯಂತೆ ಎತ್ತರವಾದ ಪರ್ವತಪ್ರದೇಶವಿದ್ದು ಎರಡೂ ಮಗ್ಗಲು ಇಳುಕಲುಳ್ಳ ಈ ಚಿಕ್ಕ ದ್ವೀಪಸಮುದಾಯಕ್ಕೆ ಜನವಸತಿಯ ದೃಷ್ಟಿಯಿಂದ ಅಷ್ಟು ಮಹತ್ವವಿಲ್ಲ. ಹವಾಮಾನವು ವಿಷುವವೃತ್ತದ ಪ್ರದೇಶದಲ್ಲಿರುವಂಥದು. ಗುಡ್ಡದ ಇಳುಕಲುಗಳಲ್ಲಿ ದಟ್ಟಡವಿ ಹಬ್ಬಿದೆ. ಕಾಡು ಜನರೇ ಇಲ್ಲಿಯ ನಿವಾಸಿಗಳು. ಅವರು ನರಮಾಂಸಭಕ್ಷಕರು. ಆಗಾಗ ತಮ್ಮಲ್ಲಿಯೇ ತಂಡತಂಡಗಳಾಗಿ ಹೊಡೆದಾಡುತ್ತಿರುತ್ತಾರೆ. ಗುಲಾಮರ ವ್ಯಾಪಾರ ಮಾಡುವವರು ಈ ಜನರನ್ನು

ಂಡಿದು ಫಿಜೀ ದ್ವೀಪಗಳು ಆಸ್ಟ್ರೇಲಿಯಾ, ಪೆರೂ, ಮುಂತಾದ ಕಡೆಗೆ ಂಯ್ದು ಮಾರುತ್ತಿದ್ದರು. ಕಾಯಿದೆಯಿಂದ ಗುಲಾಮರ ವ್ಯಾಪಾರವು ನಿಂತರೂ ಂಡವಾಳದವರು ನಿಯಮಿತ ಕಾಲಾವಧಿಯ ವರೆಗೆ ಕೆಲಸ ಮಾಡುವ ಕರಾರಿಂದ ಇಲ್ಲಿಯ ಜನರನ್ನು ಒಯ್ದು ದುಡಿಸಿಕೊಳ್ಳುವ ಕೆಲಸವು ನಡೆದೇ ಇತ್ತು.

ಸುಮಾರು ನಾಲ್ಕುಮೈಲು ವಿಸ್ತಾರವಾದ ಟುಲನೀ ಎಂಬ ದ್ವೀಪದಲ್ಲಿ ನೂತ್ರ ಐದಾರು ನೂರು ಜನರು ಹೊರಗಿನಿಂದ ಬಂದು ವಾಸವಾಗಿರುವರು. ಅದರಲ್ಲಿ ೩೦ ಜನ ಯುರೋಪಿಯನ್ನರೂ ಉಳಿದವರು ಚೀನೀ ಕೂಲಕಾರರೂ ಇದ್ದರು. ಈ ದ್ವೀಪಗಳಲ್ಲಿ ತೆಂಗಿನ ಬನಗಳು ಬಲು ಹುಲುಸಾಗಿ ಬೆಳೆಯುವವು. ಆಸ್ಟ್ರೇಲಿಯದಿಂದ ಬಂದ ವ್ಯಾಪಾರಸ್ಥರು ಈ ದ್ವೀಪ ಸಮುದಾಯದೊಳಗಿನ ಒಂದು ಚಿಕ್ಕ ದ್ವೀಪವಾದ ಗುಹುಟು ಎಂಬಲ್ಲಿ, ತೆಂಗಿನ ಬನಗಳನ್ನು ಬೆಳೆಯಿಸುವ, 'ಲಿವ್ಹರ್ ಬ್ರದರ್ಸ್' ಎಂಬ ಒಂದು ಕಂಪನಿಯ ಮುಖ್ಯ ಕೇಂದ್ರವನ್ನು ರಚಿಸಿಕೊಂಡಿರುವರು. ಈ ತೆಂಗಿನ ಬನಗಳಲ್ಲಿ ಕೆಲಸ ಮಾಡುವದಕ್ಕೆ ಹೆಚ್ಚಾಗಿ ಚೀನೀ ಕೂಲಿಕಾರರು ಹೋಗುವರು. ಈ ದ್ವೀಪಗಳ ನಡುವೆ ಸಮುದ್ರವು ಆಳವಾಗಿರುವದರಿಂದ ದೊಡ್ಡದೊಡ್ಡ ಹಡಗುಗಳಿಗೆ ಬಂದರು ಮಾಡಿ ನಿಲ್ಲಲು ತಕ್ಕ ಅನುಕೂಲತೆಗಳಿರುವವು.

ಈ ದ್ವೀಪಗಳು ಆಸ್ಟ್ರೇಲಿಯಾದಿಂದ ನ್ಯೂಝಿಲಂಡಕ್ಕೂ ಅಮೇರಿಕೆಯಿಂದ ಆಸ್ಟ್ರೇಲಿಯಕ್ಕೂ ಹೋಗುವ ಹಡಗುಗಳ ಸಂಚಾರ ಮಾರ್ಗದ ನಡುವೆ ಇರುವವು. ಈ ದ್ವೀಪಗಳಲ್ಲಿ ಕಾವಲಿಟ್ಟರೆ ಈ ಜಲ ಮಾರ್ಗವನ್ನು ತಮ್ಮ ಅಂಕಿತದಲ್ಲಿಟ್ಟುಕೊಳ್ಳಲು ಸುಲಭವಾಗುವದೆಂದು ಜಪಾನರು ಯುದ್ಧಾರಂಭವಾದ ಕೆಲಕಾಲದಲ್ಲಿಯೇ ಇವನ್ನು ಆಕ್ರಮಿಸಿಕೊಂಡರು. ಆದರೆ ಅಮೇರಿಕೆಯು ಈ ತಂತ್ರವನ್ನು ತಿಳಿದು ಬ್ರಿಟಿಷರ ಮತ್ತು ಆಸ್ಟ್ರೇಲಿಯನ್ನರ ನೆರವಿನಿಂದ ಜಪಾನರನ್ನು ಅಲ್ಲಿಂದ ಹೊರದೂಡಲು ಯುದ್ಧ ಹೂಡಿದೆ. ಈ ದ್ವೀಪ ಸಮುದಾಯದೊಳಗಿನ **ಗ್ವಾಡಾಲ ಕನಾರ** ಎಂಬದೊಂದು ದ್ವೀಪದಲ್ಲಿ ಕೆಲವು ಪ್ರದೇಶವು ಸಪಾಟಾಗಿರುವದರಿಂದ ಅಲ್ಲೊಂದು ಒಳ್ಳೆಯ ವಿಮಾನ ಗೃಹವನ್ನು ರಚಿಸಿಕೊಳ್ಳಬಹುದಾಗಿದೆ. ಈ ದ್ವೀಪಗಳ ನಡುವಿನ ಆಳವಾದ ಸಮುದ್ರದಲ್ಲಿ ಹಡಗಗಳನ್ನು ಅಡಗಿಸಿಟ್ಟುಕೊಂಡು **ಗ್ವಾಡಾಲ ಕನಾರ** ವಿಮಾನಗೃಹದ ನೆರವಿನಿಂದ ಈಸ್ಟ ಇಂಡಿಯನ್ ದ್ವೀಪಗಳು ನ್ಯೂಝಿಲಂಡ್ ಆಸ್ಟ್ರೇಲಿಯ ಇವುಗಳ ಮೇಲೆ ದಾಳಿ ಮಾಡಿ ಅವನ್ನು ಆಪತ್ತಿಗೆ ಗುರಿಮಾಡಬೇಕೆಂಬದು ಜಪಾನದ ಪಂಚಿಕೆಯಾಗಿತ್ತು. ಆದರೆ ಅದು ಈಚೆಗೆ ಪಂಚಾಗುತ್ತ ನಡೆದಿರುವದು; ಜಪಾನವು ಗ್ವಾಡಾಲ ಕನಾರವನ್ನು ಕಳೆದುಕೊಂಡಿದೆ.

ಶಾರೀರಿಕ ಶಿಕ್ಷಣದ ಮೂಲ ತತ್ವಗಳು

ಲೇಖಕ:— ವಿ. ಕೆ. ಜವಳಿ, ಬಿ. ಎ., (ಆನರ್ಸ್) ಬಿ. ಟಿ., ಡಿ. ಪಿ. ಇಡಿ.

ಶಾರೀರಿಕ ಶಿಕ್ಷಣವೆಂದರೆ ಶರೀರಕ್ಕೆ ಕೊಡುವ ಶಿಕ್ಷಣವಷ್ಟೇ ಅಲ್ಲ ; ಆದರೆ ಶರೀರದ ಮುಖಾಂತರ ಕೊಡುವ ಪೂರ್ಣ ವ್ಯಕ್ತಿಯ ಶಿಕ್ಷಣ. ಮೈಯಲ್ಲಿ ಬೆವರು ಬರುವಂತೆ ಓಡಾಡುವುದು, ಲೋಡುಗಳನ್ನು ತಿರುಗಿಸುವುದು, ಕುಸ್ತಿ ಆಡುವುದು, ಡ್ರಿಲ್ ಮಾಡುವುದು ಮುಂತಾದ ಅಂಗಸಾಧನೆಗಳೇ ಶಾರೀರಿಕ ಶಿಕ್ಷಣ ಎಂಬ ತಪ್ಪುಕಲ್ಪನೆಯು ನಮ್ಮಲ್ಲಿ ಇನ್ನೂ ರೂಢವಾಗಿದೆ. ಕೇವಲ ಸ್ನಾಯುಗಳನ್ನು ಬಲಪಡಿಸುವುದಾಗಲಿ ಅಥವಾ ಆರೋಗ್ಯವನ್ನು ಹೆಚ್ಚಿಸುವುದಾಗಲಿ ಶಾರೀರಿಕ ಶಿಕ್ಷಣದ ಮುಖ್ಯ ಉದ್ದೇಶವಲ್ಲ. ಶಾರೀರಿಕ ಶಿಕ್ಷಣವು ಸಾಮಾಜಿಕವಿಷಯವೂ ಆಗಿರುವುದರಿಂದ ಶೀಲ ಸಂವರ್ಧನೆಯು ಧ್ಯೇಯವೂ ಅದರಲ್ಲಿ ಅಡಕವಾಗಿದೆ. ದೇಶ ಕಾಲ ಪರಿಸ್ಥಿತಿಗೆ ಅನುಸಾರವಾಗಿ ಶಾರೀರಿಕ ಶಿಕ್ಷಣದ ಕಲ್ಪನೆಯು ಬದಲಾಗುತ್ತದೆ. ಆಹಾರಕ್ಕೆಂದು ಬೇಟೆಯಾಡುವದನ್ನು ಕಲಿಯುವುದೇ ಪೂರ್ವ ಕಾಲದ ಜನರಿಗೆ ಶಾರೀರಿಕ ಶಿಕ್ಷಣವಾಗಿತ್ತು. ಅನಂತರ ಆತ್ಮರಕ್ಷಣೆಗಾಗಲಿ, ದೇಶ ರಕ್ಷಣೆಗಾಗಲಿ ಯುದ್ಧ ಕಲೆಯನ್ನು ಕಲಿಯುವುದೇ ಶಾರೀರಿಕ ಶಿಕ್ಷಣವೆಂದೆನಿಸಿತು. ದೇಹಶಕ್ತಿಯನ್ನು ಬೆಳೆಯಿಸುವುದೇ ಶಾರೀರಿಕ ಶಿಕ್ಷಣದ ಗುರಿಯೆಂದು ಇವರು ನಂಬಿದ್ದರು. ಆದರೆ ಇತ್ತೀಚೆಗೆ, ಯುದ್ಧದ ಸ್ವರೂಪವು ಬದಲಾದಂದಿನಿಂದ, ಶಾರೀರಿಕ ಶಿಕ್ಷಣವು ಎಲ್ಲ ಜನರಿಗೆ ಸಂಬಂಧಪಟ್ಟ ಶಿಕ್ಷಣದ ಒಂದು ವಿಷಯ ವಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ನಾವು ಪಾಶ್ಚಾತ್ಯರನ್ನು ಹಿಂಬಾಲಿಸುತ್ತೇವೆ. ಯಾಕಂದರೆ ಆ ವಿಷಯದಲ್ಲಿ ಅವರು ಎಷ್ಟೋ ಪ್ರಗತಿಯನ್ನು ಹೊಂದಿದ್ದಾರೆ. ಶಾರೀರಿಕ ಶಿಕ್ಷಣದಲ್ಲಿಯೂ ಅವರು ಮುಂದುವರಿದಿದ್ದಾರೆ. ಅದರ ಬಗೆಗೆ ಅವರ ಹೊಸ ವಿಚಾರಗಳು ಯೋಗ್ಯವೆಂದು ತೋರುವುದರಿಂದ ಅವುಗಳನ್ನೇ ನಾವು ಇಟ್ಟು ಕೊಳ್ಳಲಿಕ್ಕೆ ಅಭ್ಯಂತರವಿಲ್ಲ. ಗರಡೀಮನೆಯಲ್ಲಾಗಲಿ, ಆಟದ ಬಯಲಲ್ಲಾಗಲಿ ವ್ಯಾಯಾಮ ಮಾಡುವುದಕ್ಕೆ ಅಂಗಸಾಧನೆ (Physical training) ಎನ್ನುತ್ತಾರೆ. ಸ್ನಾಯುಗಳನ್ನು ಬಲಪಡಿಸಿ ದೇಹಸಾಮರ್ಥ್ಯವನ್ನು ಬೆಳೆಯಿಸುವುದು ಅಂಗಸಾಧನೆಯ ಉದ್ದೇಶವಾಗಿರುತ್ತದೆ. ಆದರೆ ಶಾಲೆಗಳಲ್ಲಿ ಕೈಕೊಳ್ಳುವ ಶಾರೀರಿಕ ಶಿಕ್ಷಣದ ಧ್ಯೇಯವು ಇದಕ್ಕೂ ಉಚ್ಚತರವಾದದ್ದು. ಅದು ದೇಹ ಸೌಷ್ಟವದ ಜೊತೆಗೆ ಮಕ್ಕಳಲ್ಲಿ ನೈತಿಕ ಮನೋವೃತ್ತಿಗಳನ್ನು ಮತ್ತು ಶೀಲವನ್ನು ನೆಲೆಗೊಳಿಸುವ ಧ್ಯೇಯವನ್ನೂ ಇಟ್ಟುಕೊಂಡಿದೆ. ಕೆಲವರು ಶಾರೀರಿಕ ಶಿಕ್ಷಣ

ಎಂದರೆ ಆರೋಗ್ಯವನ್ನು ಸಂಪಾದಿಸುವ ಸಾಧನವೆಂದು ತಿಳಿಯುತ್ತಾರೆ. ಅವರು 'ಶಾರೀರಿಕ ಸಂಸ್ಕೃತಿ' (Physical Culture) ಎಂಬ ಪದವನ್ನು ಉಪಯೋಗಿಸುವುದು ಹೆಚ್ಚು. ನಾವು ಆರೋಗ್ಯದಿಂದ ಇರಬೇಕಾದರೆ ಅಥವಾ ಹೆಚ್ಚು ದಿವಸಗಳವರೆಗೆ ನಾವು ಬದುಕಬೇಕಾದರೆ ಇಲ್ಲವೆ ನಮ್ಮನ್ನು ಅಂಟಿಕೊಂಡ ರೋಗವನ್ನು ಕಳೆದುಕೊಳ್ಳಬೇಕಾದರೆ ನಾವು ವಿಶಿಷ್ಟ ಪದ್ಧತಿಯ ಶಾರೀರಿಕ ಚಟುವಟಿಕೆಗಳನ್ನು ಕೈಕೊಳ್ಳಬೇಕೆಂದು ಅವರು ಸೂಚಿಸುತ್ತಾರೆ. ಆದರೆ ಮೇಲೆ ಹೇಳಿದಂತೆ ಶಾರೀರಿಕ ಶಿಕ್ಷಣದ ಗುರಿಯು ಮಕ್ಕಳನ್ನು ಆರೋಗ್ಯವಂತರನ್ನು ಮಾತ್ರ ಮಾಡಬೇಕೆಂಬುದು ಇರದೆ ಅವರನ್ನು ಉತ್ತಮ ಶೀಲವುಳ್ಳ ನಾಗರಿಕರನ್ನಾಗಿಯೂ ಮಾಡಬೇಕೆಂಬುದು ಇರುತ್ತದೆ. ಒಟ್ಟಿನ ಮೇಲೆ ಶರೀರದ ಯೋಗ್ಯ ಬೆಳವಣಿಗೆ, ಆರೋಗ್ಯ ಸಂಪತ್ತು ಮತ್ತು ಶೀಲ ಇವೆಲ್ಲವನ್ನೂ ಸಾಧಿಸುವ ಸಾಧನವೇ ಶಾರೀರಿಕ ಶಿಕ್ಷಣವು. ಅದು ಶಿಕ್ಷಣದ ಒಂದು ಭಾಗವಾದುದರಿಂದ ಸಾಲೆಯಲ್ಲಿ ಅದಕ್ಕೆ ಯೋಗ್ಯವಾದ ಸ್ಥಾನವು ಇರಲೇಬೇಕು.

ತತ್ವಗಳು:— ಯಾವ ತತ್ವಗಳನ್ನು ಅನುಸರಿಸಿ ಶಾರೀರಿಕ ಶಿಕ್ಷಣವನ್ನು ಸಾಗಿಸಬೇಕೆಂಬುದು ಶಿಕ್ಷಕನಿಗೆ ಗೊತ್ತಿರಬೇಕು. ನಾಲ್ಕೈದು ವರ್ಷಗಳ ಈಚೆಗೆ ಶಾರೀರಿಕ ಶಿಕ್ಷಣದ ಹೊಸ ವಿಚಾರಗಳೂ ಪದ್ಧತಿಗಳೂ ನಮ್ಮ ಪ್ರಾಂತದೊಳಗೆ ಹೆಚ್ಚು ಪ್ರಚಾರದಲ್ಲಿ ಬಂದಿರುವವು. ಆ ಪೂರ್ವದಲ್ಲಿ ವ್ಯಾಯಾಮ ಮಾಡುವುದೆಂದರೆ ಅದು ಒಂದು ಅನಾದರಣೀಯ ಕೆಲಸವೆಂದು ಸಾಲೆಯ ಹುಡುಗರು ಭಾವಿಸುತ್ತಿದ್ದರು. ಅಭ್ಯಾಸದ ಇತರ ವಿಷಯಗಳಲ್ಲಿ ಜಾಣನಾದವನಿಗೆ ಶಾರೀರಿಕ ವ್ಯಾಯಾಮವೆಂದರೆ ತಿರಸ್ಕಾರವೆನಿಸುತ್ತಿತ್ತು. ಯಾವುದಾದರೊಂದು ನೆವದಿಂದ ಡ್ರಿಲ್ ಕ್ಲಾಸ ತಪ್ಪಿಸಲಿಕ್ಕೆ ಹುಡುಗರು ಯತ್ನಿಸುತ್ತಿದ್ದರು. ಶಾರೀರಿಕ ಶಿಕ್ಷಣದ ಬಗ್ಗೆ ಮಕ್ಕಳಲ್ಲಿ ಆಸ್ಥೆ ಮತ್ತು ಆದರವು ಕಡಿಮೆಯಾಗಲಿಕ್ಕೆ ಮುಖ್ಯವಾದ ಕಾರಣವೆಂದರೆ ಅದರ ಸಂಚಾಲಕರೇ ಎಂದು ಹೇಳಬಹುದು. ಯಾಕೆಂದರೆ ಶಾರೀರಿಕ ಶಿಕ್ಷಣದ ಮೂಲ ತತ್ವಗಳ ಜ್ಞಾನವು ಎಷ್ಟೋ ಶಿಕ್ಷಕರಿಗೆ ಇದ್ದಿರಲಿಲ್ಲ. ಶಾರೀರಿಕ ಶಿಕ್ಷಣದಲ್ಲಿ **ಏನು** ಕಲಿಸಬೇಕೆಂಬುದು ಎಲ್ಲರಿಗೆ ಗೊತ್ತು. ಆದರೆ **ಅದನ್ನು ಏಕೆ** ಕಲಿಸಬೇಕೆಂಬದು ಎಷ್ಟೋ ಜನರಿಗೆ ಗೊತ್ತಿರುವುದಿಲ್ಲ. ಶಾರೀರಿಕ ಶಿಕ್ಷಕನು ತಾನು ಕಲಿಸುವ ವಿಷಯದ ತತ್ವಗಳನ್ನು ಅರಿತವನಾಗಿದ್ದರೆ ತನ್ನ ಕಾರ್ಯಕ್ರಮದಲ್ಲಿ ಮಕ್ಕಳು ಅಭಿರುಚಿಯುಳ್ಳವರಾಗುವಂತೆ ಮಾಡಬಲ್ಲನು. ಅವನ ವಿಚಾರಗಳನ್ನೂ ಕಾರ್ಯಗಳನ್ನೂ ನಿರ್ಧರಿಸಲಿಕ್ಕೆ ಶಾರೀರಿಕ ಶಿಕ್ಷಣದ ತತ್ವಗಳು ಮಾರ್ಗದರ್ಶಕವಾಗುತ್ತವೆ. ಶಾರೀರಿಕ ಶಿಕ್ಷಣದಲ್ಲಿ ಯಾವ ಧ್ಯೇಯವನ್ನು ಇಟ್ಟುಕೊಳ್ಳಬೇಕು. ಮತ್ತು ಆ ಧ್ಯೇಯವು ಈಡೇರಬೇಕಾದರೆ ಯಾವ

ಸಂಧನೆಗಳನ್ನು ಕೈಕೊಳ್ಳಬೇಕು ಎಂಬುದನ್ನು ಗೊತ್ತುಹಚ್ಚಲಿಕ್ಕೆ ಆ ತತ್ವಗಳು ಅವನಿಗೆ ನೆರವಾಗುತ್ತವೆ.

ತತ್ವಗಳು ಅನುಭವದಿಂದ ಅಥವಾ ವಿಷಯದ ಅಭ್ಯಾಸದಿಂದ ಹೊರಡುತ್ತವೆ. ಶಾರೀರಿಕ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸುವುದರಿಂದ ಅದರ ಮೂಲತತ್ವಗಳಾವವೆಂಬುದು ನಮಗೆ ಗೊತ್ತಾಗುತ್ತದೆ. ಶಾರೀರಿಕ ವಿವಿಧ ಚಟುವಟಿಕೆಗಳು, ಅವುಗಳನ್ನು ಕಲಿಯುವ ನಿಯಮಗಳು ಮತ್ತು ಅವುಗಳಿಂದ ವ್ಯಕ್ತಿಯ ಮೇಲೆ ಆಗುವ ನೈತಿಕ ಪರಿಣಾಮಗಳು ಇವು ಶಾರೀರಿಕ ಶಿಕ್ಷಣದಲ್ಲಿ ಬರುವ ಸಂಗತಿಗಳು. ಶರೀರದ ಚಟುವಟಿಕೆಗಳನ್ನು ನಿಷ್ಕರ್ಷಿಸುವುದರಿಂದ ಶರೀರ ಶಾಸ್ತ್ರವು ಅದಕ್ಕೆ ಆಧಾರವಾಗಿರುತ್ತದೆ; ಮಕ್ಕಳಲ್ಲಿರುವ ಆಟದ ಸ್ವಾಭಾವಿಕ ವೃತ್ತಿಯನ್ನೂ ಕಲಿಯುವ ನಿಯಮಗಳನ್ನು ವಿವೇಚಿಸುವುದರಿಂದ ಮನಶ್ಶಾಸ್ತ್ರವು ಅದಕ್ಕೆ ಆಧಾರವಾಗಿರುತ್ತದೆ; ಮತ್ತು ಮಕ್ಕಳಲ್ಲಿ ಆಟದ ಮುಖಾಂತರ ಶೀಲವು ಹೇಗೆ ಬೆಳೆಯಬೇಕೆಂಬುದನ್ನು ವಿವೇಚಿಸುವುದರಿಂದ ಸಮಾಜ ಶಾಸ್ತ್ರವು ಆಧಾರವಾಗಿರುತ್ತದೆ. ಆದುದರಿಂದ ಶಾರೀರಿಕ ಶಿಕ್ಷಕನು ಶರೀರಶಾಸ್ತ್ರ, ಮನಶ್ಶಾಸ್ತ್ರ ಮತ್ತು ಸಮಾಜ ಶಾಸ್ತ್ರಗಳ ಪರಿಚಯವನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಶಾಸ್ತ್ರಗಳ ಮೂಲ ಸಂಗತಿಗಳಿಂದ ಅಥವಾ ವಿಷಯ ಪರಿಶೀಲನೆಯಿಂದ ಹೊರಡಿಸಿದ ಸಿದ್ಧಾಂತಗಳೇ ಶಾರೀರಿಕ ಶಿಕ್ಷಣದ ತತ್ವಗಳು. ಶಾರೀರಿಕ ಶಿಕ್ಷಕನು ಯಾವಾಗಲೂ ನೆನಪಿನಲ್ಲಿಡಬೇಕಾದ ಅಂಥ ಮುಖ್ಯ ತತ್ವಗಳನ್ನು ಕೆಳಗೆ ವಿವರಿಸಿದೆ:—

೧. ದೇಹದ ಸರಿಯಾದ ಬೆಳವಣಿಗೆಗೆ ಕೃತ್ರಿಮ ಕವಾಯಿತುಗಳಿಗಿಂತ ಸ್ವಾಭಾವಿಕ ಚಟುವಟಿಕೆಗಳೇ ತಕ್ಕವುಗಳು.

೨. ವ್ಯಾಯಾಮವನ್ನು ಭರದಿಂದ ಸಾಗಿಸುವ ಮೊದಲು ಮಕ್ಕಳು ಆರಂಭದ ಚಟುವಟಿಕೆಗಳಲ್ಲಿ (Warming up) ಭಾಗವಹಿಸಬೇಕು.

೩. ದಣಿವು ಉಂಟಾದಾಗ ದೇಹಕ್ಕೆ ವಿಶ್ರಾಂತಿಯನ್ನು ಕೊಡಬೇಕು.

೪. ಮನುಷ್ಯನು ಸದೃಢಕಾಯದವನಾಗಬೇಕಾದರೆ ಸ್ನಾಯುಗಳ ಬೆಳವಣಿಗೆಗಿಂತ ಹೃದಯ ಪುಪ್ಪಸಗಳ ಬೆಳವಣಿಗೆಗೆ ಹೆಚ್ಚು ಲಕ್ಷ್ಯವನ್ನು ಪೂರೈಸಬೇಕು.

೫ ವಾತಾವರಣವು ಅನಾರೋಗ್ಯಕರವಾಗಿದ್ದರೆ ವ್ಯಾಯಾಮದ ಉದ್ದೇಶವು ನಿಷ್ಫಲವಾಗುವುದು.

೬. ಸಮತೋಲವಾದ ಆಹಾರವನ್ನು ಸೇವಿಸಬೇಕು.

೭. ಕೈಕಾಲುಗಳ ಪ್ರತ್ಯೇಕ ಚಲನದಿಂದ— ಅಂಗಾಂಗ ವ್ಯಾಯಾಮದಿಂದ— ಶರೀರಸೌಷ್ಟವವು ಬೆಳೆಯದು.

೮. ಮಗುವಿನ ಬೆಳವಣಿಗೆಯು ಜೆನ್ನಾಗಿ ಸಾಗಬೇಕಾದರೆ ಬಾಲ್ಯದಲ್ಲಿ ಬೌದ್ಧಿಕ ಶಿಕ್ಷಣಕ್ಕಿಂತ ಶಾರೀರಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕು. ಅಂದರೆ ಸಾಲೆಯಲ್ಲಿ ಬಾಲಕರು ಹೆಚ್ಚು ವೇಳೆಯನ್ನು ಆಟದಲ್ಲಿ ಕಳೆಯಬೇಕು.

೯. ಸ್ತ್ರೀ-ಪುರುಷರ ಅಸ್ತಿಪಂಜರದ ರಚನೆಯಲ್ಲಿ ಭಿನ್ನತೆ ಇರುವುದರಿಂದ ಅವರವರ ಚಟುವಟಿಕೆಗಳೂ ಭಿನ್ನವಾಗಿರಬೇಕು.

೧೦. ಪುರುಷರಿಗಿಂತ ಸ್ತ್ರೀಯರ ಸ್ನಾಯುಗಳ ಬಲವು ಕಡಿಮೆ ಇರುವುದರಿಂದ ಸ್ತ್ರೀಯರು ಉಗ್ರತರ ವ್ಯಾಯಾಮದಲ್ಲಿ ಭಾಗವಹಿಸಬಾರದು.

೧೧. ಪ್ರಾಯದಲ್ಲಿ ಶರೀರ ರಚನೆಯು ಸ್ಥಿತ್ಯಂತರವನ್ನು ಹೊಂದುವುದರಿಂದ ಆಗ ವಿಪರೀತ ವ್ಯಾಯಾಮ ಮಾಡುವುದು ಹಿತಕರವಲ್ಲ.

೧೨. ದಣಿದ ಸ್ನಾಯುಗಳಿಗೆ ವಿಶ್ರಾಂತಿಯು ಅವಶ್ಯವಾದುದರಿಂದ ಒಂದೇತೆರನಾದ ವ್ಯಾಯಾಮವನ್ನು ಹೆಚ್ಚು ಕಾಲ ಮಾಡುವುದು ಅಪಾಯಕರವಾದುದು.

೧೩. ಬೇರೆ ಬೇರೆ ವಯಸ್ಸಿನವರಿಗೆ ಮತ್ತು ಬೇರೆ ಬೇರೆ ಶಕ್ತಿಯುಳ್ಳವರಿಗೆ ಬೇರೆ ಬೇರೆ ತರಹದ ವ್ಯಾಯಾಮಗಳನ್ನು ಕಲ್ಪಿಸಬೇಕು.

೧೪. ಶರೀರ ಮತ್ತು ಮನಸ್ಸು ಎಂಬುವು ಎರಡು ಭಿನ್ನವಾದ ತತ್ವಗಳೆಂದು ತಿಳಿಯಬಾರದು.

೧೫. ಮಕ್ಕಳಲ್ಲಿ ಶಾರೀರಿಕ ಶಿಕ್ಷಣದ ಬಗ್ಗೆ ಅಭಿರುಚಿಯನ್ನು ಹುಟ್ಟಿಸಬೇಕು. ಅಭಿರುಚಿ ಇದ್ದಲ್ಲಿ ಕಲಿಯುವಿಕೆ ಉಂಟು.

೧೬. ಮಕ್ಕಳಲ್ಲಿ ಆಟವಾಡುವ ಸ್ವಾಭಾವಿಕ ಒಲವು ಇರುವುದರಿಂದ ಅದನ್ನು ತಡೆಗಟ್ಟಬಾರದು. ಆಟದಿಂದ ಆನಂದ ಉಂಟಾಗುವುದಲ್ಲದೆ ಶೀಲವೂ ರೂಪುಗೊಳ್ಳುವುದು.

೧೭. ಸಾಹಸಿಗರಾದ ಆಟಿಗರನ್ನು ಪ್ರೋತ್ಸಾಹಿಸಬೇಕು.

೧೮. ಅಭ್ಯಾಸದಿಂದ ಶಾರೀರಿಕ ಚಟುವಟಿಕೆಗಳಲ್ಲಿ ಕೌಶಲ್ಯವು ಲಭಿಸುವುದು.

೧೯. ಆಟಗಳ ಮುಖಾಂತರ ಮಕ್ಕಳಲ್ಲಿ ಪ್ರಾಮಾಣಿಕತನ, ಧೈರ್ಯ, ಸಹಕಾರ, ಮುಂದಾಳುತನ, ಸ್ವತಂತ್ರವಿಚಾರ ಮೊದಲಾದ ನೈತಿಕ ಗುಣಗಳನ್ನು ಬೆಳೆಯಿಸಬೇಕು.

೨೦. ಶಾರೀರಿಕ ಚಟುವಟಿಕೆಗಳಿಂದ ಕಲಿಯಬೇಕಾದ ಒಂದು ಮು
ತ್ತಾದ ತತ್ವವೇನಂದರೆ— ಶ್ರೇಷ್ಠತೆಯು ವೈಯಕ್ತಿಕವಲ್ಲದೆ ಅದು ಜಾತಿ
ಮತ, ಪಂಥಗಳನ್ನು ಅವಲಂಬಿಸಿರುವುದಿಲ್ಲ.

೨೧. ಜೀವಶಾಸ್ತ್ರದ ದೃಷ್ಟಿಯಿಂದ ನೋಡಿದರೆ ಮನುಷ್ಯರೆಲ್ಲರೂ
ಸಮಾನಸ್ಕಂದರು. ಅವರಲ್ಲಿ ಕಂಡುಬರುವ ವರ್ತನದ ಭಿನ್ನತೆಗೆ ಅವ
ನಂಬುಗೆಗಳೂ, ಸಂಪ್ರದಾಯಗಳೂ ಕಾರಣವಾಗಿರುತ್ತವೆ.

೨೨. ಸ್ಪರ್ಧೆಯಲ್ಲಿ ತಾಮಸವೃತ್ತಿಯನ್ನು ಬಿಟ್ಟು ಸಾತ್ವಿಕವೃತ್ತಿಯನ್ನು
ಇಟ್ಟುಕೊಳ್ಳಬೇಕು.

೨೩. ಪ್ರತಿಸ್ಪರ್ಧಿಯವರನ್ನು ಅವಮಾನಗೊಳಿಸುವುದು ಅಥವಾ ಹೀಯಾಳಿ
ಸುವುದು ಆಟಗಾರಿಕೆಯಲ್ಲ.

೨೪. ಸರ್ವರಿಗೂ ಸಮನಾಗಿ ಸಂದರ್ಭಗಳನ್ನು ಒದಗಿಸಿಕೊಡಬೇಕು.

೨೫. ಶೀಲರಚನೆಗೆ ಶಾರೀರಿಕ ಶಿಕ್ಷಣವು ತಕ್ಕ ಸಾಧನವು.

ಧ್ಯೇಯ ಮತ್ತು ಸಾಧನೆಗಳು:— ಮೇಲೆ ಹೇಳಿದ ತತ್ವಗಳಿಗೆ ಶರೀರ
ಶಾಸ್ತ್ರ, ಜೀವಶಾಸ್ತ್ರ, ಮನಶ್ಶಾಸ್ತ್ರ ಮತ್ತು ಸಮಾಜಶಾಸ್ತ್ರ ಇವು ಆಧಾರಗಳಾಗಿ
ರುತ್ತವೆ. ಈ ಶಾಸ್ತ್ರಗಳ ಮೇಲಿಂದ ಶಾರೀರಿಕ ಶಿಕ್ಷಣದ ಧ್ಯೇಯ ಮತ್ತು
ಸಾಧನೆಗಳು ಆವವೆಂಬುದನ್ನು ನಿರ್ಧರಿಸಬಹುದು. ಶಾರೀರಿಕ ಶಿಕ್ಷಣದ
ಧ್ಯೇಯವು ಸಾಮಾನ್ಯ ಶಿಕ್ಷಣದ ಧ್ಯೇಯದಷ್ಟು ವಿಶಾಲವಾಗಿದೆ. ಅದು ಜೀವನ
ದಷ್ಟು ವ್ಯಾಪಕವೂ ಆಗಿದೆ. **ನಿರೋಗಿಯೂ ಸಶಕ್ತನೂ ಚಪಲಬುದ್ಧಿ
ಯುಳ್ಳವನೂ ಶೀಲಸಂಪನ್ನನೂ ಆದ ವ್ಯಕ್ತಿಯನ್ನು ತಯಾರಿಸುವುದೇ
ಶಾರೀರಿಕ ಶಿಕ್ಷಣದ ಧ್ಯೇಯ.** ಮಕ್ಕಳಲ್ಲಿ ಈ ತರಹದ ವ್ಯಕ್ತಿತ್ವವು ರೂಪ
ಗೊಳ್ಳಬೇಕಾದರೆ ಶಾರೀರಿಕ ಶಿಕ್ಷಣವು ಯೋಗ್ಯ ಸನ್ನಿವೇಶಗಳನ್ನು ಒದಗಿಸಿ
ಕೊಡಬೇಕು. "ಕುಶಲನಾದ ಮುಂದಾಳುವಿನ ನೇತೃತ್ವದಲ್ಲಿ ಮತ್ತು
ಸಾಕಾದಷ್ಟು ಸಲಹೆ ಸಾಮಗ್ರಿಗಳೊಡನೆ, ಶರೀರಕ್ಕೆ ಹಿತವನ್ನುಂಟುಮಾಡುವ
ಮನಸ್ಸನ್ನು ಜಾಗ್ರತ ಮತ್ತು ಆನಂದಗೊಳಿಸುವ ಮತ್ತು ಯೋಗ್ಯವಾದ
ಸಾಮಾಜಿಕವೃತ್ತಿಯನ್ನು ಬೆಳೆಯಿಸುವ, ಸಂದರ್ಭಗಳನ್ನು ವ್ಯಕ್ತಿಗೆ ಅಥವಾ
ಸಮಾಜಕ್ಕೆ ಒದಗಿಸಿಕೊಡುವುದೇ ಶಾರೀರಿಕ ಶಿಕ್ಷಣದ ಧ್ಯೇಯವಾಗಿರಬೇಕು"
ಎಂದು ಜಿ. ಎಫ್. ವಿಲಿಯಮ್ಸ್ ಅವರು ಹೇಳುತ್ತಾರೆ. ಶಾರೀರಿಕ ಶಿಕ್ಷಣ
ವೆಂದರೆ ಕೇವಲ ಆರೋಗ್ಯವನ್ನು ಸಂಪಾದಿಸುವುದು, ಮೈ ಬೆವರುಬಿಡುವಂತೆ
ಗರಡೀಸಾಧಕಗಳನ್ನು ಮಾಡುವುದು, ಅಥವಾ ಸ್ನಾಯುಗಳನ್ನು ಬಲಪಡಿಸು

ವುದು, ಎಂದು ತಿಳಿದರೆ ಅದಕ್ಕೆ ಸಂಕುಚಿತ ಅರ್ಥವನ್ನು ಕೊಟ್ಟಂತಾಗುವುದು. ಶಾರೀರಿಕ ಶಿಕ್ಷಣವು ನಡತೆ ನಡಾವಳಿಗೂ, ಮನೋವೃತ್ತಿಗಳಿಗೂ ಸಂಬಂಧ ಪಟ್ಟಿರುವುದರಿಂದ ಅದರ ಧ್ಯೇಯವು ವಿಶಾಲವಾದುದು. ಮಕ್ಕಳಲ್ಲಿ ಧೈರ್ಯ, ಸಾಹಸ, ಸಹಕಾರ, ಸಹಿಷ್ಣುತೆ, ಪ್ರಾಮಾಣಿಕತನ ಮೊದಲಾದ ಸದ್ಗುಣಗಳನ್ನು ನೆಲೆಗೊಳಿಸುವುದು ಅದರ ಧ್ಯೇಯವಾಗಿದೆ.

ಮಕ್ಕಳನ್ನು ಸಶಕ್ತರನ್ನೂ ಸುಶೀಲರನ್ನೂ ಮಾಡಬೇಕೆಂಬುದೇನೆ ಉದಾತ್ತ ಧ್ಯೇಯ. ಆದರೆ ಆ ಧ್ಯೇಯವನ್ನು ಸಾಧಿಸಬೇಕಾದರೆ ಅದರಲ್ಲಿ ಅಡಕವಾಗಿರುವ ಅಂಶಗಳನ್ನು ಬಿಚ್ಚಿ ನೋಡಬೇಕಾಗುತ್ತದೆ. ಅವುಗಳಿಗೆ ಸ್ಥೂಲ ಧ್ಯೇಯಗಳು ಅಥವಾ ನಿಶ್ಚಿತವಾದ ಉದ್ದೇಶಗಳು (Objectives) ಎಂದು ಅನ್ನಬಹುದು. ವ್ಯಾವಹಾರಿಕವಾಗಿರುವ ಈ ಉದ್ದೇಶಗಳನ್ನು ಎಚ್. ಸಿ. ಬಕ್ ಅವರು ಹೀಗೆ ವಿವರಿಸಿದ್ದಾರೆ :— (೧) ಆರೋಗ್ಯ (೨) ಕೆಲಮಟ್ಟಿಗೆ ಶಕ್ತಿ ಮತ್ತು ಸಹಿಷ್ಣುತೆ (೩) ಸರಿಯಾದ ಅಂಗಶೀವಿ (Posture) (೪) ಚಟುವಟಿಕೆಗಳಲ್ಲಿ ಕೌಶಲ್ಯ ಮತ್ತು ಸೊಬಗು (೫) ಸಬಲವಾದ ಇಂದ್ರಿಯಗಳು (೬) ಆಜ್ಞಾಧಾರಕತ್ವ, ಆದರ, ಸ್ವಾರ್ಥತ್ಯಾಗ, ಸಹಕಾರ, ಮಿತ್ರತ್ವ, ಸತ್ಕಾರ (೭) ಸ್ವಾಮಿನಿಷ್ಠೆ, ದೇಶಾಭಿಮಾನ, (೮) ಮುಂದಾಳುತನ (೯) ಜಯ ಅಪಜಯಗಳಲ್ಲಿ ಸಮಭಾವ. (೧೦) ಪ್ರಾಮಾಣಿಕತನ, ಆಟಿಗಾರಿಕೆ. (೧೧) ಆತ್ಮವಿಶ್ವಾಸ, ಆತ್ಮಸಂಯಮನ, ಒಳ್ಳೆಯ ದೃಷ್ಟಿ, ಚುರುಕುತನ, ಸಂಶೋಧಕ ಬುದ್ಧಿ, ಸ್ವಯಂ ನಿರ್ಣಯ ಶಕ್ತಿ, ಸತತ ಪ್ರಯತ್ನ, ಧೈರ್ಯ, ಮುಂದುವರಿಯುವಿಕೆ, ಮೊದಲಾಗುವಿಕೆ. (೧೨) ವ್ಯಾಯಾಮ ಮತ್ತು ಆಟದ ಚಟಗಳು. (೧೩) ಮತ್ತು ಆರೋಗ್ಯ ಚಟಗಳು.

ಸಾಧನೆಗಳು:— ಶಾರೀರಿಕ ಶಿಕ್ಷಣದ ಈ ಉದ್ದೇಶಗಳು ಸಫಲವಾಗಬೇಕಾದರೆ ವಿಶಿಷ್ಟ ಪರಿಸ್ಥಿತಿಯು ಅಥವಾ ಸನ್ನಿವೇಶಗಳು ಬೇಕಾಗುತ್ತವೆ. ಅವುಗಳಿಗೆ ಸಾಧನೆಗಳು ಅಥವಾ ಶಾರೀರಿಕ ಚಟುವಟಿಕೆಗಳು ಎಂದು ಸಾಮಾನ್ಯವಾಗಿ ಹೇಳಬಹುದು. ಈ ಶಾರೀರಿಕ ಚಟುವಟಿಕೆಗಳನ್ನು ಕೆಳಗೆ ಕಾಣಿಸಿದಂತೆ ವಿಭಾಗಿಸಬಹುದು :— (೧) ಆಟಗಳು. (೨) ಓಡುವುದು, ಒಗೆಯುವುದು, ಜಿಗಿಯುವುದು (Athletics) (೩) ನಟನೆಗಳು. (೪) ಗರಡೀ ಸಾಧಕಗಳು. (೫) ಕಸರತ್ತುಗಳು (Stunts) (೬) ತಾಲಬದ್ಧ ಚಟುವಟಿಕೆಗಳು (ಕುಣಿತಗಳು), (೭) ಊರು ಬಿಟ್ಟು ಹೊರಗೆ ಹೋಗುವ ಚಟುವಟಿಕೆಗಳು (ಪ್ರವಾಸಗಳು), (೮) ಉಪಕರಣ ಸಹಿತ ಕವಾಯಿತಗಳು, (೯) ಕೂಚು (ಮಾರ್ಚಿಂಗ್), (೧೦) ವಿನೋದಗಳು ಮತ್ತು (೧೧) ನೀರಾಟಗಳು.

ಸುವರ್ಣ ಸಮಯ

ಸರಕಾರದ ಹಣದಿಂದ ಉದ್ಯೋಗವೃತ್ತಿಗಳನ್ನು ಕಲಿಯುವ ಯೋಜನೆ

ನಮ್ಮ ಜನರಲ್ಲಿ ಬರಿಯ ಪುಸ್ತಕ ವಿದ್ಯೆಯಿಂದ ನಿರುದ್ಯೋಗತನವು ಹೆಚ್ಚಾ
ಗಿರುತ್ತದೆ. ಈ ವಿದ್ಯೆಯು ತಮ್ಮ ಮಕ್ಕಳನ್ನು ಹೊಟ್ಟೆತುಂಬಿಕೊಳ್ಳಲು ಅಸ
ಮರ್ಥರನ್ನಾಗಿ ಮಾಡುತ್ತದೆಂಬುದು ಅಸಂಖ್ಯ ಪಾಲಕರಿಗೆ ಮನವರಿಕೆಯಾಗಿದೆ
ಅದೆಷ್ಟೋ ತರುಣರು ಕನ್ನಡ, ಮರಾಠಿ, ಉರ್ದು ಅಥವಾ ಗುಜರಾತಿ ಅಲ್ಲದೆ
ಕುಸು ಇಂಗ್ರೇಜಿ ಕಲಿತು ಊರಲ್ಲಿ ನಿರುದ್ಯೋಗಿಗಳಾಗಿ ತಿರುಗುತ್ತಿದ್ದಾರೆ
ಇಲ್ಲದಿದ್ದರೆ ಸ್ವಲ್ಪ ಸಂಬಳ ದೊರಕುವ ಶಿಕ್ಷಕ, ಕಾರಕೂನ, ಸಿಪಾಯಿ ಇಂಥ
ನೌಕರಿಯ ಸಲುವಾಗಿ ಅಧಿಕಾರಿಗಳ ಮನೆಮನೆ ಸುತ್ತುತ್ತಿರುತ್ತಾರೆ. ತಮ್ಮ
ಹೊಟ್ಟೆಯನ್ನು ಹೇಗೆ ತುಂಬಿಕೊಳ್ಳಬೇಕೆಂಬುದು ತಿಳಿಯದೆ ಅವರು ಹತಾಶರಾಗಿ
ಕುಳಿತಿರುತ್ತಾರೆ. ಅಂಥ ಜನರಿಗೆ ಈಗ ಬಂಗಾರದಂಥ ಪ್ರಸಂಗವೊದಗಿದೆ
ಮನಸ್ಸು ಮಾಡಿದರೆ ಅವರು ನಿರುದ್ಯೋಗಿಗಳಾಗಿ ಉಳಿಯುವ ಕಾರಣವಿಲ್ಲ

ಸದ್ಯದ ಯುದ್ಧವೆಂದರೆ ಯಾಂತ್ರಿಕಯುದ್ಧವೇ ಸೈ. ತುಂಬ ಯುದ್ಧ
ಸಾಮಗ್ರಿಗಳಿರುವ ಪಕ್ಷವು ಕಡೆಗೆ ಗೆಲ್ಲುವದು ನಿಶ್ಚಯ. ನಮ್ಮ ಸೈನಿಕರ
ಈಗ ಬೇರೆ ಬೇರೆ ಭಾಗಗಳಲ್ಲಿ ಅಂದರೆ— ಇಜಿಪ್ತದಲ್ಲಿಯೂ ಆಸಾಮದ ಗಡಿ
ಯಲ್ಲಿಯೂ ಕಾದುತ್ತಿರುವರು. ಪ್ರತಿತಿಂಗಳು ಸಾವಿರಾರು ತರುಣರು ತಮ್ಮ
ತಾಯಿನಾಡನ್ನು ರಕ್ಷಿಸುವ ಸಲುವಾಗಿ ಸೈನ್ಯದಲ್ಲಿ ಸೇರ್ಪಡೆಯಾಗುತ್ತಿದ್ದಾರೆ
ಅವರಿಗೆ ಯುದ್ಧಸಾಮಗ್ರಿಯ ಅವಶ್ಯಕತೆಯಿದೆ. ಆ ಯುದ್ಧ ಸಾಮಗ್ರಿಯನ್ನು
ನಾವು ಸಕಾಲಕ್ಕೆ ಆ ವೀರರಿಗೆ ಒದಗಿಸಿದರೆ, ಯುದ್ಧವು ಹಿಂದುಸ್ಥಾನದ ಹೊರಗೆ
ನುಕ್ತಾಯವಾಗುವದಲ್ಲದೆ ನಮ್ಮ ದೇಶವು ಭಯಂಕರವಾದ ಸಂಕಟದಿಂದ
ಪಾರಾಗುತ್ತದೆ. ಅದನ್ನು ತಯಾರಿಸುವದಕ್ಕಾಗಿ ದೊಡ್ಡ ದೊಡ್ಡ ಕಾರಖಾನೆ
ಗಳನ್ನು ತೆರೆಯಲಾಗಿದೆ. ಆ ಕಾರಖಾನೆಗಳಲ್ಲಿ ಕೆಲಸಮಾಡಲು ಕುಶಲ ಕೆಲ
ಗಾರರ ಆವಶ್ಯಕತೆಯಿದೆ. ಯಂತ್ರದ ಅಲ್ಪಸ್ವಲ್ಪ ಮಾಹಿತಿಯುಳ್ಳವರೂ, ಪ್ರತ್ಯಕ್ಷ
ವಾಗಿ ಕೈಯಿಂದ ಕೆಲಸಮಾಡ ಬಲ್ಲವರೂ ಆದ ಜನರು ಬೇಕು. ಅತಿಶಿಕ್ಷಿತರೂ
ಅಲ್ಪಶಿಕ್ಷಿತರೂ ಆದ ನಿರುದ್ಯೋಗಿಗಳು ನಮ್ಮಲ್ಲಿ ತುಂಬ ಇದ್ದಾರೆ. ಆದರೆ
ಕಾರಖಾನೆಗಳಲ್ಲಿ ಅಂಥವರ ಉಪಯೋಗವಿಲ್ಲ. ಕಸಬುದಾರರು ಬೇಕಾಗಿ
ದ್ದಾರೆ. ಆದರೆ ಅಂಥವರು ಸುಲಭವಾಗಿ ಸಿಕ್ಕುವದಿಲ್ಲವೆಂದು ಅವರನ್ನು ತ

ೀತುಮಾಡಿ ತೆಗೆದುಕೊಳ್ಳಬೇಕಾಗಿ ಬಂದಿದೆ. ಅದಕ್ಕೊಸುಗ ಉದ್ಯೋಗ ನೃತ್ತಿಯ ಶಿಕ್ಷಣಕೇಂದ್ರಗಳನ್ನು ತೆರೆಯಲಾಗಿದೆ. "ಟೆಕ್ನಿಕಲ್ ಟ್ರೇನಿಂಗ್ ಸೆಂಟರ್ಸ" ಅಂದರೆ ಉದ್ಯೋಗವೃತ್ತಿಗಳನ್ನು ಕಲಿಸುವ ಕೇಂದ್ರಗಳು ನಮ್ಮ ಇಲಾಖೆಯಲ್ಲಿ ೭೬ ಇವೆ. ಮತ್ತು ಇನ್ನೂ ಹೆಚ್ಚು ಹೊರಡಲಿರುವವು. ಹೀಗೆ ಔದ್ಯೋಗಿಕ ಶಿಕ್ಷಣದ ಸೌಕರ್ಯವುಂಟಾಗುವದೆಂಬುದು ಯಾರ ಕನಸು ನುನಸುಗಳಲ್ಲಿಯೂ ಇರಲಿಲ್ಲ. ಆದರೆ ಪರಿಸ್ಥಿತಿಯು ಕೆಲವು ಮಾರ್ಪಾಟಗಳನ್ನು ನೂಡುವದು. ಎಷ್ಟೋ ಸಾರೆ ಕೆಟ್ಟದ್ದು ಒಳಿತಾಗಿ ಪರಿಣಮಿಸುವದು. ಇದಾ ನರೂ ಅಂಥದೇ ಒಂದು ವಿಷಯ. ಮುಂಬಯಿ ನಗರದಲ್ಲಿಯೇ ಇಂಥ ಶಿಕ್ಷಣಕೇಂದ್ರಗಳು ಹೆಚ್ಚಾಗಿವೆ. ಮುಂಬಯಿ ಹೊರಗಿನ ಬೇರೆ ಜಿಲ್ಲೆಗಳ ಲ್ಲಿಯೂ ಅಂಥ ಕೇಂದ್ರಗಳಿವೆ. ಹುಬ್ಬಳ್ಳಿಯ ಎಂ. ಎಸ್. ಎಂ. ರೇಲ್ವೆಯ ಕಾರಖಾನೆಯಲ್ಲಿ ಅನೇಕ ವೃತ್ತಿಗಳನ್ನು ಕಲಿಸುವ ಏರ್ಪಾಡು ಇದೆ. ಗೋಕಾಕದ ಗಿರಣಿಯಲ್ಲಿಯೂ ಇದೆ. ಅದರಂತೆ ಕೊಲ್ಹಾಪುರ, ರತ್ನಾಗಿರಿ, ಪಂಢರಪ್ಪರ, ಸೊಲ್ಲಾಪುರ, ಕುರಡೆವಾಡಿ, ಸಾಂಗಲಿ, ಅಹ್ಮದನಗರ, ಪುಣೆ, ನಾಶಿಕ, ಮುನಮಾಡ, ಧುಳೆ, ಭುಸಾವಳ, ಸುರತ, ನವಸಾರಿ, ಬಡೋದೆ, ಭಾವನಗರ, ಅಹ್ಮದಾಬಾದ ಮೊದಲಾದ ಸ್ಥಳಗಳಲ್ಲಿ ಔದ್ಯೋಗಿಕ ಶಿಕ್ಷಣದ ಏರ್ಪಾಡು ಮಾಡಿದೆ. ಯಾವ ಉಮೇದವಾರರಿಗೂ ಈ ಶಿಕ್ಷಣಕ್ಕಾಗಿ ಮುಂಬಯಿ ಇಲಾ ಖೆಯ ಹೊರಗೆ ಹೋಗಬೇಕಾಗಿಲ್ಲ. ಆದರೆ ಶಿಕ್ಷಣಪಡೆದ ನಂತರ ಕಾರಖಾನೆ ಗಳಲ್ಲಿ ಕೆಲಸಕ್ಕಾಗಿ ಹಿಂದುಸ್ಥಾನದ ಯಾವ ಭಾಗಕ್ಕಾದರೂ ಹೋಗಬೇಕಾಗು ವದು. ಸದ್ಯಕ್ಕೆ ಮುಂಬಯಿ ಇಲಾಖೆಯಲ್ಲಿ ಸುಮಾರು ನಾಲ್ಕು ಸಾವಿರ ವಿದ್ಯಾರ್ಥಿಗಳಿಗೆ ಏಕಕಾಲಕ್ಕೆ ಔದ್ಯೋಗಿಕ ಶಿಕ್ಷಣವನ್ನು ಕೊಡುವ ಅನುಕೂಲತೆ ಇರುವದು. ಈ ಸಂಖ್ಯೆಯನ್ನು ಹಿಂದುಸ್ಥಾನ ಸರಕಾರದವರು ಇನ್ನೂ ಹೆಚ್ಚಿಸ ಲಿರುವರು. ಈ ಯೋಜನೆಯು ಮುಂಬರುವ ಶಿಕ್ಷಣದ ತಳಹದಿಯಾಗುವ ಸಂಬಂತೆ ತೋರುತ್ತದೆ. ಯುದ್ಧಾನಂತರ ನಮ್ಮಲ್ಲಿಯ ಪುಸ್ತಕೀಯ ಶಿಕ್ಷಣದ ಜೊತೆಗೆ ಔದ್ಯೋಗಿಕ ಶಿಕ್ಷಣವೂ ಕೊಡಲ್ಪಡುವದೆಂಬುದರಲ್ಲಿ ಸಂದೇಹವಿಲ್ಲ. ಪ್ರಪಂಚದಲ್ಲಿ ಎಲ್ಲ ಕಡೆಯಲ್ಲಿಯೂ ಮಾರ್ಪಾಟುಗಳು ನಡೆದಿರುವವು: ಯುದ್ಧದನಂತರ ಹಿಂದುಸ್ಥಾನವಾದರೂ ಈಗ ಇದ್ದಂತೆ ಉಳಿಯಲಾರದು. ಕೇವಲ ಬೇಸಾಯದಿಂದ ನಮ್ಮೆಲ್ಲರಿಗೆ ಜೀವಿಸಲು ಸಾಧ್ಯವಾಗಲಿಕ್ಕಿಲ್ಲ, ನಮ್ಮ ದೇಶವು ಕೇವಲ ಉಳಿದ ದೇಶದವರ ಪೇಟೆಯಾಗಿ ಉಳಿಯಲಿಕ್ಕಿಲ್ಲ. ನಮ್ಮ ದೇಶದಲ್ಲಿ ಯಾಂತ್ರಿಕ ಉದ್ಯೋಗಗಳು ಹೆಚ್ಚಾಗುವವು. ಸದ್ಯಕ್ಕೆ ಔದ್ಯೋಗಿಕ ಶಿಕ್ಷಣಪಡೆದವರ ಮಹತ್ವವು ಆಗ ಬಹಳವಾಗಿ ಬೆಳೆಯುವದು. ಆದ್ದರಿಂದ

ತರುಣರೇ, ಸಕಾಲದಲ್ಲಿ ಎಚ್ಚರಾಗಿರಿ! ತಾನಾಗಿ ನಡೆದು ಬಂದ ಸುಸಂಧಿಯ ಲಾಭವನ್ನು ತೆಗೆದುಕೊಳ್ಳಿರಿ.

ಈ ಶಿಕ್ಷಣವನ್ನು ಕೊಡುವದಕ್ಕಾಗಿ ಆರಿಸಲ್ಪಡುವ ಉಮೇದವಾರನ ವಯಸ್ಸು, ಶಿಕ್ಷಣ ಹಾಗು ಇತರ ಯೋಗ್ಯತೆಗಳು

ವಯಸ್ಸು:— ೧೭ ವರ್ಷ ಪೂರ್ಣ ಹಾಗೂ ೪೦ ವರ್ಷಗಳ ಒಳಗೆ ಪ್ರಕೃತಿಯು ಸದೃಢವಾಗಿರಬೇಕು.

ಶಿಕ್ಷಣ:— ಕನ್ನಡ, ಮರಾಠಿ, ಗುಜರಾತಿ ಹಾಗೂ ಉರ್ದು ಶಿಕ್ಷಣ: ಪ್ರತಿಯೊಬ್ಬ ಉಮೇದವಾರನ ಮಾತೃಭಾಷೆಯಂತೆ ತೀರ ಕಡಿಮೆಯೆಂದ ಸಾಧಾರಣವಾಗಿ ಪ್ರಾಥಮಿಕ ೪ನೇ ಇಯತ್ತೆಯ ವರೆಗೆ ಆಗಿರಬೇಕು. ಇಂಗ್ಲಿ ಶಿಕ್ಷಣವಾಗಿದ್ದರೆ ಒಳ್ಳೆಯದು, ಮ್ಯಾಟ್ರಿಕ್‌ದವರೆಗೆ ಇಂಗ್ಲಿಷ ಕಲಿತವರಿಗೆ ಇಲ್ಲ ಆ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಿಗೆ ಹೆಚ್ಚು ಲಾಭದಾಯಕ ಉದ್ಯೋಗಗಳನ್ನು ಕಲಿಯಲಿಕ್ಕೆ ಬರುತ್ತದೆ. ಹೆಚ್ಚು ವಿದ್ಯಾರ್ಥಿವೇತನವೂ ಸಿಕ್ಕಬಹುದು.

ಇತರ ಯೋಗ್ಯತೆ:— ಉಮೇದುವಾರನು ಬ್ರಿಟಿಶ್ ಇಲ್ಲವೆ ಸಂಸ್ಥಾನ ಪ್ರಜೆ ಇರಬೇಕು. ಅವನ ಒಳ್ಳೆಯ ನಡತೆಯ ಸಲುವಾಗಿ ಇಬ್ಬರು ಸಂಭಾವಿ ಗೃಹಸ್ಥರ ದಾಖಲೆಗಳು ಬೇಕು.

ಈ ಉದ್ಯೋಗವೃತ್ತಿ ಶಿಕ್ಷಣವು ಬೇರೆ ಬೇರೆ ಕೇಂದ್ರ ಸ್ಥಾನಗಳಲ್ಲಿ ಪುಕ್ಕಟೆಯಾಗಿ ಸಿಕ್ಕುತ್ತದೆ; ಇಷ್ಟೇ ಅಲ್ಲ, ಶಿಕ್ಷಣದ ಅವಧಿಯಲ್ಲಿ ವಿದ್ಯಾರ್ಥಿ ವೇತನವೂ ಸಿಕ್ಕುತ್ತದೆ.

ವಿದ್ಯಾರ್ಥಿವೇತನಗಳು ಕೆಳಗೆ ಕಾಣಿಸಿದಂತೆ ಇವೆ.

	ಮುಂಬಯಿ ನಗರ ಪುಣೆ, ಅಹ್ಮದಾಬಾದ ಪ್ರತಿತಿಂಗಳ ರೂ.	ಇತರ ಸ್ಥಳ ಪ್ರತಿತಿಂಗಳ ರೂ.	ಪ್ರತಿತಿಂಗಳ ರೂ
ಮಾತೃಭಾಷೆಯ ಶಿಕ್ಷಣವು ಇಲ್ಲವೆ ಇಂಗ್ಲಿಷ ಶಿಕ್ಷಣವು ಮ್ಯಾಟ್ರಿಕ್ ವರೆಗೆ ಆಗಿದ್ದರೆ—	೨೬	೨೫	೨೪
ಮ್ಯಾಟ್ರಿಕ್‌ಪರೀಕ್ಷೆಯಲ್ಲಿ ತೇರ್ಗಡೆ ಇಲ್ಲವೆ ಅದಕ್ಕಿಂತ ಹೆಚ್ಚು ಶಿಕ್ಷಣವಾಗಿದ್ದರೆ—	೩೧	೩೦	೨೯

ವೃತ್ತಿಶಿಕ್ಷಣ ಪಡೆದರೆ, ಯಾವ ಕೆಲಸಗಾರನಾಗಲು ಬರುತ್ತದೆ:— ಟರ್ನರ್, ಫಿಟರ್, ಮಶೀನಿಸ್ಟ, ಬಡಿಗ, ಕಮ್ಮಾರ, ಇಲೆಕ್ಟ್ರೀಶಿಯನ್, ವೆಲ್ಡರ ಮೋಲ್ಡರ್, ಪ್ಲಂಬರ್, ಬಾಯಲರ್ ಅಟೆಂಡಂಟ್, ಪೇಂಟರ್, ಡ್ರಾಫ್ಟ್ಸ್‌ಮನ್, ಸರ್ವೇಯರ್, ಟಿನ್‌ವಾಲಾ, ಕಂಚುಗಾರ, ವಾಯರಮನ್, ವಾಯರ್‌ಲೆಸ್ ಆಪರೇಟರ್, ಇನ್‌ಸ್ಟ್ರುಮೆಂಟ ಮೆಕ್ಯಾನಿಕ್ ಇತ್ಯಾದಿ.

ಟೀಪು:— ಮ್ಯಾಟ್ರಿಕ್ ಇಲ್ಲವೆ ಹೆಚ್ಚಿನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಉಮೇದವಾರನಿಗೆ ಡ್ರಾಫ್ಟ್ಸಮನ್ ಸರ್ವೇಯರ್, ವಾಯರಲೆಸ್ ಆಪರೇಟರ್, ಮತ್ತು ಇನ್‌ಸ್ಟ್ರುಮೆಂಟ ಮೆಕ್ಯಾನಿಕ್ ಈ ಕೆಲಸಗಳನ್ನು ಕಲಿಯುವ ಸಲುವಾಗಿ ಪ್ರತಿತಿಂಗಳು ೪೫ ರೂಪಾಯಿ ವಿದ್ಯಾರ್ಥಿವೇತನ ಸಿಗುತ್ತದೆ.

ಶಿಕ್ಷಣದ ಅವಧಿ:— ತೀರ ಹೆಚ್ಚೆಂದರೆ ಒಂದು ವರ್ಷದ ವರೆಗೆ ಶಿಕ್ಷಣ ಕೊಡಲಾಗುತ್ತದೆ. ಟರ್ನರ್, ಫಿಟರ್, ಮಶಿನಿಷ್ಟ, ವಾಯರ್‌ಮನ್ ಮೊದಲಾದ ವೃತ್ತಿಗಳ ತರಬೇತು ಆರೇಳು ತಿಂಗಳಲ್ಲಾಗುವದು. ತರಬೇತಾದ ಮೇಲೆ ಪರೀಕ್ಷೆ ಆಗುತ್ತದೆ. ಹಾಗೂ ಅದರಲ್ಲಿ ತೇರ್ಗಡೆ ಹೊಂದಿದರೆ ಕಾರ್ಖಾನೆಗಳಲ್ಲಿ ಇಲ್ಲವೆ, ಸೈನ್ಯದೊಡನೆ ಕೆಲಸಗಾರನೆಂದು ಉಮೇದವಾರನ ಇಚ್ಛೆಯಂತೆಯೂ, ಯೋಗ್ಯತೆಯಂತೆಯೂ ನೌಕರಿ ಕೊಡುವದರಲ್ಲಿ ಬರುವದು.

ವೃತ್ತಿಶಿಕ್ಷಣದ ಪರೀಕ್ಷೆಯಲ್ಲಿ ತೇರ್ಗಡೆಯಾದಮೇಲೆ ಸಿಗುವ ನೌಕರಿ ಹಾಗೂ ಸಿಕ್ಕುವ ಸಂಬಳ:— ಬಿನ್ ಲಷ್ಕರೀ ಕಾರಖಾನೆಯಲ್ಲಿ ಆರ್ಡನನ್ಸ್ ಫ್ಯಾಕ್ಟರಿಯಲ್ಲಿ, ಆರ್ಸೆನಲ್ಲದಲ್ಲಿ, ಇಲ್ಲವೆ ಇಂಡಿಯನ್ ಡಿಫೆನ್ಸ್ ಫೋರ್ಸದಲ್ಲಿ ಕೆಲಸಗಾರನೆಂದು ನೌಕರಿ ಸಿಕ್ಕುತ್ತದೆ. ಆರಂಭದ ಸಂಬಳವು ಯೋಗ್ಯತೆಗೆ ತಕ್ಕಂತೆ ೫೦ ರೂ. ಯಿಂದ ೬೦ ರೂ. ಆಲ್ಲದೆ ಸೈನ್ಯದಲ್ಲಿ ಕುಶಲನಾದ ಕೆಲಸಗಾರನೆಂದು ದಾಖಲನಾದರೆ ಇರಲಿಕ್ಕೆ ಪುಕ್ಕಟೆಯಾದ ಸ್ಥಳ, ಪುಕ್ಕಟೆ ಊಟ, ಪುಕ್ಕಟೆಯಾದ ಅರಿವೆ ಅಂಚಡಿ ಹಾಗೂ ಔಷಧೋಪಚಾರ ಸಿಕ್ಕುತ್ತವೆ. ಕೆಲಸಗಾರನ ಎಲ್ಲತರದ ಕಾಳಜೀತೆಗೆದುಕೊಳ್ಳುವದರಲ್ಲಿ ಬರುತ್ತದೆ. ಈಗ ನೌಕರಿಯಲ್ಲಿ ತೆಗೆದುಕೊಂಡ ಎಲ್ಲ ಕೆಲಸಗಾರರಿಗೆ ಯುದ್ಧವು ಮುಗಿದಮೇಲೆ ಒಂದು ವರ್ಷದ ವರೆಗೆ ನೌಕರಿಯಲ್ಲಿ ಇಡಲಾಗುವದು. ಔದ್ಯೋಗಿಕ ಶಿಕ್ಷಣ ಪಡೆದದ್ದರಿಂದ ಆ ಮೇಲೆಯೂ ನಿರುದ್ಯೋಗಿಯಾಗಿ ಉಳಿಯುವ ಕಾರಣವಿಲ್ಲ. ಕೆಲಸಗಾರನೆಂದು ಆರಿಸಿದ ಇಸಮನ್ನು ಸೈನಿಕರ ಕೆಲಸಮಾಡಲು ಹಚ್ಚುವದಿಲ್ಲ.

ಮೇಲೆ ಕಾಣಿಸಿದ ಮಾಹಿತಿಯು ಮೇಲಿಂದ ತಿಳಿದುಬರುವದೇನಂದರೆ:— ನಮ್ಮ ತರುಣರಿಗೆ ಸುವರ್ಣಸಮಯವು ಪ್ರಾಪ್ತವಾಗಿದೆ. ಯಾರೂ ನಿರುದ್ಯೋಗಿಗಳಾಗಿ ಉಳಿಯುವ ಕಾರಣವಿಲ್ಲ. ನಮ್ಮ ತರುಣರಿಗೆ ಉದ್ಯೋಗವೃತ್ತಿಯ ಶಿಕ್ಷಣ ದೊರೆಯಲೆಂದು ನಾವು ಅನ್ನುತ್ತಿದ್ದೆವು. ಅದನ್ನು ಪಡೆಯುವ ಸಮಯವು ಈಗ ಬಂದಿದೆ. ಶಾಲೆಯಲ್ಲಿ ಸಿಕ್ಕುವ ಸಾಮಾನ್ಯ ಶಿಕ್ಷಣಕ್ಕಿಂತ ಈ ಶಿಕ್ಷಣವು ನಮ್ಮ ದೇಶಕ್ಕೆ ಹೆಚ್ಚು ಉಪಯುಕ್ತವಾದದ್ದು. ಸಾಮಾನ್ಯ ಪುಸ್ತಕೀಯ ಶಿಕ್ಷಣದಿಂದ ನಿರುದ್ಯೋಗತನವು ಬೆಳೆಯುತ್ತದೆ. ಆದರೆ ಈ ಶಿಕ್ಷಣದಿಂದ ನಿರುದ್ಯೋಗವು ಅಳಿಯುತ್ತದೆ. ಯುದ್ಧಾನಂತರ ನಮ್ಮ ದೇಶದೊಳ

ಗಿನ ಉದ್ಯೋಗವೃತ್ತಿಗಳು ಹೆಚ್ಚಾಗುತ್ತವೆ. ಯುದ್ಧ ಸಾಮಗ್ರಿಗಳನ್ನು ತಯಾರಿಸುವ ಕಾರಖಾನೆಗಳು ಶಾಂತತೆಯ ವೇಳೆಯಲ್ಲಿ ಸುಖಜೀವನಕ್ಕೆ ಅವಶ್ಯವಾದ ಪದಾರ್ಥಗಳನ್ನು ತಯಾರಿಸತೊಡಗುತ್ತವೆ. ಕುಶಲ ಕೆಲಸಗಾರರಿದ್ದ ಮೇಲೆ ನಮ್ಮ ದೇಶವು ಉದ್ಯೋಗಪೂರಿತವಾಗಲಿಕ್ಕೆ ಅಡಚಣೆಯುಂಟಾಗುವದಿಲ್ಲ. ದೇಶದ ಸಾಂಪತ್ತಿಕಸ್ಥಿತಿಯೂ ಸುಧಾರಿಸುವದು. ಯುದ್ಧ ಸಾಮಗ್ರಿಯನ್ನು ಹೇಗೆ ತಯಾರಿಸಬೇಕೆಂಬ ತಿಳಿವಳಿಕೆಯು ನಮ್ಮ ತರುಣರಿಗೆ ಉಂಟಾದರೆ ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವದರಲ್ಲಿಯೂ ಅದರ ಉಪಯೋಗವಾಗುತ್ತದೆ. ಈಗ ಸೈನ್ಯದಲ್ಲಿ ಸೇರಿದರೆ ಯುದ್ಧಕಲೆಯ ಶಿಕ್ಷಣವು ಸಿಕ್ಕುವದು, ಕಾರ್ಖಾನೆಗಳಲ್ಲಿ ಸೇರಿದರೆ ಯಂತ್ರಕಲೆಯ ಶಿಕ್ಷಣವು ಸಿಕ್ಕುವದು. ಎರಡೂವಿಧದ ಶಿಕ್ಷಣದಿಂದ ನಮ್ಮ ದೇಶವು ಬಲಿಷ್ಠವಾಗುವದು. ಆದ್ದರಿಂದ ಈಗ ಒದಗಿರುವ ಸುಪ್ರಸಂಗದ ಲಾಭವನ್ನು ಪೂರ್ತಿಯಾಗಿ ತೆಗೆದುಕೊಳ್ಳುವದು ನಮ್ಮ ಕರ್ತವ್ಯವಾಗಿದೆ. ಇಂಥ ಸುಸಮಯಗಳು ಮೇಲಿಂದಮೇಲೆ ಬರಲಾರವು.

ಹೆಚ್ಚು ಮಾಹಿತಿಗಾಗಿಯೂ ಅರ್ಜಿಯ ನಮೂನೆಗಳಿಗಾಗಿಯೂ ಕೆಳಗೆ ಕಾಣಿಸಿದ ಸ್ಥಳಗಳಲ್ಲಿರುವವರಿಗೆ ಭೆಟ್ಟಿಯಾಗಿರಿ; ಇಲ್ಲವೆ ಬರೆಯಿರಿ—

ಮುಂಬಯಿ ನಗರದ ಉಮೇದವಾರರ ಸಲುವಾಗಿ ಹಾಗೂ ಈ ಯೋಜನೆಯ ಸರ್ವಸಾಮಾನ್ಯ ಮಾಹಿತಿಯ ಸಲುವಾಗಿ:— ನ್ಯಾಶನಲ್ ಸರ್ವಿಸಲೇಬರ್ ಟ್ರಿಬ್ಯುನಲ್, ಹಸನ ಚೇಂಬರ್ಸ್; ಪಾರ್ಸೀಬಝಾರ ಸ್ಟ್ರೀಟ್, **ಮುಂಬಯಿ.**

ಜಿಲ್ಲೆಯಲ್ಲಿ ಚೌಕಶಿ ಮಾಡುವುದೆಲ್ಲಿ ?— ಬೇರೆ ಬೇರೆ ಜಿಲ್ಲೆಗಳಲ್ಲಿಯ ಕಲೆಕ್ಟರಸಾಹೇಬರ ಕಚೇರಿಯಲ್ಲಿ ಹಾಗು ಡೆಪ್ಯೂಟೀ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಇವರ ಕಚೇರಿಯಲ್ಲಿ; ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರ ಕಡೆಗೆ; ಟೆಕ್ನಿಕಲ್ ಟ್ರೇನಿಂಗ್ ಸೆಂಟರದ ಮುಖ್ಯಸ್ಥರ ಕಡೆಗೆ ಇಲ್ಲವೆ, ಹತ್ತಿರದಲ್ಲಿಯೇ ಇರುವ ಟೆಕ್ನಿಕಲ್ ರಿಕ್ರೂಟಿಂಗ್ ಅಥವಾ ಅಸಿಸ್ಟಂಟ ರಿಕ್ರೂಟಿಂಗ್ ಆಫಿಸರರ ಕಡೆಗೆ.

ನ್ಯಾಶನಲ್ ಸರ್ವಿಸ ಲೇಬರ ಟ್ರಿಬ್ಯುನಲ್ ಪೋರ್ಟ
ಮುಂಬಯಿ.
ತಾ. ೧೫–೧೧–೧೯೪೨

ಸೀ. ರಾ. ತಾವಡೆ
ಪಬ್ಲಿಸಿಟೀ ಆಫೀಸರ್
ಟೆಕ್ನಿಕಲ್ ಸ್ಕೀಮು, ಗವ್ಹರ್ನಮೆಂಟ ಆಫ್ ಇಂಡಿಯಾ.

ಶ್ರೀ ಕೈಲಾಸಯಾತ್ರೆ ಅಥವಾ ಶಿವಸಾಮ್ರಾಜ್ಯ ವರ್ಣನೆ

ಲೇಖಕರು : ಶ್ರೀ. ಗೋಸಾವಿ

ಹಿಮಾಲಯದ ಪ್ರವಾಸದಲ್ಲಿ ಕೈಲಾಸ--ಮಾನಸಸರೋವರಗಳ ಯಾತ್ರೆಯೇ ಎಲ್ಲಕ್ಕೂ ಕಠಿಣವಾದದ್ದು. ಯಾತ್ರಿಕರು ಕರ್ನಾಟಕದ ಯಾವದೇ ಭಾಗದಿಂದ ಹೋದರೂ ಮುಂಬೈ, ಮನಮಾಡ, ಝಾನ್ಸಿ, ಬರೇಲಿ ಮಾರ್ಗವಾಗಿ ಕಾಠಗೋದಾಮ ಸ್ಟೇಶನ್ನಿಗೆ ಮುಟ್ಟಿ ಅಲ್ಲಿಂದ ಮುಂದೆ ಮೋಟಾರ ಮಾರ್ಗವಾಗಿ ಅಲ್ಮೋರಾಕ್ಕೆ ಹೋಗಬೇಕಾಗುವದು. ಅಲ್ಲಿಂದಲೇ ಈ ಯಾತ್ರೆಯು ಆರಂಭವಾಗುವದು. ಇಲ್ಲಿಂದಕೈಲಾಸದ ವರೆಗೆ ಸುಮಾರು ೨೫೦ ಮೈಲು ಕಾಲುನಡಿಗೆಯಿಂದಲೂ ಕುದುರೆ-ಹೇಸರಗತ್ತೆ ಮತ್ತು ಜೌರಿಅಕಳುಗಳ ಮೇಲೆಯೂ ಪ್ರವಾಸ ಮಾಡಬೇಕಾಗುವದು. ಈ ಪ್ರವಾಸಮಾರ್ಗದಲ್ಲಿ ಮೂರು ಭಾಗಗಳನ್ನು ಮಾಡಬಹುದು. ಮೊದಲಿನ ಭಾಗದಲ್ಲಿ ಆವಶ್ಯಕ ಆಹಾರಸಾಮಗ್ರಿಗಳು ದೊರೆಯುವ ತಂಗಡಿಗಳಿವೆ. ಎರಡನೆಯ ಭಾಗದಲ್ಲಿ ಆಯಾ ಹಳ್ಳಿಗಳಲ್ಲಿರುವ ಭೋಟಿಯಾ ಜನರಿಂದಲೇ ಅವನ್ನು ಪಡೆಯಬೇಕಾಗುತ್ತದೆ. ಮತ್ತು ಅವರ ಮನೆಯಲ್ಲಿಯೇ ಇಳಿಯಬೇಕಾಗುತ್ತದೆ. ಹಿಂದುಸ್ತಾನದ ಸರಹದ್ದನ್ನು ದಾಟುವ ಮೊದಲು ಗರ್ಬಿಯಾಂಗದಿಂದ ಕೈಲಾಸದ ವರೆಗೆ ಹೋಗಿಬರುವಾಗ ತಂಬುಗಳಲ್ಲಿಯೇ ವಾಸಿಸಿ ಹುರಿದ ಹಿಟ್ಟನ್ನೂ, ನೆನೆದ ಕಡಲೆ ಅಕ್ಕಿಗಳನ್ನೂ ತಿಂದು ಕಾಲಕಳೆಯಬೇಕಾಗುತ್ತದೆ.

ನಾನು ಅಲ್ಮೋರಾದಿಂದ ಮೊದಲು ಉತ್ತರ ವೃಂದಾವನಕ್ಕೆ ಹೋದೆನು. ಇಲ್ಲಿ ಶ್ರೀಕೃಷ್ಣಪ್ರೇಮಿಗಳೆಂಬ ಒಬ್ಬ ಸಂತರ ಆಶ್ರಮವಿದೆ. ಇವರ ಪೂರ್ವಾಶ್ರಮದ ಹೆಸರು ಪ್ರೊ. ನೆಕ್ಸನ್. ಇವರು ಒಬ್ಬ ಯುರೋಪಿಯನ್ನರು; ಲಖನೌ ಕಾಲೇಜಿನಲ್ಲಿದ್ದರು. ಸದ್ಯ ಇವರು ಹಿಂದೂಧರ್ಮವನ್ನು ಸ್ವೀಕರಿಸಿದ್ದು ಇಲ್ಲಿ ಒಂದು ಕೃಷ್ಣನ ಗುಡಿಯನ್ನೂ ಆಶ್ರಮ ವಾಚನಾಲಯಗಳನ್ನೂ ಸ್ಥಾಪಿಸಿಕೊಂಡು ಏಕಾಂತವಾಸದಲ್ಲಿ ಭಗವದ್ಭಜನೆಮಾಡುತ್ತ ಆನಂದದಲ್ಲಿದ್ದಾರೆ. ಪ್ರೊ. ಸಯ್ಯದ, ಡಾ. ಪೋಲ್ ಮೊದಲಾದ ಮತ್ತೆ ಕೆಲವರೂ ಇವರೊಂದಿಗೆ ಇರುತ್ತಾರೆ. ನಾನು ಇವರೊಂದಿಗೆ ಎಂದು ದಿನ ಇದ್ದು ಮುಂದೆ ಹೊರಟೆನು.

ಮೊದಲನೇ ಭಾಗದ ಕೊನೆಯ ಊರಾದ ಧಾರಾಚೂಲಾದಲ್ಲಿರುವ ರಾಮಕೃಷ್ಣಾಶ್ರಮವು (ಅದರ ವ್ಯವಸ್ಥಾಪಕಳು ಉಮಾದೇವಿ ಗರ್ಬಿಯಾಲಿ) ಮಹತ್ವದ ಸ್ಥಾನವು. ಇಲ್ಲಿಂದಲೇ ನಾನು ಮುಂದಿನ ಕಠಿಣವಾದ ಏರಿಳಿವುಗಳ ಮಾರ್ಗವನ್ನು

ದಾಟುತ್ತ, ಭೋಟಿಯಾ ಜನರ ನೃತ್ಯಮಯ ಜೀವನದ ಪರಿಚಯಮಾಡಿಕೊಳ್ಳುತ್ತ ಉಮಾದೇವಿಯೊಂದಿಗೆ ಗರ್ಬಿಯಾಂಗಕ್ಕೆ ಮುಟ್ಟಿದೆನು. ಇವಳೊಬ್ಬ ಒಳ್ಳೇ ದೇವ-ಭಕ್ತಳು. ಇವಳಿಗೆ ಸೇವೆಮಾಡುವದರಲ್ಲಿಯೇ ಆನಂದ. ಇವಳ ಸಹಾಯದಿಂದ ನಾನು ಬರ್ಫಾಚ್ಛಾದಿತ ಕಠಿಣವಾದ ಮಾರ್ಗವನ್ನು (ಸಂಗಡ ಕಳಿಸಿದ ಸಹಾಯ-ಕನ ನೆರವಿನಿಂದ) ದಾಟಿ ಸುರಕ್ಷಿತವಾಗಿ ಈ ಯಾತ್ರೆ ಮುಗಿಸಿದೆನು. ಹಿಂದುಸ್ತಾನದ ಹದ್ದನ್ನು ಬಿಡುವಾಗ ಗಿಡ-ಮರಗಳುಳ್ಳ ಹಚ್ಚನ್ನ ಭೂಭಾಗವನ್ನೂ ಪಶು-ಪಕ್ಷಿಗಳನ್ನೂ ಹಿಂದೆ ಬಿಟ್ಟು ಉಸಿರುಗಟ್ಟುವಂಥ ೧೭೫೦೦ ಫೂಟು ಎತ್ತರವಾದ ಲಿಪುಲೇಕ ಪಾಸ್ (Death Trap) ಎಂಬ ಹಿಮದ ಗೋಡೆಯನ್ನು ಮುಂಜಾನೆ ಮೂರು ಗಂಟೆಗೆ ಹೊರಟು ದಾಟಬೇಕಾಯಿತು. ಅದನ್ನು ದಾಟುವದರೊಳಗೇ ಪಾಂಡವರ ಸ್ವರ್ಗಾರೋಹಣದ ಅನುಭವವು ನಮ್ಮೆಲ್ಲರಿಗೆ ಬಂದಿತು. ಆದರೂನಮ್ಮ ಸಂಗಡಿಗರಾದ ಬ್ಯಾರಿಸ್ಟರ ಪಿ. ಕೆ. ಮುಕರ್ಜಿಯವರೂ ಅವರ ಸಂಗಡಿಗರೂ ಸುಸಜ್ಜಿತವಾಗಿದ್ದುದರಿಂದ ಅನೇಕ ಔಷಧೋಪಚಾರ ಮಾಡಿ ಎಚ್ಚರದಪ್ಪಿ ಬಿದ್ದ ಕೆಲವರನ್ನು ಕೈಲಾಸಕ್ಕೆ ಮುಟ್ಟಿಸಲನುವಾಯಿತು. ಇಲ್ಲಿಂದ ನಾವು ತಿಬೇಟದ ಹದ್ದಿನಲ್ಲಿ ಪ್ರವೇಶಮಾಡುವ ಮೊದಲು ಶುಭ್ರ ಹಿಮರಾಶಿಯಲ್ಲಿ ಮಿಂದು ಶುದ್ಧರಾಗೇ ಹಕ್ಕಿ-ಪಕ್ಕಿ ಮನೆಮಾರುಗಳಿಲ್ಲದ ಶಿವನ ಸಾಮ್ರಾಜ್ಯಕ್ಕೆ ಮುಟ್ಟಬೇಕಾಯಿತು.

ನಾವೆಲ್ಲರೂ ಪಶ್ಚಿಮ ತಿಬೇಟದ ಮುಖ್ಯಸ್ಥಾನವಾದ ತಕ್ಲಾಕೋಟ ಎಂಬ ಸ್ಥಳದಲ್ಲಿ ಒಂದೆರಡು ದಿನವಿದ್ದು ಅಲ್ಲಿಯ ಬುದ್ಧರ ಮಠ ಹಾಗು ಗವ್ಹರ್ನರರ ಭೆಟ್ಟಿ ಪಡೆದು ಮುಂದೆ ಸಾಗಿದೆವು. ಮಾನಸ ಸರೋವರಕ್ಕೆ ಮುಟ್ಟುವ ಮೊದಲು ಮಾಂಧಾತ ಪರ್ವತವನ್ನು ಬಲಕ್ಕೆ ಬಿಟ್ಟು (೨೫೦೦೦ ಫೂ. ಎತ್ತರ) ರಾಕ್ಷಸ ತಲಾವವನ್ನು ಎಡಕ್ಕೆ ಹಾಕಿಕೊಂಡು ಸಾಗಬೇಕು. ಮಾರ್ಗದಲ್ಲಿ ಮೂರು ಕಡೆಗೆ (ತಂಬುಗಳಲ್ಲಿ) ವಾಸವಾಗಿದ್ದೆವು. ಇಲ್ಲಿಯ ಸ್ವತಂತ್ರ್ಯ ವೃತ್ತಿಯಲ್ಲಿ ವಿಹರಿಸುವ ವಾಯುವೇಗದ ಅಡವಿಯ ಕುದುರೆಗಳನ್ನು ನೋಡಿ ಬಹಳೇ ಆನಂದವಾಯಿತು. ಸ್ವಾತಂತ್ರತೆಯು ಅಷ್ಟು ಪ್ರಿಯವಾದದ್ದಲ್ಲವೇ ?

ಮುಂದೆ ಮಾನಸರೋವರದ ದಂಡೆಯಲ್ಲಿ ವಾಸಮಾಡಿ ಹಂಸ ಪಕ್ಷಿಗಳ ಹಿಂಡಿನೊಂದಿಗೆ ಆನಂದದಿಂದ ಆ ಸರೋವರದಲ್ಲಿ ಸ್ನಾನಮಾಡಿ ಕೈಲಾಸದ ದರ್ಶನ ಪಡೆದವು. ಸದ್ದಿಲ್ಲದ (ನೊಣ-ಇರಿವೆಗಳೂ ಇಲ್ಲದ) ಈ ಶಾಂತ ವಾತಾವರಣದಲ್ಲಿ ಎಷ್ಟೋ ತಪಸ್ವಿಗಳು ತಮ್ಮ ಸಮಾಧಿ ಸುಖದಲ್ಲಿ ತಲ್ಲೀನವಾಗಿರುವದನ್ನು ನೋಡಿ ಬಹಳೇ ಆನಂದವಾಯಿತು. ಶಿವನ ವಾಸಸ್ಥಾನಕ್ಕೆ ಮುಟ್ಟಿ ಕವಿಯ ವರೆಗೆ ಕಾಲುಗಳನ್ನೇರಿಸಿ ರಾತ್ರಿ ಕಳೆಯುವಾಗ್ಗೆ ಮಾಯ್‌ನಸ್ ೧೮-೨೦ಡಿಗ್ರಿ ಉಷ್ಣತೆಯಲ್ಲಿ ನಾವೂ ಸಮಾಧಿಯಲ್ಲಿದ್ದೆವು. ಡಿಡಿಫುಗುಂಫಾದಿಂದ ಕೈಲಾಸದರ್ಶನವು ಮನೋ

ಹರವಾದದ್ದು. ನಾವು ಇಲ್ಲಿಯ ಹಿಮನದಿಯ ದಂಡೆಯಲ್ಲಿ ಶಿವಲಿಂಗಾಕಾರವಾಗಿ ಕಾಣುವ ಶುಭ್ರ ಕೈಲಾಸಪತಿಯ ದರ್ಶನದಲ್ಲಿ ೩ ತಾಸು ಕಳೆದು, ಮೊಳಕಾಲು ಕಿವಿಗಳ ಆಸನದಲ್ಲೇ ಅವನ ಧ್ಯಾನಮಾಡುತ್ತ ರಾತ್ರಿಯನ್ನೆಲ್ಲ ತಿರುವಿ ಹಾಕಿ ಕುಂಭಕದಲ್ಲಿಯೇ ೧೮೫೦೦ ಫೂ. ಎತ್ತರವಾದ (ಡೊಲ್ಮಾಪಾಸ್) ಗೌರೀ ಕುಂಡಕ್ಕೆ ಮುಟ್ಟಿದೆವು. ಇಲ್ಲಿಯ ಬರ್ಫಿನ ಕೆರೆಯಲ್ಲಿ ಕಾಜಿನಂಥ ಹೊದಿಕೆಯನ್ನು ಒಡೆದು ಸ್ನಾನಮಾಡಿ ಸಮಾಧಿ ಹಚ್ಚಿಕೊಂಡೆವು. ಅಲ್ಲಿಗೇ ನಮ್ಮ ಕೈಲಾಸಯಾತ್ರೆಯೂ ಪೂರ್ಣವಾದಂತಾಯಿತು. ಮುಂದೆ ದರ್ಚಿನ್ ಗುಂಫಾದ ವರೆಗೆ ಪ್ರದಕ್ಷಿಣೆಯನ್ನು ಮುಗಿಸಿಕೊಂಡು ತಿರುಗಿ, ಬಂದ ಮಾರ್ಗದಿಂದಲೇ ಅಲ್ಮೋರಾಕ್ಕೆ ತೆರಳಿದೆವು. ಮಾರ್ಗದಲ್ಲಿ ಅಡ್ಡ ಸ್ವಲ್ಪ ಹೋಗಿ ಖೋಚದನಾಥ ಎಂಬ ರಾಮ ಲಕ್ಷ್ಮಣ ಸೀತೆಯ ಮಂದಿರ—ಮಠಗಳನ್ನೂ ನೋಡಿದೆವು. ಇದು ನಾನು ಕಣ್ಣಾರೆ ಕಂಡು-ಬಂದ ಶಿವಸಾಮ್ರಾಜ್ಯದ ವರ್ಣನೆಯು.

ಒಂದು ಕವನ

ಬನವಾಸಿ— ಉರ್ದು ಸ್ಕೂಲಿನ ಹೆಡ್‌ಮಾಸ್ತರರು, ತಮ್ಮ ಮಿತ್ರರಾದ ಶ್ರೀ. ತೆರನಮಕ್ಕಿ ಇವರು ಸಿರ್ಸಿ ಕ್ಯಾಂಪಿನ ಶಾರೀರಿಕ ಶಿಕ್ಷಣದ ಪಾಲಕರಾದ ಶ್ರೀ. ದೇಸಾಯಿಯವರ ಸ್ತುತಿಪರವಾಗಿ ರಚಿಸಿರುವ ಕವಿತೆಗಳನ್ನು ಪ್ರಕಟನೆಗಾಗಿ ಕಳಿಸಿರುವರು.

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ (ಪುಟ ೬ ಸಾಲು ೮) ಪ್ರಕಟವಾದ ಹಿಂದುಸ್ತಾನ ಸರಕಾರದ ಔದ್ಯೋಗಿಕ ಶಿಕ್ಷಣದ ಯೋಜನೆ ಎಂಬ ಲೇಖನದಲ್ಲಿ ಮೆಟ್ರಿಕ್ ಪಾಸಾದ ಉಮೇದವಾರರು ಪುಣೆ ಮತ್ತು ಅಹಮದಾಬಾದಗಳಲ್ಲಿ ಶಿಕ್ಷಣ ಪಡೆಯುತ್ತಿರುವಾಗ ಅವರಿಗೆ ೩೦ ರೂ. ವಿದ್ಯಾರ್ಥಿ ವೇತನವು ದೊರೆಯುವದು ಎಂದು ತಿದ್ದಿಕೊಂಡು ಓದ ಬೇಕು. ಅದು ೨೬ ರೂ. ಎಂದು ತಪ್ಪಿ ಮುದ್ರಿತವಾಗಿದೆ. [ಸಂ.]

ಪ್ರಕಟನೆ ೧

ಮಿಡಲ್ ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆ ೧೯೪೩

ದಕ್ಷಿಣಭಾಗ

೧. ಕೆಳಗೆ ಬರೆದಂತೆ ಸಾರ್ವತ್ರಿಕ ಮತ್ತು ವಿಶಿಷ್ಟಪ್ರಕಾರದ ವಿದ್ಯಾರ್ಥಿ ವೇತನಗಳನ್ನು ಕೊಡುವದರ ಸಲುವಾಗಿ ನಡೆಯುವ ಈ ವರ್ಷದ ಮಿಡಲ್ ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯು ೧೯೪೩ ನೆಯ ಇಸ್ವಿಯ ಫೆಬ್ರುವರಿ ತಿಂಗಳ ೧೧ ಮತ್ತು ೧೨ ನೆಯ ತಾರೀಖು ಗುರುವಾರ ಮತ್ತು ಶುಕ್ರವಾರಗಳ ದಿವಸ ದಕ್ಷಿಣಭಾಗದೊಳಗಿನ ಪ್ರತಿಯೊಂದು ಜಿಲ್ಲೆಯ ಕೇಂದ್ರದಲ್ಲಿ ನಡೆಯುವದು.

ಈ ಕೆಳಗೆ ಬರೆದಷ್ಟು ಸ್ಕಾಲರ್‌ಶಿಪ್ಪುಗಳು ಆಯಾ ಜಿಲ್ಲೆಗಳಲ್ಲಿ ಆಯಾ ವರ್ಗಗಳ ವಿದ್ಯಾರ್ಥಿಗಳಿಗೆ ದೊರೆಯುವವು.

ಜಿಲ್ಲೆಯ ಕೇಂದ್ರದ ಹೆಸರು	ಜಿಲ್ಲೆಯೊಳಗಿನ ಎಲ್ಲ ವರ್ಗಗಳ ಜನರ ಬಗ್ಗೆ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು	ಜಿಲ್ಲೆಯೊಳಗಿನ ವಿಶಿಷ್ಟ ವರ್ಗಗಳ ಜನರಿಗಾಗಿ ಕಾಯ್ದಿಟ್ಟ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು			
		ಮಾಧ್ಯಮಿಕ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ	ಹಿಂದುಳಿದ ವರ್ಗಗಳ ವಿ. ಗಳ ಬಗ್ಗೆ	ಮುಸಲ್ಮಾನ ವಿ. ಗಳ ಬಗ್ಗೆ	ಒಟ್ಟು
ಧಾರವಾಡ	೨	೧೩	೫	೧೧	೩೧
ಬೆಳಗಾವಿ	೨	೧೩	೫	೬	೨೬
ವಿಜಾಪುರ	೨	೧೦	೫	೭	೨೪
ಕಾರವಾರ	೨	೫	೧*	೩	೧೧
ಒಟ್ಟು	೮	೪೧	೧೬	೨೭	೯೨

* ೧೯೪೩ ನೆಯ ಇಸ್ವಿಯ ಈ ವಿದ್ಯಾರ್ಥಿವೇತನವು ಗಂಡುಮಕ್ಕಳ ಸಲುವಾಗಿ ಕಾಯ್ದಿಡಲ್ಪಟ್ಟಿದೆ.

(೧) ಹಿಂದುಳಿದ ವರ್ಗಗಳಿಗಾಗಿ ಗೊತ್ತುಪಡಿಸಿದ ಒಟ್ಟು ವಿದ್ಯಾರ್ಥಿ ವೇತನಗಳಲ್ಲಿ ನೂರಕ್ಕೆ ೨೦ರಷ್ಟು ವಿದ್ಯಾರ್ಥಿವೇತನಗಳನ್ನು ಹೆಣ್ಣು ಮಕ್ಕಳಿಗಾಗಿ ಕಾಯ್ದಿಡಲಾಗಿದೆ.

ಕಾರವಾರ ಜಿಲ್ಲೆಯಲ್ಲಿ ಈ ಬಗ್ಗೆ ಕಾಯ್ದಿಟ್ಟ ವಿದ್ಯಾರ್ಥಿವೇತನವನ್ನು ಒಂದು ವರ್ಷ ಒಬ್ಬ ವಿದ್ಯಾರ್ಥಿಗೂ ಮರುವರ್ಷ ಒಬ್ಬ ವಿದ್ಯಾರ್ಥಿನಿಗೂ ಕೊಡಬೇಕೆಂದು ಗೊತ್ತಾಗಿದೆ.

(೨) ಮುಸಲ್ಮಾನರಿಗಾಗಿ ಗೊತ್ತುಪಡಿಸಿದ ಒಟ್ಟು ವಿದ್ಯಾರ್ಥಿವೇತನಗಳಲ್ಲಿ ಒಂದನ್ನು ವಿದ್ಯಾರ್ಥಿನಿಯರಿಗಾಗಿ ಕಾಯ್ದಿಡಲಾಗಿದೆ.

೨. ಬೆಳಗಾವಿಯ ಕೇಂದ್ರದ ಪರೀಕ್ಷೆಯ ಭಾಷೆಯು ಮರಾಠಿ ಮತ್ತು ಕನ್ನಡ ಎಂದೂ, ಧಾರವಾಡ, ವಿಜಾಪುರ, ಕಾರವಾರ ಕೇಂದ್ರಗಳಲ್ಲಿ ಕನ್ನಡ ವೊಂದೇ ಪರೀಕ್ಷೆಯ ಭಾಷೆಯೆಂದೂ ಗೊತ್ತಾಗಿದೆ. ಆದರೆ ಮುಸಲ್ಮಾನ ಉಮೇದುವಾರರು ಉರ್ದುವಿನಲ್ಲಿ ಪರೀಕ್ಷೆಗೆ ಕೂಡ್ರಬಹುದು. ಮತ್ತು ಉರ್ದು ಭಾಷೆಯು ಅವರ ಪ್ರಾಂತಿಕ ಭಾಷೆಯೆಂದು ತಿಳಿಯಲಾಗಿದೆ.

೩. ಸ್ಥಾನಿಕ ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು ಪ್ರೆಸಿಡೆಂಟರಾಗಿ ುವ ಒಂದು ಕಮೀಟಿಯ ಮುಖಾಂತರವಾಗಿ ಈ ಪರೀಕ್ಷೆಯು ಪ್ರತಿಯೊಂದು ಿಲ್ಲಾ ಕೇಂದ್ರಗಳಲ್ಲಿ ನಡೆಯುವದು. ಎ. ಕೆ. ಗರ್ಲ್ಸ ಹಾಯಸ್ಕೂಲಿನ ಹೆಡ್ ುಸ್ಟ್ರೆಸರು ಧಾರವಾಡ ಜಿಲ್ಲಾ-ಕೇಂದ್ರ ಅಧ್ಯಕ್ಷರು.

೪. ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ುದ್ರಿಸಿದ ನಮೂನೆಯಲ್ಲಿ (ಫಾರ್ಮಿನಲ್ಲಿ) ತಯಾರಿಸಿ ೧೯೪೩ನೆಯ ಸ್ವಿಯ ಜನವರಿ ತಿಂಗಳ ೫ನೆಯ ತಾರೀಖಿನ ಒಳಗಾಗಿ ಆಯಾ ಕೇಂದ್ರಗಳ ಪ್ರೆಸಿಡೆಂಟರಿಗೆ ಮುಟ್ಟುವಂತೆ ಕಳುಹಿಸಬೇಕು. (ಈ ಅರ್ಜಿಯ ನಮೂನೆ-ಳನ್ನು ಆಯಾ ಕೇಂದ್ರಗಳ ಪರೀಕ್ಷಾ ಕಮೀಟಿಯ ಅಧ್ಯಕ್ಷರಿಗೆ ಅರ್ಜಿಮಾಡಿ ೊಂಡು ಅವರಿಂದ ತರಿಸಿಕೊಳ್ಳಬಹುದು.) ಅರ್ಜಿಯ ಸಂಗಡಲೇ ೧ ರೂ. ಯನ್ನೂ ಕಳುಹಿಸಲೇಬೇಕು. ಅರ್ಥಾತ್ ಮೇಲೆ ಹೇಳಿದ ತಾರೀಖಿನ ದಿವಸ ಥವಾ ಅದಕ್ಕೂ ಮೊದಲೇ ಅರ್ಜಿಯೂ ಫೀ ಹಣವೂ ಅಧ್ಯಕ್ಷರಿಗೆ ಮುಟ್ಟಲೇ ೇಕು. ಆ ತಾರೀಖಿನ್ನು ಮೀರಿ ಬಂದ ಅರ್ಜಿಯನ್ನು ಅಥವಾ ಫೀಯ ಹಣವನ್ನು ್ವೀಕರಿಸಲಿಕ್ಕಿಲ್ಲ. **ಹಿಂದುಳಿದ ವರ್ಗಗಳ ಉಮೇದವಾರರು ಫೀ ಕೊಡುವ ಕಾರಣವಿಲ್ಲ.**

೫. ದೇಶೀಯ ಸಂಸ್ಥಾನಗಳಿಂದ ಬರುವ ಉಮೇದುವಾರರು ವಿದ್ಯಾರ್ಥಿ ೇತನವನ್ನು ಪಡೆಯಲು ಅರ್ಹರಲ್ಲ.

೬. ಅರ್ಜಿಯಲ್ಲಿ ಉಮೇದುವಾರನ ಜಾತಿ, ಉಪಜಾತಿ, ಜನ್ಮ ತಾರೀಖು ಇವನ್ನು ಸ್ಪಷ್ಟವಾಗಿ ಬರೆದಿರಬೇಕು. ವಿಶಿಷ್ಟ ವರ್ಗಗಳ ವಿದ್ಯಾರ್ಥಿ ವೇತನದ ಬಗ್ಗೆ ಕಳುಹಿಸುವ ಅರ್ಜಿಯ ಫಾರ್ಮಿನಲ್ಲಿ ಹೊಸದೊಂದು ಕಲಮನ್ನು ಸೇರಿಸಿ ಅದರಲ್ಲಿ ಅವನ ಪಾಲಕರು ಅಥವಾ ತಂದೆತಾಯಿಗಳು ಕೊಡುತ್ತಿರುವ ಉತ್ಪನ್ನದ ಮೇಲಿನ ಕರ ಮತ್ತು ಭೂಕಂದಾಯ ಇವುಗಳ ವಿವರವನ್ನು ತೋರಿಸಬೇಕು. ಒಂದು ವರ್ಷದಲ್ಲಿ ೨೦೦ ರೂ. ಅಥವಾ ಹೆಚ್ಚು ಉತ್ಪನ್ನದ ಕರವನ್ನು ಅಥವಾ ಭೂಕಂದಾಯವನ್ನು ಕೊಡುವ ಇಲ್ಲವೆ ಉತ್ಪನ್ನದ ಮೇಲಿನ ಕರ ಮತ್ತು ಭೂಕಂದಾಯ ಇವೆರಡೂ ಕೂಡಿ ೨೦೦ ರೂ. ಅಥವಾ ಹೆಚ್ಚು ರಕಮನ್ನು ಕೊಡುವ ಪಾಲಕರುಳ್ಳ ಅಥವಾ ತಂದೆ-ತಾಯಿಗಳ ಮಕ್ಕಳಾಗಿರುವ ಉಮೇದವಾರರು ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಾಗಲಾರರು.

೭. ಉಮೇದುವಾರನ ವಯಸ್ಸು, ಪರೀಕ್ಷೆಯ ವಿಷಯಗಳು ವಿದ್ಯಾರ್ಥಿವೇತನದ ರಕಮು ಮತ್ತು ಅದು ದೊರೆಯುವ ಕಾಲಾವಧಿ ಮುಂತಾದ ವಿವರಣೆಗಳು ಈ ಪರೀಕ್ಷೆಯ ನಿಯಮುಗಳನ್ನು ನೋಡಿದರೆ ಗೊತ್ತಾಗುವವು. ಆಯಾ ಕೇಂದ್ರುಗಳ ಪ್ರೆಸಿಡೆಂಟರಿಗೆ ಅರ್ಜಿಮಾಡಿಕೊಂಡರೆ ಅವರು ಈ ನಿಯಮುಗಳನ್ನು ಕಳುಹಿಸುವರು.

೮. (೧) ಒಂದೇಸವನೆ ಒಂದು ವರ್ಷ ಸಾಲೆಯಲ್ಲಿ ಹಾಜರಿಲ್ಲದಿರುವದು.

(೨) ಸಾಲೆಗಳನ್ನು ಬದಲಿಸುವದು ಮುಂತಾದ ಸಂದರ್ಭಗಳಲ್ಲಿ ವಿಶೇಷ ಅಪ್ಪಣೆಯನ್ನು ಪಡೆದುಕೊಳ್ಳುವದಕ್ಕಾಗಿ ಮಾಡತಕ್ಕ ಅರ್ಜಿಗಳನ್ನು ಆಯಾ ಕೇಂದ್ರುಗಳ ಪ್ರೆಸಿಡೆಂಟರಿಗೆ ಪರಭಾರೆ ಕಳುಹಿಸಿಕೊಡಬೇಕು. ಮತ್ತು ಅವನ್ನು ಸಕಾಲದಲ್ಲಿ ಕಳುಹಿಸಿ ತಕ್ಕ ನಿರ್ಣಯಗಳನ್ನು ಆದಷ್ಟು ಬೇಗನೆ ಪಡೆದುಕೊಂಡಿರಬೇಕು.

ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಕಚೇರಿ, ಧಾರವಾಡ
೨೫ ನವ್ಹಂಬರ ೧೯೪೨

(ಸಹಿ) J. R. Bhandiwad,
ದಕ್ಷಿಣ ಭಾಗದ ಎಜ್ಯುಕೇಶನಲ್
ಇನ್‌ಸ್ಪೆಕ್ಟರರ ಪರವಾಗಿ

ಈ ವರ್ಷದ ಮಿಡಲ್‌ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆ

ವಾರ ಮತ್ತು ತಾರೀಖು	ವೇಳೆ		ವಿಷಯ	ಗುಣಗಳ
	ಇಂದ	ವರೆಗೆ		
ಗುರುವಾರ ೧೯–೨–೧೯೪೬	೧೧–೦	೧೧–೧೫	ಉಮೇದುವಾರರ ಹೆಸರು ಹಚ್ಚಿಕೊಳ್ಳುವದು	
	೧೧–೩೦	೧೨–೩೦	ಅಂಕಗಣಿತ	೧೦೦
	೧–೩೦	೨–೧೫	ಸಾಮಾನ್ಯವಿಜ್ಞಾನ-ಮೊದಲನೆಯ ಕಾಗದ (ಇತಿಹಾಸ ಮತ್ತು ರಾಜಕೀಯ ಭೂಗೋಲ)	೫೦
	೩–೦	೩–೪೫	ಸಾಮಾನ್ಯವಿಜ್ಞಾನ-ಎರಡನೆಯ ಕಾಗದ (ಪ್ರಾಕೃತಿಕ ಭೂಗೋಲ ಮತ್ತು ಶಾಸ್ತ್ರೀಯ ವಿಷಯ)	೫೦
ಶುಕ್ರವಾರ ೨೨–೨–೧೯೪೬	೨–೦	೨–೪೫	ಪ್ರಾಂತಿಕ ಭಾಷೆ ಮೊದಲನೆಯ ಕಾಗದ (ಮೌನವಾಚನ, ಪುನರ್ಲೇಖನ ಮತ್ತು ನಿಬಂಧ)	೫೦
	೪–೦	೪–೪೫	ಪ್ರಾಂತಿಕ ಭಾಷೆ ಎರಡನೆಯ ಕಾಗದ (ವಾಚನ, ಅರ್ಥ ತಿಳಿದುಕೊಳ್ಳುವದು, ಮುಂತಾದವು.)	೫೦

ಧಾರವಾಡ ಜಿಲ್ಲೆಯಲ್ಲಿ ವೆಂಕಾಸಾನಿ ಸ್ಕಾಲರ್‌ಶಿಪ್ಪಿನ ಮತ್ತು ಮಹಮ್ಮಡನ್ ಬರ್ಸರಿ ಫಂಡಿನ ಸ್ಕಾಲರ್‌ಶಿಪ್ಪಿನ ಸಲುವಾಗಿ ನಡೆಯುವ ಪರೀಕ್ಷೆಗಳೂ ಇದೇ ಕಾಲದಲ್ಲಿಯೇ ನಡೆಯುವವು.

(ಸಹಿ) J. R. Bhandiwad,
ದ. ಭಾ. ದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಪರವಾಗಿ

ಪ್ರಕಟನೆ ೨

ಮುಂಬಯಿ ಸರಕಾರೀ ಗಾಝೆಟಿನಲ್ಲಿ ಪ್ರಕಟವಾಗುವ ವಿಷಯಗಳನ್ನು ಹೇಗೆ ಕಡಿಮೆ ಮಾಡಬಹುದು ಎಂಬ ಪ್ರಶ್ನೆಯನ್ನು ಸರಕಾರದವರು ಲಕ್ಷ್ಯ ಪೂರ್ವಕವಾಗಿ ವಿಮರ್ಶೆ ಮಾಡಿನೋಡಿ ಕೊನೆಗೆ ಒಂದು ನಿರ್ಣಯಕ್ಕೆ ಬಂದಿರುವರು. ಮತ್ತು ನಮ್ಮ ವಿದ್ಯಾಖಾತೆಯ ಮಟ್ಟಿಗೆ ಈ ಕೆಳಗೆ ಹೇಳುವ ಎರಡು ವಿಷಯಗಳ ನೋಟೀಸನ್ನು ಇನ್ನು ಮುಂದೆ ಮುಂಬಯಿ ಸರಕಾರಿ ಗ್ಯಾಝೆಟಿನಲ್ಲಿ ಪ್ರಕಟಿಸುವ ಕಾರಣವಿಲ್ಲವೆಂದು ಅವರು ತಮ್ಮ ೧೯೪೨ನೆ ಇಸ್ವಿಯ ಅಕ್ಟೋಬರ ತಿಂಗಳ ೧೩ನೆಯ ತಾರೀಖಿನ S. 6/4687 F ನೆಯ ನಂಬರಿನ ಹುಕುಮಿನಲ್ಲಿ ಸಾದರ ಪಡಿಸಿರುವರು.

೧. ಗಂಡುಮಕ್ಕಳ ಪ್ರಾಯ್ಮರೀ ಸ್ಕೂಲ್ ಸರ್ಟಿಫಿಕೇಟ ಪರೀಕ್ಷೆಯ ಕೇಂದ್ರಗಳು, ಕಾರ್ಯಕ್ರಮ ಮುಂತಾದವು—

೨. ಹೆಣ್ಣುಮಕ್ಕಳ ಪ್ರಾಯ್ಮರಿ ಸ್ಕೂಲ್ ಸರ್ಟಿಫಿಕೇಟ ಪರೀಕ್ಷೆಯ ಕೇಂದ್ರಗಳು, ಕಾರ್ಯಕ್ರಮ ಮುಂತಾದವು—

ಈ ಎರಡೂ ಪ್ರಕಟನೆಗಳನ್ನು ಇನ್ನು ಮುಂದೆ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರು ಪ್ರತಿತಿಂಗಳಿಗೆ ಹೊರಡಿಸುತ್ತಿರುವ ಪ್ರಾಥಮಿಕ ಶಿಕ್ಷಣ ಪತ್ರಿಕೆಯಲ್ಲಷ್ಟೇ ಪ್ರಕಟಿಸಲಾಗುವದು. ಪ್ರಾಥಮಿ ಶಾಲಾ ಶಿಕ್ಷಕ ಶಿಕ್ಷಕಿಯರು ಅವನ್ನು ಓದಿ ತಿಳಿದುಕೊಂಡು ಅದರಂತೆ ಕಾರ್ಯ ನಡೆಯಿಸಬೇಕು.

ಪ್ರಕಟನೆ ೩

ಹಿಂದಿನ ತಿಂಗಳ ಸಂಚಿಕೆಯಲ್ಲಿ (೨೬–೨೭ ನೆಯ ಪುಟಗಳಲ್ಲಿ) ಪ್ರಕಟಿಸಿದಂತೆ ಈ ವರ್ಷ (೧೯೪೩) ದ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಪ್ರಾಯ್ಮರಿ ಸ್ಕೂಲ್ ಸರ್ಟಿಫಿಕೇಟ ಪರೀಕ್ಷೆಗಳ ಪ್ರಶ್ನ ಪತ್ರಿಕೆಗಳಲ್ಲಿ ಬದಲಾವಣೆ ಮಾಡುವದು ಪ್ರಕೃತದ ಮಹಾಯುದ್ಧವೇ ಮೊದಲಾದ ಕಾರಣಗಳಿಂದ ಸಾಧ್ಯವಾಗಲಾರದೆಂದೂ ಆ ಪರೀಕ್ಷೆಗಳು ಹಿಂದಿನಿಂದ ನಡೆದು ಬಂದಿರುವ ಕ್ರಮದಲ್ಲಿಯೇ ನಡೆಯುವವೆಂದೂ ಮೆ. ಡಾಯರೆಕ್ಟರ ಸಾಹೇಬರವರು ತಮ್ಮ S-62 (G)-193-D 8-12-1942 ನೆಯ ನಂಬರಿನ ಪತ್ರದಲ್ಲಿ ಸಾದರಪಡಿಸಿರುವರು.

(ಸಹಿ). **ಜೆ. ಆರ್. ಭಂಡಿವಾಡ**
ಪ. ಭಾ. ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಪರವಾಗಿ,

ಪತ್ರಗಳ ಮುಖ್ಯಾಂಶಗಳು

ಹಾಸ್ಯಕಟ್ಟಿ (ಸಿದ್ದಾಪುರ ತಾಲೂಕು) — ಕನ್ನಡ ಶಾಲೆಯಲ್ಲಿ ಅ. ಡೆ. ಎ. ಇ. ಅವರಾದ ಶ್ರೀಮಾನ್ ಕಾಮತರಾಯರು ೧೪-೧೦-೧೯೨೨ ನೆಯ ದಿವಸ ಊರ ಹಿರಿಯರನ್ನು ಕರೆಯಿಸಿ ವಿಚಾರವಿನಿಮಯ ಮಾಡಲು ಎಲ್ಲರೂ ಒಪ್ಪಿ, ಶಾರದಾ ವಾಚನಾಲಯವನ್ನು ಸ್ಥಾಪಿಸಿರುವರು.

ತಿಳಿಸಿದವರು:— ಶ್ರೀ. ಬಾಳಗಿ ಹನುಮಂತರಾಯರು.

ಅಥಣಿ— ಉರ್ದು ಗಂಡುಮಕ್ಕಳ ಶಾಲೆಯಲ್ಲಿ ೩-೧೦-೧೯೨೨ನೆಯ ದಿವಸ ಗ್ಯಾದರಿಂಗ ಸಮಾರಂಭವಾಯಿತು. ಮೆ|| ಮಾಮಲೇದಾರಸಾಹೇಬರೂ ಮ್ಯುನಿಸಿಪಲ್ ಪ್ರೆಸಿಡೆಂಟರೂ ಇತರಸದ್ಗೃಹಸ್ಥರೂ ಆಗಮಿಸಿದ್ದರು. ವಿದ್ಯಾರ್ಥಿಗಳ ಸಂಭಾಷಣೆ, ಆಟ ಮೊದಲಾದವುಗಳನ್ನು ನೋಡಿ ಆನಂದವನ್ನು ವ್ಯಕ್ತಪಡಿಸಿದರು.

ತಿಳಿಸಿದವರು:— ಹೆಡ್ ಮಾಸ್ತರರು ಉರ್ದು ಗಂಡುಮಕ್ಕಳ ಶಾಲೆ, ಅಥಣಿ.

ಧುಂಡಿಸಿ (ತಾಲೂಕ ಸಿಗ್ಗಾವಿ) — ಇಲ್ಲಿಯ ಕನ್ನಡ ಗಂಡುಮಕ್ಕಳ ಶಾಲೆಯಲ್ಲಿ ಶ್ರೀಮಾನ್ ಪದ್ಮರಾಜ ಉಪಾಧ್ಯ ಇವರ ಹಿರಿಯತನದಲ್ಲಿ ಪಾಲಕರ ದಿನೋತ್ಸವವು ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಹೆಚ್ಚುಕಡಿಮೆ ೨೦೦ ಜನ ಪಾಲಕರು ಬಂದಿದ್ದರು. ಅಲ್ಲದೆ ಶ್ರೀ. ವ್ಹಿ. ಬಿ. ದೇಸಾಯಿ, ಬಿ. ಎ. (ಆನರ್ಸ) ಬಿ. ಟಿ. ಪಿ. ಟಿ. ಡಿ. ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಇದೇ ಕಾಲಕ್ಕೆ ಈ ಭಾಗದ ಅ. ಡೆ. ಎ. ಇ. ರಾದ ಶ್ರೀ. ಶಿಗ್ಗಾವಿ ಇವರೂ ಆಗಮಿಸಿದ್ದರು. ಧುಂಡಿಸಿಕೊಪ್ಪದಲ್ಲಿ ವ್ಯಾಯಾಮ ಸಾಲೆಯನ್ನು ಕಟ್ಟಿಸಬೇಕೆಂದು ಗೊತ್ತಾಯಿತು. ಜನರ ಆಗ್ರಹದ ಮೇರೆಗೆ ಅಡಿಗಲ್ಲುಹಾಕುವ ಕೆಲಸವನ್ನು ಶಾರೀರಿಕ ಶಿಕ್ಷಣದ ನಿರೀಕ್ಷಕರಾದ ಶ್ರೀಮಾನ್ ದೇಸಾಯಿಯವರು ಮಾಡಿದರು. ಈ ವ್ಯಾಯಾಮ ಶಾಲೆಯನ್ನು ಕಟ್ಟಿಸುವದಕ್ಕೆ ಇಲ್ಲಿಯ ಜನರು **ಅರುನೂರಾ ನಾಲ್ವತ್ತು ರೂಪಾಯಿ** ಕೊಡುವೆವೆಂದು ವಾಗ್ದಾನ ಮಾಡಿದರು. ಇಂತಹ ಕಾಲದಲ್ಲಿ ಈ ಕೆಲಸಕ್ಕೆ ಇಷ್ಟು ರೂಪಾಯಿ ಕೊಡುವದಕ್ಕೆ ಒಪ್ಪಿಕೊಂಡದ್ದು ಸ್ತುತ್ಯವೂ ಅನುಕರಣೀಯವೂ ಆಗಿದೆ.

ತಿಳಿಸಿದವರು :— ಶ್ರೀ. ವೀರಪ್ಪ ಬಸಪ್ಪ ಬೆಳವತ್ತಿ, ಹೆ. ಮಾಸ್ತರರು.

ದೇವಗಿರಿ (ಧಾರವಾಡ ಜಿಲ್ಲೆ)— ಊರಲ್ಲಿಯ ಎಲ್ಲ ಶಾಲೆಗಳ ವಿದ್ಯಾರ್ಥಿಗಳ ಗ್ಯಾದರಿಂಗ ಸಮಾರಂಭವು ೭-೧೧-೧೯೨೨ ನೆಯ ದಿವಸ ಶಿರಹಟ್ಟಿಯ

ಶ್ರೀಮಾನ್ ಎಮ್. ಪಿ. ಮಹಿಷಿ ಅವರ ಹಿರಿಯತನದಲ್ಲಿ ಯಶಸ್ವಿಯಾಗಿ ಜರುಗಿತು ಜಾಣ್ಮೆಯನ್ನು ತೋರಿಸಿದ ಬಾಲಬಾಲಿಕೆಯರಿಗೆ ಮೆಚ್ಚುಗೆಗಳನ್ನು ಕೊಡಲಾಯಿತು

ತಿಳಿಸಿದವರು :— ಗ್ಯಾದರಿಂಗ ಕಮೀಟಿಯ ಸೆಕ್ರೆಟರಿಯವರು.

ಹೆಗಡೆ (ಕುಮಟಾ ತಾಲೂಕು)— ಇಲ್ಲಿಯ ಶಾಲೆಯ ಅ. ಮಾಸ್ತರರಾದ ಶ್ರೀಮಾನ್ ಹೆಗಡೆ ಸೀತಾರಾಮರಾಯರು ಸೇವಾನಿವೃತ್ತರಾದರು. ಇವರ ಲೋಕ ಪ್ರಿಯತೆಯನ್ನೂ ಗುಣಾತಿಶಯವನ್ನೂ ವ್ಯವಸಾಯಬಂಧುಗಳು ಕೊಂಡಾಡಿದರು

ತಿಳಿಸಿದವರು :— ಶ್ರೀ. ನೆರಣಿಕರ ಶ್ರೀನಿವಾಸರಾಯರು.

ಶಿರಸಿ— ಈ ಊರಲ್ಲಿ ಶಾರೀರಿಕ ಶಿಕ್ಷಣದ ಟ್ರೇನಿಂಗ್ ಕ್ಲಾಸವು ಶ್ರೀಮಾನ್ ವ್ಹಿ. ಬಿ. ದೇಸಾಯಿ ಸಾಹೇಬರಿಂದ ೧೦-೧೧-೧೯೪೨ ಕ್ಕೆ ಆರಂಭವಾಯಿತು. ಡಿ. ಸ್ಕೂ. ಬೋರ್ಡಿನಲ್ಲಿಯ ೫೯ ಶಿಕ್ಷಕರೂ ೧೦ ಶಿಕ್ಷಕಿಯರೂ ಶಿಕ್ಷಣಹೊಂದಲು ಬಂದಿರುವರು.

ತಿಳಿಸಿದವರು :— ಶ್ರೀ. ಸು. ರಾ. ಸ್ವಾದಿ, ತಾಲೂಕ ಮಾಸ್ತರರು.

ಸುಲ್ತಾನಪುರ (ಗೋಕಾಕ ತಾಲೂಕ)— ೧೬-೧೧-೪೯೪೨ ನೆಯ ದಿವಸ ಊರ ಹಿರಿಯರು ಬಂದು ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಕಂಡು ಆನಂದ ಪಟ್ಟರು. ಶ್ರೀಮಾನ್ ಭದ್ರಶೆಟ್ಟರು ಕವಿತೆಯನ್ನು ಕಲಿಸಿ ತೋರಿಸಿದರು.

ತಿಳಿಸಿದವರು:—ಶ್ರೀ. ಬಿ. ಎ. ಪಾಟೀಲ, ಮಾಸ್ತರರು.

ಮುಗಳಖೋಡ (ಗೋಕಾಕ ತಾಲೂಕ)— ಶಾಲೆಯಲ್ಲಿ ೨೧-೧೦-೪೨ ನೆಯ ದಿವಸ ಈ ಭಾಗದ ಅ. ಡಿ. ಅವರಾದ ಶ್ರೀಮಾನ್ ಮೆಣಸಿ ಸಾಹೇಬರು ಊರ ಹಿರಿಯರನ್ನು ಕರೆಯಿಸಿ ತಿಳಿಸಿ ಹೇಳಿದುದರಿಂದ ಊರವರು ೩೫ ರೂ. ಗಳನ್ನು ಕೂಡಿಸಿ **ಬಲಭೀಮ ವಾಚನಾಲಯ**ವೆಂಬನ್ನು ಸ್ಥಾಪಿಸಿದರು.

ತಿಳಿಸಿದವರು :— ಶ್ರೀ. ಗು. ಶಿ. ಕಿತ್ತೂರ, ಹೆ. ಮಾಸ್ತರರು.

ಆರೇಕುರಹಟ್ಟಿ (ನವಿಲುಗುಂದ ತಾಲೂಕು)—ಶಾಲೆಯ ವಿದ್ಯಾರ್ಥಿಗಳ ಶಾರೀರಿಕ ಚಟುವಟಿಕೆಗಳನ್ನು ಕಂಡು ಶ್ರೀಮಾನ್ ಜಿ. ಜಿ. ಮುಳಗುಂದರಾಯರು ಎರಡು ರೂಪಾಯಿಗಳನ್ನು ಮೆಚ್ಚುಗೆ ಕೊಟ್ಟರು.

ತಿಳಿಸಿದವರು :— ಶ್ರೀ. ಸಿ. ಬ. ಅಂಗಡಿ, ಹೆ. ಮಾಸ್ತರರು.

ಕುಂಬಾರವಾಡಾ (ಕಾರವಾರ ಜಿಲ್ಲೆ)— ಶಾಲೆಯಲ್ಲಿ ೧೮-೧೦-೪೨ ನೆಯ ದಿವಸ ಬಾಲಬಾಲಿಕೆಯರ ನಾಟಕ ಸಂಭಾಷಣೆ ಮೊದಲಾದವುಗಳು ನಡೆದವು. ಶ್ರೀಮಾನ್ ಕಾಮತ ಯಶವಂತರಾಯರ ಹಸ್ತದಿಂದ ಪಾಟಿ-ಪುಸ್ತಕ-ಅಂಗಿ-ಟೊಪ್ಪಿಗೆ ಮೊದಲಾದ ವಸ್ತುಗಳ ಮೆಚ್ಚುಗೆಯನ್ನು ಕೊಡಲಾಯಿತು.

ತಿಳಿಸಿದವರು :— ಶ್ರೀ. ಕಾಮತ ಗೋಪಾಳರಾಯರು.

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

ಹಳ್ಳಿಗಳ ಉದ್ಧಾರ

ಭಾರತದೇಶವು ಹಳ್ಳಿಗಳಿಂದಾದ ದೇಶ. 'ಹಳ್ಳಿಗಳ ಉದ್ಧಾರವಾದರೆ ದೇಶೋದ್ಧಾರವು ತಾನೇ ಆಗುವದು' ಎಂಬುದು ನಮ್ಮ ಮುಂದಿರುವ ದೊಡ್ಡ ಮಾತು. ಈ ಮಾತನ್ನು ಸರಕಾರವೂ ಒಪ್ಪಿದೆ; ದೇಶದ ಮುಂದಾಳುಗಳೂ ಒಪ್ಪಿದ್ದಾರೆ. ಇಷ್ಟರಿಂದಲೇ ಹಳ್ಳಿಗಳ ಉದ್ಧಾರವಾಗಬಹುದೇ? ಆಗದು. ಅದು ಅಷ್ಟು ಸುಲಭವಾಗಿಲ್ಲ. ಹಳ್ಳಿಗಳ ನಿವಾಸಿಗಳು ತಮ್ಮನ್ನು ತಾವೇ ಉದ್ಧಾರ ಮಾಡಿಕೊಳ್ಳಬೇಕು. ಅವರು ಈ ಕೆಳಗಿನ ಸಂಗತಿಗಳನ್ನು ಅಭ್ಯಾಸಮಾಡಿ ಆಚರಣೆಗೆ ತರಬೇಕು.

(೧) ಬಡತನ. ನಮ್ಮ ಹಳ್ಳಿಗಳು ಬಡತನದ ಬೀಡಾಗಿವೆ. ಹಳ್ಳಿಗಳಲ್ಲಿ ಜನರು ಸಾಧ್ಯವಾದಷ್ಟೂ ತಮ್ಮಲ್ಲಿ ದೊರೆಯುವ ಜೀನಸುಗಳನ್ನೆ ಉಪಯೋಗಿಸಿಕೊಳ್ಳಲು ಮೊದಲು ಕಲಿಯಬೇಕು. ತಮ್ಮ ಬೇಡಿಕೆಗಳನ್ನು ಆದಷ್ಟು ಕಡಿಮೆಮಾಡಿಕೊಳ್ಳಬೇಕು. ಆಹಾರದಲ್ಲಿಯೂ ಉಡುಗೆ ತೊಡುಗೆಗಳಲ್ಲಿಯೂ ಇದು ಕಂಡುಬರಬೇಕು. ಮನಸ್ಸಿನ ತೃಪ್ತಿಯೇ ಬಡತನದ ನಿವಾರಣೆಗೆ ಮುಖ್ಯಸಾಧನ. ತೃಪ್ತಿಯೇ ಸಂಪತ್ತು. ಅತೃಪ್ತಿಯೇ ವಿಪತ್ತು (ಬಡತನ).

(೨) ತಕಲಿ ರಾಟಿಗಳಲ್ಲಿ ನೂಲುವ, ನೂಲಿಗೆ ಬಣ್ಣ ಕೊಡುವ ಮತ್ತು ನೇಯುವ ಕೆಲಸವು ನಡೆಯದ ಹಳ್ಳಿಯು ಎಂದೂ ಸುಖಜೀವಿಯಾಗಲಾರದು. ನಮ್ಮ ಹಳ್ಳಿಗಳಲ್ಲಿ ಕುಟ್ಟುವ ಬಟ್ಟೆಬರೆಗಳನ್ನೇ ತೊಡುವೆನೆಂದು ಪ್ರತಿಯೊಬ್ಬನೂ ಪ್ರತಿಜ್ಞೆಮಾಡಿ ಅದರಂತೆ ನಡೆಯಬೇಕು.

(೩) ಬೀಜಗಳನ್ನು ಆರಿಸುವದು ತಕ್ಕ ಗೊಬ್ಬರವನ್ನು ಹಾಕುವದು ಮುಂತಾದ ಒಕ್ಕಲುತನದ ಕೆಲ-ಕೆಲವು ಸಂಗತಿಗಳನ್ನು ಅವರು ಅನುಲಕ್ಷಿಸಬೇಕು. ಒಳ್ಳೆಯ ದನಕರುಗಳ ಪೀಳಿಗೆಯನ್ನು ಹೆಚ್ಚಿಸುವ, ಆಡು ಕುರಿಗಳನ್ನೂ ಕೋಳಿಗಳನ್ನೂ ಸಾಕುವ ಕೆಲಸವನ್ನು ನಮ್ಮವರು ಹೆಚ್ಚು ಕುಶಲತೆಯಿಂದ ಮಾಡಬೇಕು. ಅಕಳ ಹಾಲು ಒಳ್ಳೆಯ ಆಹಾರವೆಂಬುದನ್ನು ಅರಿತು ಗೋರಕ್ಷಣೆಯ ಕಾರ್ಯದಲ್ಲಿ ನಮ್ಮವರು ಹೆಚ್ಚು ಆಸ್ಥೆಯನ್ನು ತೋರಿಸಬೇಕು. ಚಿಕ್ಕಂದು ಹಾಲನುಣಿಸಿ ಸಾಕಿದ ಗೋಮಾತೆ ತನ್ನ ಮಗ ಬಸವಣ್ಣನನ್ನು ಹೊಲದಲ್ಲಿ ದುಡಿಸಿ ಕಾಳು ಬೆಳಿಸಿ ನಮ್ಮ ಜೀವನಕ್ಕೆ ನೆರವಾಗುವಳು.

(೪) ತಾಳೆಯಮರ ಈಚಲ ಗಿಡಗಳನ್ನು ಬೆಳೆಯಿಸಬೇಕು; ಸಿಂದಿಸೆರೆಗಳ ಹುಟ್ಟುವಳಿಗಾಗಿ ಅಲ್ಲ. ಈ ಗಿಡಗಳ ರಸಗಳಿಂದ ಒಳ್ಳೆಯ ಬೆಲ್ಲವಾಗುವದು. ಸೆರೆ ಸಿಂದಿಗಳಿಂದಾಗುವ ಅಪಾಯವನ್ನು ಅರಿತು, ಅವುಗಳಿಂದ ದೂರವಿರಬೇಕು.

(೫) ಆಕಳ ಹಾಲಿನ ತರುವಾಯ ಜೇನುತುಪ್ಪವು ನಮ್ಮ ಆರೋಗ್ಯಕ್ಕೆ ಕಾರಣವಾದ ಒಳ್ಳೆಯ ವಸ್ತು. ಜೇನು ಸಾಕುವ ವ್ಯವಸಾಯವನ್ನು ಕೂಡ ನಮ್ಮ ಹಳ್ಳಿಗಳಲ್ಲಿ ಹೆಚ್ಚು ಶ್ರಮವೂ ವೆಚ್ಚವೂ ಇಲ್ಲದೆ ನಡೆಯಿಸಬಹುದು. ಜೇನುತುಪ್ಪವು ಸವಿಯಾದ ಆಹಾರವೂ ಆರೋಗ್ಯಕರವೂ ಔಷಧವೂ ಆಗಿದೆ.

ನಾವು ಸಾಕಿದ ದನಗಳ ಹಾಲು, ನಾವು ಬಿತ್ತಿ ಬೆಳೆದ ಕಾಳುಕಡಿ, ಬೆಲ್ಲ, ಜೇನು ನಾವೇ ನೂತು ನೆಯ್ದ ಬಟ್ಟೆಗಳು, ಇವನ್ನು ಉಂಡುಟ್ಟು ನಮ್ಮ ಹಳ್ಳಿಗಳು ಸುಖ ಸಮಾಧಾನಗಳಿಂದ ಬಾಳಬೇಕೆಂದು ಮ. ಗಾಂಧೀಜಿಯವರೂ ಹಾರೈಸಿದ್ದಾರೆ.

ವಿನಂತಿ

★

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ ಮಾಸಪತ್ರಿಕೆಯು ಪ್ರತಿತಿಂಗಳ ಕೊನೆಯವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ಶಿಕ್ಷಕರುಗಳಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಅಪೇಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ ಅಂಚೆಯ ಚೀಟಿಗಳನ್ನು ತಮ್ಮ ಲೇಖನದ ಸಂಗಡ ಕಳುಹಿಸಿಕೊಡಬೇಕು.

ಪ್ರಕಾಶಕರಿಗಾಗಿ

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೆ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮಿಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಜನವರಿ ೧೯೪೩ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಮುಂಬಯಿ ಇಲಾಖೆಯಲ್ಲಿ ಶಿಕ್ಷಣ ಪ್ರಸಾರ	೧
೨.	ಟ್ರೇನಿಂಗ್ ಕಾಲೇಜದ ಚಟುವಟಿಕೆಗಳು	೫
೩.	ಬಿನ್ನಹ	೯
೪.	ಆದರ್ಶ ಶಿಕ್ಷಕರಾದ ಶ್ರೀಮಾನ್ ಕುರಡಿ ನಾರಾಯಣರಾಯರು	೧೦
೫.	ಗ್ರಾಮ ವಿಚಾರಣೆ	೧೧
೬.	ಕನ್ನಡ ಮರಾಠಿ ಉರ್ದು ಹೆಣ್ಣು ಮಕ್ಕಳ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆ ೧೯೪೩	೧೪
೭.	ಪ್ರಕಟನೆ ೧ (ಹೆಣ್ಣು ಮಕ್ಕಳ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆ) ..	೧೫
೮.	ಪ್ರಕಟನೆ ೨–೩	೧೭
೯.	ಪತ್ರಗಳ ಮುಖ್ಯಾಂಶಗಳು	೧೮
೧೦.	ಒಂದು ಚಿಕ್ಕ ಕಥೆ (ಪ್ರಬುದ್ಧರಿಗಾಗಿ)	೩೦

ನಾಸಿಕ್ ಜಿಲ್ಲೆ ಚಂದಾ ರೂಪು ನಂದರು ಬೊಂಬಾಯಿಗಳು ಸಾಲ್ಸೆ ಟೆಟಿಗಳು.

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men Dharwar, at his Office.

ಪ್ರಯೋಗಾತ್ಮಕ ಶಿಕ್ಷಣ

★

(ಲೇಖಕರು : ಪ್ರೊ. ಎಸ್. ಬಿ. ಗಜೇಂದ್ರಗಡ, ಬಿ.ಎ., ಬಿ.ಟಿ., ವಿಜಾಪುರ

ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಇರುವ
ದೈನಂದಿನ ಅಭ್ಯಾಪದಲ್ಲಿ— ಕಲಿಸುವ ಕಾರ್ಯದಲ್ಲಿ ಅತ್ಯಂತ ಉಪ-
ಯುಕ್ತವಾಗುವಂತೆ, ವಿದ್ಯಾಖಾತೆಯ ಅಭ್ಯಾಪಪತ್ರಿಕೆ-
ಯನ್ನು ಸಂಪೂರ್ಣವಾಗಿ ಅನುಸರಿಸಿ ಬರೆಯಲ್ಪಟ್ಟಿದೆ.

ಪುಟಗಳು ೩೩೬ ★ ಬೆಲೆ ೨-೪

ಇದು ಮೂರು ಮುಖ್ಯ ಭಾಗಗಳನ್ನೊಳಗೊಂಡಿದೆ.

(೧) ಶೈಕ್ಷಣಿಕ ಮನಃಶಾಸ್ತ್ರವನ್ನು ೧೫೫ ಪುಟಗಳಲ್ಲಿ ವಿವೇಚಿಸಿ (೨) ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನೂ ಪ್ರತ್ಯಕ್ಷವಾಗಿ ಕಲಿಸುವ ಶಾಸ್ತ್ರೀಯ ಪದ್ಧತಿಯನ್ನೂ ವಿವರಿಸಿದೆ. (೩) ಆಧುನಿಕ ಶಿಕ್ಷಣ ಕ್ರಮದ ಮಹತ್ವದ ಅಂಗಗಳಾದ ಶಾರೀರಿಕ ಶಿಕ್ಷಣ, ಡಿಸ್ಟ್ರಿ, ಸಂಘಟನೆ ಮೊದಲಾದ ವಿಷಯಗಳನ್ನು ತಿಳಿಸಿದೆ.

ಶಿಕ್ಷಣದ ಸರ್ವಾಂಗಗಳನ್ನೂ ಸುಲಲಿತವಾದ ಭಾಷೆಯಲ್ಲಿ ಒತ್ತಟ್ಟಿಗೇ
ಸುಂದರವಾಗಿ ಮಂಡಿಸಿದ ಶಾಸ್ತ್ರೀಯ ಗ್ರಂಥವು

ಕನ್ನಡದಲ್ಲಿ ಇದೊಂದೇ!

★

ಕನ್ನಡ-ಇಂಗ್ಲಿಷ್ ಶಾಲೆ-ಕಾಲೇಜುಗಳ ಎಲ್ಲಾ ಪಠ್ಯಪುಸ್ತಕಗಳೂ ಇತರ ಪುಸ್ತಕ
ಸ್ಕೂಲ್ ಸ್ಟೇಶನರಿ ಸಾಮಾನುಗಳೂ ನಮ್ಮಲಿ ಸಿಕ್ಕುತ್ತವೆ.

ಸ್ಟೂಡೆಂಟ್ಸ್ ಓನ್ ಬುಕ್ ಡಿಪೋ, ಧಾರವಾಡ.